
ರಂಜನೆ ಬೋಧನೆ ಪ್ರಚೋದನೆ

ಗೌರಿ ಲಂಕೇಶ್

ಜುಲೈ 16, 2008 ರೂ. 12/-





ಮಗ ಅರಮನೆಗೆ ಹೆತ್ತವರು ಬೀದಿಗೆ







ಯಡ್ಡಿ ಅಲ್ಲ ರೆಡ್ಡಿ ಸರ್ಕಾರ




ಮಾಧ್ಯಮಗಳಿಗೆ ಹಿಟ್ಲರ್ ಟೋಪಿ!

ಕನ್ನಡಕ್ಕೆ ಕುತ್ತು ತಂದ ತೀರ್ಪು

-ಬರಗೂರು ರಾಮಚಂದ್ರಪ್ಪ

ವಿಶೇಷ ಲೇಖನ

ಗಂಡನ ಸೇವೆಯೇ ಬದುಕಿನ ಗುರಿಯೇ?



ಹೋದ ವಾರ ನನ್ನ ಹೈಸ್ಕೂಲ್ ಸ್ನೇಹಿತೆ ನಸ್ರೀನ್ ಫೋನ್ ಮಾಡಿ "ನಾಳೆ ಜಾನೆ ತೂ ಯಾ ಜಾನೆ ನಾ ಸಿನಿಮಾ ರಿಲೀಸ್ ಆಗ್ತಿದೆ. ಬರ್ತೀಯಾ ನೋಡೋಣ?" ಎಂದಳು. ಹೇಗಿದ್ದರೂ ಅವಳನ್ನು ಭೇಟಿ ಆಗಿ ತುಂಬಾ ದಿನಗಳಾಗಿದ್ದರಿಂದ "ok" ಅಂದೆ. "ಹ್ಞಾ, ನಮ್ಮ ಜೊತೆ ಬರೋದಕ್ಕೆ ರೀಟಾ ಮತ್ತು ಜಯಾಳನ್ನು ಕರೆದಿದ್ದೇನೆ" ಅಂದಳು.

ನನಗೆ ಅಚ್ಚರಿಯಾಯಿತು. "ಜಯಾ? ಜಯಾ ಯಾವಾಗ, ಎಲ್ಲಿ ಸಿಕ್ಕಲು ನಿನಗೆ?" ಎಂದೆ.

"ಅದೊಂದು ದೊಡ್ಡ ಕತೆ. ಸಂಜೆ ಫೋನ್ ಮಾಡಿ ಎಲ್ಲಾ ಹೇಳ್ತೀನಿ. ಆದರೆ ನಾಲ್ಕು ಗಂಟೆ ಸರಿಯಾಗಿ ಫೋರಂನಲ್ಲಿ ಭೇಟಿ ಆಗೋಣ. ಒಂದಿಷ್ಟು ತಿಂಡಿ-ಗಿಂಡಿ, ಕಾಫಿ-ಗೀಫಿ ಕುಡಿದು ಎಲ್ಲರೂ ಸಿನಿಮಾ ನೋಡಿ enjoy ಮಾಡೋಣ" ಎಂದ ನಸ್ರೀನ್ ಫೋನ್ ಇಟ್ಟಳು.


ನಾಲ್ಕು ವರ್ಷಗಳ ಹಿಂದೆ ಜಯಾಳಿಗೆ arranged ಮದುವೆಯಾಗಿ ಆಕೆ ಚಿತ್ರದುರ್ಗದಲ್ಲಿನ ತನ್ನ ಗಂಡನ ಮನೆಗೆ ಹೋಗಿದ್ದಳು. ಆ ಮನೆಯಲ್ಲಿ ಗಂಡ, ಅತ್ತೆ, ಮಾವ, ನಾದಿನಿ ಮತ್ತು ಮೈದುನರಿದ್ದರು. ತುಂಬಾ ಲವಲವಿಕೆಯ ಹುಡುಗಿಯಾಗಿದ್ದ ಜಯಾ ಮದುವೆಯಾದ ಕೆಲವೇ ತಿಂಗಳಲ್ಲಿ ತುಂಬಾ ಗಂಭೀರಳಾದಳು. ಅದೊಂದು ದಿನ ನಾವೆಲ್ಲ ಸ್ನೇಹಿತೆಯರು ಭೇಟಿ ಆದಾಗ ಜಯಾಳಲ್ಲಿನ ಈ ಬದಲಾವಣೆಯನ್ನು ಕಂಡು ನಸ್ರೀನ್ "ಓಹೊ, ನಮ್ಮೆಲ್ಲರಿಗಿಂತ ಮುಂಚೆ ನಿನಗೆ ಮದುವೆ ಎಂಬ ಪ್ರಮೋಷನ್ ಸಿಕ್ಕಿದೆ ಅಂತ ಇಷ್ಟೆಲ್ಲಾ ಮೆಚೂರ್ ತರಹ ಪೋಸ್ ಕೊಡಬೇಡಿ ಜಯಾ ಮೇಡಂ ಅವರೆ" ಎಂದು ಚುಡಾಯಿಸಿದ್ದಳು.

"ಇದೆಂತಹ ಪ್ರಮೋಷನ್ ಅಂತ ನಿಂಗೆ ಗೊತ್ತಿಲ್ಲ, ಇರು, ನಿಂಗೂ ಮದುವೆ ಆಗಿ ಬುರ್ಕಾದಲ್ಲಿ ಜೀವನ ಸಾಗಿಸುವಂತಾದಾಗ ನಿನ್ನ ಈ ತಲೆಹರಟೆಯನ್ನು ಹೇಗೆ ಮುಂದುವರೆಸುತ್ತೀಯಾ ಅಂತ ನಾನು ನೋಡ್ತೀನಿ" ಎಂದು ಜಯಾ ಉತ್ತರಿಸಿದ್ದಳು. ಅದನ್ನು ಕೇಳಿ ಜಯಾಳ ಜೀವನದಲ್ಲಿ ಎಲ್ಲವೂ ಸರಿಯಾಗಿಲ್ಲ ಎಂದೆನಿಸಿ "ಏನು ಆಗ್ತಿದೆ ಹೇಳು ಜಯ" ಎಂದು ನಾವೆಷ್ಟೇ ಒತ್ತಾಯ ಪಡಿಸಿದ್ದರೂ ಆಕೆ ಸುಮ್ಮನಿದ್ದಳು.

ಸಂಜೆ ಫೋನ್ ಮಾಡಿದ ನಸ್ರೀನ್ "ಎಲ್ಲರಿಗೂ ಟಿಕೆಟ್ ಬುಕ್ ಮಾಡಿದ್ದೇನೆ. ಒಂದು ಟಿಕೆಟ್‌ಗೆ 250 ರೂಪಾಯಿ, ಅಬ್ಬಬ್ಬಾ " ಎಂದಳು.

"ಅದನ್ನ ಬಿಡು, ಎಲ್ಲಾ share ಮಾಡೋಣ. ಜಯಾ ಬಗ್ಗೆ ಹೇಳ್ತೀನಿ ಅಂದಿದ್ದೆ" ಎಂದು ಅವಳನ್ನು ಜ್ಞಾಪಿಸಿದೆ.

"ಹ್ಞಾ... ಏನ್ ಗೊತ್ತಾ ಶಾರದೆ, ಅವಳ ಗಂಡನ ಮನೇಲಿ ಅವಳಿಗೆ ಯಾವ ಸ್ವಾತಂತ್ರ್ಯಾನೂ ಇರಲಿಲ್ಲವಂತೆ. ಎಲ್ಲಾ ವಿಷಯದಲ್ಲೂ ಅವಳ ಗಂಡ ತನ್ನ ಅಮ್ಮನ ಪರ ವಹಿಸುತ್ತಿದ್ದನಂತೆ. ಯಾಕೆ ಹೀಗೆ ಅಂತ ಜಯಾ ಕೇಳಿದರೆ ನಮ್ಮ ಮನೇಲಿ ಹೀಗೆ ಇರೋದು, ನೀನು adjust ಮಾಡಿಕೊಂಡಿರಬೇಕು ಅಂತಿದ್ದನಂತೆ. ಒಂದು ದಿನ 'ಛಾನಮ್ಮ ಮನೇಲಿ ಕಾಯಿಚಟ್ನಿಗೆ ಒಗ್ಗರಣೆ ಹಾಕ್ತಿದ್ವಿ, ತುಂಬಾ ಚೆನ್ನಾಗಿರುತ್ತೆ' ಅಂದಿದ್ದಕ್ಕೆ ಅವಳ ಅತ್ತೆ 'ಇದು ನಿನ್ನ ಮನೆಯಲ್ಲ, ನಮ್ಮ ಮನೆ' ಅಂದರಂತೆ. ನಮ್ಮ ಜಯಾ ಗೊತ್ತಲ್ಲ, ಮಾತಿನ ಮಲ್ಲಿ, ಆಕೆ ಅಕ್ಕಪಕ್ಕದ ಮನೆಯವರನ್ನು ಮಾತಾಡಿ ಸಿದರೆ ಮನೆಯವರೆಲ್ಲ ಉರಿದು ಬೀಳು ತ್ತಿದ್ದರಂತೆ. 'ನಮ್ಮ ಮನೆ ಗುಟ್ಟನ್ನೆಲ್ಲಾ ಬೇರೆ ಯವರಿಗೆ ಹೇಳ್ತಿಯಾ' ಎಂದು ರೇಗುತ್ತಿದ್ದರಂತೆ. ಜಯಾಳ ಡ್ರೆಸ್, ಸೀರೆಗಳನ್ನೆಲ್ಲಾ ನಾದಿನಿ ತೊಟ್ಟು ಜಡಾಯಿಸುತ್ತಿದ್ದಳಂತೆ. ಇಂತಹ ವಿಷಯಗಳ ಬಗ್ಗೆ ಜಯಾ ತನ್ನ ಗಂಡನ ಮುಂದೆ ದೂರಿದರೆ, ಆತ "ನನ್ನ ಅಪ್ಪ, ಅಮ್ಮ, ತಂಗಿ ತಮ್ಮನ ಬಗ್ಗೆ complaint ಮಾಡಬೇಡ. ನಿನಗಿಂತ ಮುಂಚೆ ಅವರೆಲ್ಲ ನನ್ನ ಜೀವನದಲ್ಲಿ ಇದ್ದವರು' ಎಂದು ಹೇಳುತ್ತಿದ್ದನಂತೆ. ಜಯಾಳ ಗಂಡ ಇವಳಿಗೆಂದು ಒಂದೇ ಒಂದು ಡ್ರೆಸ್ ಕೊಡಿಸದಿದ್ದರೂ ತನ್ನ ಅಮ್ಮ ಮತ್ತು ತಂಗಿಗೆ ಸೀರೆ, ಒಡವೆಗಳನ್ನು ಮಾಡಿಸುತ್ತಿದ್ದನಂತೆ. ಎಂದಾದರೊಮ್ಮೆ ಜಯಾ ಬೆಂಗಳೂರಿನ ತನ್ನ ಅಪ್ಪ- ಅಮ್ಮನ ಮನೆಗೆ ಬಂದರೆ 'ತವರುಮನೆಗೆ ಹೋಗಲು ನನ್ನ ಅಣ್ಣ ದುಡಿದ ಹಣಾನ waste ಮಾಡುತ್ತೀಯಾ' ಎಂದು ನಾದಿನಿ ಮತ್ತು ಮೈದುನ ಜಗಳವಾಡುತ್ತಿದ್ದರಂತೆ. ಮಾವ ತನ್ನ ಮಾತ್ರೆ ತೆಗೆದುಕೊಳ್ಳುವುದನ್ನು ಮರೆತರೆ ಅದು ಜಯಾಳ ತಪ್ಪು, ಹಾಲು ಒಡೆದರೂ ಜಯಾಳ ತಪ್ಪು, ಕೆಲಸದಾಕೆ ಬಾರದಿದ್ದರೂ ಜಯಾಳ ತಪ್ಪು... ಅಂತಹ ಪರಿಸ್ಥಿತಿಯಲ್ಲಿದ್ದ ಜಯಾಳ ನೆರವಿಗೆ ಅವಳ ಅಪ್ಪ-ಅಮ್ಮನೂ ಬರಲಿಲ್ಲ. 'ಹೇಗಾದರೂ ಮಾಡಿ adjust ಆಗು. ನಿನಗೊಂದು ಮಗು ಆದರೆ ಎಲ್ಲಾ ಸರಿಹೋಗುತ್ತೆ' ಎನ್ನುತ್ತಿದ್ದರಂತೆ. ಒಂದು ದಿನ ಮನೆಯಲ್ಲಿ ಯಾರೂ ಇಲ್ಲದಿದ್ದಾಗ ನನಗೆ ಫೋನ್ ಮಾಡಿದ ಜಯಾ ಜೋರಾಗಿ ಅಳಲಾರಂಭಿಸಿದಳು. ಎಲ್ಲವನ್ನು ಹೇಳಿದಳು. ಆಗ ನಾನು 'ಬೆಂಗಳೂರಿಗೆ ಬರುವಷ್ಟು ದುಡ್ಡಿದೆಯಾ? ಮನೆಯಲ್ಲೊಂದು ಚೀಟಿ ಬರೆದು ಹೊರಟು ಬಾ. ಇಲ್ಲೇನಾದರೂ ಮಾಡೋಣ" ಎಂದೆ. ಜಯಾಳಿಗೆ ಈಗ BPO ಒಂದರಲ್ಲಿ ಕೆಲಸ ಕೊಡಿಸಿದ್ದೇನೆ. ಅವಳೀಗ ನಿಧಾನವಾಗಿ ನಮಗೆ ಗೊತ್ತಿದ್ದ ಲವಲವಿಕೆಯ ಜಯಾ ಆಗುತ್ತಿದ್ದಾಳೆ" ಎಂದು ನಸ್ರೀನ್ ಎಲ್ಲವನ್ನೂ ವಿವರಿಸಿದಳು.



"ಅಯ್ಯೋ ಪಾಪ, ಅವಳು ಇಷ್ಟುದಿನ ಯಾಕೆ ಸುಮ್ಮನಿದ್ದಳಂತೆ? ಗಂಡನ ಮನೇಲಿ ತನಗೂ ಹಕ್ಕಿದೆಯೆಂದು, ಎಂದೂ ಪ್ರತಿಭಟಿಸಲಿಲ್ಲವೇ?"

"ಅವಳಿಗೆ ಅಲ್ಲಿ ಉಸಿರಾಡಲು ಬಿಟ್ಟದ್ದೇ ಅವಳ ಅದೃಷ್ಟ! ನೋಡು, ಜಯಾಳ ಗಂಡ, ಅತ್ತೆ ಮತ್ತು ಮಾವ ಎಂದೂ ವರದಕ್ಷಿಣೆ ಕೇಳಲಿಲ್ಲ, ಅವಳನ್ನು ಎಂದೂ ದೈಹಿಕವಾಗಿ ಹಿಂಸಿಸಲಿಲ್ಲ, ಆದರೆ ಅವಳೂ ಮನುಷ್ಯಳೆಂದು ಯಾವತ್ತು ಒಪ್ಪಿಕೊಳ್ಳಲಿಲ್ಲ, ಅವರ ಪ್ರಕಾರ ಸೊಸೆ ಇದ್ದದ್ದು ತಮ್ಮ ಮಗನ ಲೈಂಗಿಕ ತೃಪೆಗೆ ಮತ್ತು ತಮ್ಮೆಲ್ಲರ ಸೇವೆಗೆ ಮಾತ್ರ" ಎಂದಳು ನಸ್ರೀನ್.

ಅವತ್ತು ರಾತ್ರಿ ನಮ್ಮ ಮನೆಯಲ್ಲಿ ಊಟ ಮಾಡಲು ಕಬೀರ್ ಬಂದ. ಅವನಿಗೆಂದೇ ಅಮ್ಮ ಜೀರಾ ರೈಸ್ ಮತ್ತು ರಾಜ್ಮ ಮಾಡಿದ್ದರು. ಅದನ್ನು ನೋಡಿದ ತಲೆಹರಟೆ ತಮ್ಮ ಶಾಂತನು "ಏನು ಮಮ್ಮಿ, ಕಬೀರ್ ನಿನ್ನ ಅಳಿಯ ಅನ್ನೋ ಹಾಗೆ ಸ್ಪೆಷಲ್ ಟ್ರೀಟ್‌ಮೆಂಟು?" ಎಂದು ರೇಗಿಸಿದ.

"ಕಬೀರ್‌ನಂತಹ ಅಳಿಯ ಸಿಕ್ಕರೆ ನನಗಂತೂ ಸಂತೋಷ" ಎಂದು ಹೇಳಿದ ಅಮ್ಮ ನನ್ನತ್ತಲೇ ನೋಡಿದರು. ಅದಕ್ಕೆ ಸರಿಯಾಗಿ ಕಬೀರ್ ಕೂಡ "ನಂದೇನೂ objection ಇಲ್ಲ, ನಾಳೇನೇ ನಿಮ್ಮ ಅಳಿಯ ಆಗಲು ನಾನು ಸಿದ್ಧ. ಏನಂತಿಯಾ ಶಾರು?" ಎಂದು ನನ್ನತ್ತ ತುಂಟನಗೆ ಬೀರಿದ.

"ನೀವೆಲ್ಲಾ ಸುಮ್ಮನಿರುತ್ತೀರಾ? ಅಳಿಯನಿಗೆ ಸ್ಪೆಷಲ್ ಟ್ರೀಟ್‌ಮೆಂಟ್, ಸೊಸೆಗೆ ಬ್ಯಾಡ್ ಟ್ರೀಟ್‌ಮೆಂಟ್ ನಮ್ಮ ಸಮಾಜದಲ್ಲಿ. ಇಂತಹ ಪರಿಸ್ಥಿತಿ ಇರುವಾಗ ಯಾರಿಗೆ ಬೇಕಪ್ಪಾ ಮದುವೆಯ ಗೋಜು" ಎಂದೆ.

"ಶುರು ಮಾಡಿದಳು ಶಾರದೆ ತನ್ನ ಮಹಿಳಾವಾದಿ ಶಾಯರಿಯನ್ನು" ಎಂದು ಶಾಂತನು ಹಾಡುತ್ತಾ ಟೇಬಲ್ ಅನ್ನು ತಬಲಾದಂತೆ ಬಾರಿಸಿದ.

"ಏನು ವಿಷಯ?" ಎಂಬಂತೆ ಕಬೀರ್ ನನ್ನತ್ತ ಹುಬ್ಬೇರಿಸಿದ. ಜಯಾಳ ವೃತ್ತಾಂತದ ಬಗ್ಗೆ ವಿವರಿಸಿದ ನಾನು "ಆದ್ಯಾಕೆ ಇವತ್ತಿಗೂ ಹೆಣ್ಣುಮಕ್ಕಳನ್ನು ಹೆತ್ತವರು ಮತ್ತು ಗಂಡನ ಕಡೆಯವರು, ಇಬ್ಬರೂ ಪರಸ್ಥಳದವಳು ಎಂದು ಭಾವಿಸುತ್ತಾರೆ. ಯಾಕೆ ಎರಡೂ ಮನೆಗಳಲ್ಲಿ ಅವಳ ಸ್ವಂತ ವ್ಯಕ್ತಿತ್ವ, ಜೀವನ ಶೈಲಿ, ಅಭಿಪ್ರಾಯಗಳನ್ನು ನಿರಾಕರಿಸಲಾಗುತ್ತದೆ? ಗಂಡನ ಮನೆಯವರು ಹೇಳಿದಂತೆ, ಆದೇಶಿಸಿದಂತೆ ಅಪೇಕ್ಷಿಸಿದಂತೆ ಜೀವಿಸುವ ಮಹಿಳೆಯ ಮೇಲೆ ಅವರೆಲ್ಲರ ದಬ್ಬಾಳಿಕೆ ಕಡಿಮೆಯಾಗುವ ಬದಲಾಗಿ ಹೆಚ್ಚಾಗುತ್ತದೆ. ಅಷ್ಟೇ ಅಲ್ಲ, ನಾಳೆ ಅವಳು ಕೂಡ ತನ್ನ ಸೊಸೆಯ ಮೇಲೆ ದಬ್ಬಾಳಿಕೆ ಮಾಡುವ ಪ್ರವೃತ್ತಿ ಹೊಂದುತ್ತಾಳೆ. ಇದೊಂದು ವಿಷವೃತ್ತ" ಎಂದೆ.

"ನಿಂಗೊತ್ತಾ ಶಾರು? ಭಾರತದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುವವರ ಸಂಖ್ಯೆಯಲ್ಲಿ 21% ಇಂತಹ ದಬ್ಬಾಳಿಕೆಗೆ ಗುರಿಯಾಗಿರುವ ಗೃಹಿಣಿಯರೇ ಆಗಿರ್ತಾರೆ. ಹಾಗೆಯೇ ವಿಚ್ಛೇದನ ಪಡೆಯುವವರಲ್ಲಿ 50% ಇಂತಹ ಗಂಡನ ಮನೆ ಬೇಡ ಎಂದು ತೀರ್ಮಾನಿಸಿರುವವರೇ ಇರುತ್ತಾರೆ" ಎಂದ ಕಬೀರ್.

"ಅಷ್ಟೇ ಅಲ್ಲ, ಹೀಗೆ ಆತ್ಮಹತ್ಯೆ ಮಾಡಿಕೊಳ್ಳಬಾರದು, ಗಂಡನ ಮನೆಯನ್ನು ಬಿಡಬಾರದು, ಬದಲಾಗಿ ಗಂಡನ ಮತ್ತು ಆತನ ಮನೆಯವರ ಸೇವೆ ಮಾಡುವುದೇ ತಮ್ಮ ಬದುಕಿನ ಗುರಿ ಅಂತ ಹುಡುಗಿಯರಿಗೆ ಹೇಳಿಕೊಡುವ ತರಬೇತಿ ಕೇಂದ್ರಗಳೇ ಈಗ ನಗರಗಳಲ್ಲಿ ತಲೆ ಎತ್ತುತ್ತಿವೆ. ಇವತ್ತು ಇಂಟರ್‌ನೆಟ್‌ನಲ್ಲಿ ಅಂತಹ ಒಂದು ಕೇಂದ್ರದ ಬಗ್ಗೆ ಓದಿದೆ. ಆ ಕೇಂದ್ರ ಭೋಪಾಲ್ ನಗರದಲ್ಲಿದ್ದು ಅಲ್ಲಿಗೆ ಬರುವ ತರುಣಿಯರಿಗೆ ಎಂತಹ ಪಾಠಗಳನ್ನು ಹೇಳಿಕೊಡುತ್ತಿದ್ದಾರೆ ಗೊತ್ತಾ? ಗಂಡನ ಸೇವೆ ಮಾಡುವುದು ಹೇಗೆ, ಗಂಡನ ಮನೆಯವರೊಂದಿಗೆ adjust ಮಾಡಿಕೊಂಡು ಜೀವಿಸುವುದು ಹೇಗೆ, ಅಡುಗೆ, ಅಲಂಕಾರ, ಪ್ರಾರ್ಥನೆ, ಮನೆಯನ್ನು ಚೊಕ್ಕಟವಾಗಿಡುವುದು, ಇಂತಹದ್ದೇ ಕಲೆಗಳನ್ನು ಹೇಳಿಕೊಡುತ್ತಾರಂತೆ. ಇದೆಲ್ಲಾ ಭಾರತೀಯ ಸಂಸ್ಕೃತಿಯಂತೆ. ಅಂದಹಾಗೆ ತಿಂಗಳ ಮೈಲಿಗೆಯಾದಾಗ ಯಾವುದನ್ನೂ ಮುಟ್ಟಕೂಡದು, ಆ ಸಂದರ್ಭದಲ್ಲಿ ಗಿಡ, ಹೂಗಳನ್ನು ಮುಟ್ಟಿದರೆ ಅವು ಸತ್ತು ಹೋಗುತ್ತವೆ, ಗಂಡನ ಪಕ್ಕ ಇದ್ದರೆ ಆತನಿಗೆ ಕಾಯಿಲೆ ಬರುತ್ತೆ ಅಂತೆಲ್ಲಾ ಹೇಳುತ್ತಾರಂತೆ. ಇಂತಹ ಕೇಂದ್ರಗಳಿಗೆ ಅದೆಷ್ಟೋ ಜನ ತಮ್ಮ ಹೆಣ್ಣು ಮಕ್ಕಳನ್ನು ಕಳುಹಿಸುತ್ತಾರಂತೆ. ನಮ್ಮ ಜನರಿಗೆ ಬುದ್ಧಿ ಬರುವುದು ಯಾವಾಗ?" ಅಂದೆ ನಾನು.


"ಅಲ್ಲಾ ಶಾರೂ, ಎಲ್ಲರಿಗೂ homely ಹುಡುಗಿಯರೇ ಹೆಂಡತಿಯಾಗಿ, ಸೊಸೆಯಾಗಿ ಬೇಕಪ್ಪಾ, ನಿನ್ನಂತಹ ಜಗಳಗಂಟಿಯನ್ನು ಕಟ್ಟಿಕೊಂಡರೆ ಏನಾಗುತ್ತೆ ಗೊತ್ತಾ?" ಎಂದು ಶಾಂತನು ನನ್ನನ್ನು ಚುಡಾಯಿಸಿದ.

"ಶಾರೂಳನ್ನು ಮದುವೆ ಆದ್ರೆ ನಾನಂತೂ ಸಂತೋಷವಾಗಿರುತ್ತೇನಪ್ಪ" ಎಂದ ಕಬೀರ್.

"ತಲೆ ಹರಟೆಗಳು..." ಎಂದು ಸುಮ್ಮನಾದೆ.

■ ಶಾರದೆ


ವಾರದ ಜೋಕ್




ನಗರವೊಂದನ್ನು ನಿರ್ವಹಿಸುವುದು ಅತಿ ಸಂಕೀರ್ಣದ ಕೆಲಸ. ಆದರೆ ಇದನ್ನು ಜನಾಗ್ರಹ ಎಂಬ ಸಂಸ್ಥೆಯನ್ನು ಸ್ಥಾಪಿಸಿರುವ ರಮೇಶ್ ರಾಮನಾಥನ್ ಚೆನ್ನಾಗಿ ಕಲಿತಿದ್ದಾರೆ.

-ಇಂಡಿಯಾ ಟುಡೇ ಪತ್ರಿಕಾ ವರದಿಯಲ್ಲಿ

ವಾರದ ವ್ಯಂಗ್ಯ




ಮುಸಲ್ಮಾನರ ಕಗ್ಗೊಲೆಯನ್ನು ಮರೆತು ನೋಡಿದರೆ ನರೇಂದ್ರ ಮೋದಿ ಕುಡಿಯುವ ನೀರು ಮತ್ತು ವಿದ್ಯುತ್ ಸೌಲಭ್ಯಗಳನ್ನು ಜನರಿಗೆ ನೀಡಿದರು. ನನ್ನ ಪ್ರಕಾರ ನೇತೃತ್ವ ಅಂದರೆ ಅದು. ಆದರೆ ಲಾಲೂ ಪ್ರಸಾದ್‌ಯಾದವರನ್ನು ನೋಡಿ. ಅವರೂ ಸಾಧಿಸಿದರು. ಆದರೆ ಅಭಿವೃದ್ಧಿಯ ಬದಲಾಗಿ ಬಡಜನರನ್ನು ಶಕ್ತರನ್ನಾಗಿ ಮಾಡುವಲ್ಲಿ ಯಶಸ್ವಿಯಾದರು. ಹಿಂದುಳಿದವರ, ಕೆಳವರ್ಗದವರ ಮೇಲಿನ ದೌರ್ಜನ್ಯವನ್ನು ತಡೆದರು.



ಆದರೆ ಅವರು ಸೋತಿದ್ದು ಯಾಕೆಂದರೆ ಬಡ ಜನರನ್ನು ಶಕ್ತರನ್ನಾಗಿಸುವುದಕ್ಕಿಂತ ಅಭಿವೃದ್ಧಿ ಮುಖ್ಯ ಎಂಬುದನ್ನು ಅವರು ಅರಿಯದಿದ್ದರಿಂದ

-ಸಲೀಲ್ ಶೆಟ್ಟಿ, ವಿಶ್ವಸಂಸ್ಥೆಯ ಅಧಿಕಾರಿ

ಹೀಗೊಂದು ಸಾವು



2002: ಒಸಾಮಾ ಬಿನ್ ಲಾಡೆನ್ ಸಾವಿನ ಅಂಚಿನಲ್ಲಿದ್ದಾನೆ, ಇನ್ನು ಕೆಲವೇ ದಿನಗಳಲ್ಲಿ ಆತ ಸಾಯುತ್ತಾನೆ ಎಂದು ಅಮೆರಿಕದ ಸಿಐಎ ಅಧಿಕಾರಿಗಳು ಹೇಳುತ್ತಿದ್ದಾರೆ ಎಂದು ಸಿಎನ್‌ಎನ್ ವರದಿ ಮಾಡಿತ್ತು.

2006: ಫ್ರೆಂಚ್ ಗುಪ್ತಚರದ ಮೂಲಗಳನ್ನು ಆಧರಿಸಿ ಫ್ರಾನ್ಸ್‌ನ ಪತ್ರಿಕೆಯೊಂದು ಓಸಾಮಾ ಬಿನ್ ಲಾಡೆನ್ ಟೈಫಾಯಿಡ್ ರೋಗದಿಂದ ನಿಧನ ಹೊಂದಿದ್ದಾನೆ ಎಂದು ವರದಿ ಮಾಡಿತ್ತು.

2008: ಓಸಾಮಾ ಬಿನ್ ಲಾಡೆನ್‌ನ ಮೂತ್ರಪಿಂಡಗಳು ಸಂಪೂರ್ಣವಾಗಿ ನಿಶ್ಶಕ್ತಗೊಂಡಿರುವುದರಿಂದ ಆತ ಈಗ ಸಾವಿನ ಹೊಸ್ತಿಲಿನಲ್ಲಿದ್ದಾನೆ ಎಂದು ಸಿಐಎ ಅಧಿಕಾರಿಗಳು ಹೇಳಿದ್ದಾರೆಂದು ಪ್ರಖ್ಯಾತ ಅಂತರ ರಾಷ್ಟ್ರೀಯ ಪತ್ರಿಕೆ "ಟೈಮ್" ಮೊನ್ನೆ ವರದಿ ಮಾಡಿದೆ.

Quote - Unquote

"ರಾತ್ರಿ ಇಡೀ ರಾಮಾಯಣ ಕೇಳಿದ ಮೇಲೆ ಬೆಳಗ್ಗೆ ರಾಮನಿಗೂ, ಸೀತೆಗೂ ಏನು ಸಂಬಂಧ ಎಂದು ಕೇಳಿದವರಂತೆ ಪ್ರಶ್ನೆ ಕೇಳ್ತಿರಲ್ರಿ? ರಾಮ ಮತ್ತು ಸೀತೆ ಎಲ್ಲೂ ಹೋಗಿಲ್ಲ. ಅವರಿನ್ನೂ ಜೊತೆಯಾಗಿಯೇ ಇದ್ದಾರೆ. ನನ್ನ ಹೆಸರನ್ನೇ ನೋಡಿ"

-ಸೀತಾರಾಂ ಯೆಚೂರಿ, ಸಿಪಿಎಂ ನಾಯಕ, ರಾಮಸೇತು ಕುರಿತಂತೆ ಪತ್ರಕರ್ತರೊಬ್ಬರು ಕೇಳಿದ ಪ್ರಶ್ನೆಗೆ ಉತ್ತರಿಸುತ್ತಾ.

"ಪತ್ರಕರ್ತರನ್ನು ಪೀಡಿಸಲು ಯಾವುದೇ ನೆಲೆ ಇಲ್ಲ. ಆತ ನೆಮ್ಮದಿಯಿಂದ ಬದುಕಲು ಬಿಡಿ. ಇವರು ಒಂದು ಲೇಖನ ಬರೆದದ್ದಕ್ಕೆ ಆತನ ವಿರುದ್ಧ ನೀವು (ಗುಜರಾತ್ ರಾಜ್ಯ) ಕಾನೂನುಕ್ರಮವನ್ನು ಜರುಗಿಸುತ್ತಿದ್ದೀರಿ. ಇದಕ್ಕಿಂತಲೂ ಕೆಟ್ಟದ್ದು ನಮ್ಮ ದೇಶದಲ್ಲಿ ಸಂಭವಿಸುತ್ತಿದೆ. ಪತ್ರಕರ್ತರು ಬರೆಯದಿದ್ದರೆ ಬೇರೆ ಯಾರು ಬರೆಯಬೇಕು? ನಾನೂ ಅವರ ಲೇಖನವನ್ನು ಓದಿದ್ದೇನೆ ಅದರಲ್ಲಿ ಆಕ್ಷೇಪಣೆಯ ವಾದದ್ದು ಏನೂ ಇಲ್ಲ."



ಸುಪ್ರೀಂ ಕೋರ್ಟ್‌ನ ಜಸ್ಟೀಸ್ ಜೆ.ಎಸ್. ಸಿಂಘ್ವಿ ರಾಜಕೀಯ ತಜ್ಞ ಅಶೀಷ್ ನಂದಿಯವರನ್ನು ಬಂಧಿಸಲು ಗುಜರಾತ್ ಪೊಲೀಸು ಮುಂದಾಗುವುದನ್ನ ಖಂಡಿಸಿ

ಕಾಶ್ಮೀರದಲ್ಲಿ ಹಿಂದೂ-ಮುಸಲ್ಮಾನರ ಜಗ್ಗಾಟ



ಕಂಡಹಾಗೆ

■ ಗೌರಿ ಲಂಕೇಶ್

ಎಷ್ಟೇ ಪೆಟ್ಟುಬಿದ್ದರೂ, ಎಷ್ಟು ಬಾರಿ ಸೋತರೂ ಕಾಂಗ್ರೆಸ್ ಪಕ್ಷಕ್ಕೆ ಬುದ್ಧಿ ಬರುವಂತೆ ಕಾಣಿಸುತ್ತಿಲ್ಲ. ಇದಕ್ಕೆ ಲೇಟೆಸ್ಟ್ ಉದಾಹರಣೆ ಆ ಪಕ್ಷವು ಕಾಶ್ಮೀರದಲ್ಲಿ ಮಾಡಿಕೊಂಡಿರುವ ಎಡವಟ್ಟು.

ನೂರು ವರ್ಷಕ್ಕಿಂತಲೂ ಹೆಚ್ಚಿನ ಇತಿಹಾಸವನ್ನು ಹೊಂದಿರುವ ಕಾಂಗ್ರೆಸ್ ಪಕ್ಷ ಕಳೆದ ಎರಡು ದಶಕಗಳಿಂದ ವಿಚಿತ್ರ ಬಿಕ್ಕಟ್ಟನ್ನು ಎದುರಿಸುತ್ತಿದೆ. ಒಂದೆಡೆ ಅದಕ್ಕಿದ್ದ ವಿವಿಧ ವರ್ಗಗಳ ಜನ ಬೆಂಬಲ ಈಗಿಲ್ಲ, ಇನ್ನೊಂದೆಡೆ ಅದರ ಖಾಯಂ ಮತ ಬ್ಯಾಂಕ್‌ಗಳಾಗಿದ್ದ ಹಿಂದುಳಿದವರು ಮತ್ತು ಅಲ್ಪಸಂಖ್ಯಾತರು ಕೂಡ ಈಗ ಕೈಕೊಡುತ್ತಿದ್ದಾರೆ, ಮತ್ತೊಂದೆಡೆ ತನ್ನ ಜಾತ್ಯತೀತ ಮತ್ತು ಜನಪರ ಸಿದ್ಧಾಂತವನ್ನು ಕಾಂಗ್ರೆಸ್ ತೊರೆದಿದೆ. ಹಿಂದೆಲ್ಲಾ ಎಲ್ಲಾ ವಿಷಯಗಳ ಬಗ್ಗೆ ಸ್ಪಷ್ಟ ನಿಲುವು ಹೊಂದಿದ್ದ ಕಾಂಗ್ರೆಸ್ ಈಗ ಯಃಕಶ್ಚಿತ್ ಗೊಂದಲದ ಗೂಡಾಗಿದೆ. ಏನನ್ನು ಮಾಡಿದರೆ ಯಾರ ಬೆಂಬಲ ಪಕ್ಷಕ್ಕೆ ಸಿಗುತ್ತದೆ ಎಂಬ ಲೆಕ್ಕಾಚಾರದಲ್ಲೇ ಸಾಗಿರುವ ಕಾಂಗ್ರೆಸ್ ಯಾವುದರ ಬಗ್ಗೆಯೂ ಸ್ಪಷ್ಟ ನಿಲುವನ್ನು ತಾಳಲಾರದೆ ಒಂದಾದ ಮೇಲೊಂದರಂತೆ ಎಡವಟ್ಟುಗಳನ್ನು ಮಾಡಿಕೊಳ್ಳುತ್ತಿದೆ. ತಾನು ಜಾತ್ಯತೀತ ಪಕ್ಷ ಎಂದು ಹೇಳಿಕೊಳ್ಳುತ್ತಲೇ ಕೋಮುವಾದಿ ಬಿಜೆಪಿ ಪಕ್ಷದ ನಕಲಿ ಪ್ರತಿಯಂತೆ ವರ್ತಿಸುತ್ತದೆ. ತಾನು ದಲಿತರ ಪರ ಎಂದು ಬಿಂಬಿಸಿಕೊಳ್ಳಲು ಹೋಗಿ ಮಲ್ಲಿಕಾರ್ಜುನ ಖರ್ಗೆ ತರಹದ ನಿರುಪದ್ರವಿಗಳಿಗೆ ಅಧಿಕಾರದ ಹುದ್ದೆಯನ್ನು ನೀಡಿ ಮತ ಪೆಟ್ಟಿಗೆಯಲ್ಲಿ ಜನರಿಂದ ಗೂಸಾ ತಿನ್ನುತ್ತದೆ. ತಾನು ಅಲ್ಪಸಂಖ್ಯಾತರ ಪರ ಎಂದು ಹೇಳುತ್ತಲೇ ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ ನಡೆದಾಗ ಆ ಜಾಗದಿಂದಲೇ ಕಂಬಿ ಕೀಳುತ್ತದೆ. ತಾನು ಬಡವರ ಪರ ಎಂದು ಪುಂಗಿ ಊದುತ್ತಲೇ ಬಡವರ ಬದುಕನ್ನು ಇನ್ನಷ್ಟು ನರಕಮಯವಾಗಿಸುವ ಆರ್ಥಿಕ ನೀತಿಗಳನ್ನು ಜಾರಿಗೆ ತರುತ್ತದೆ. ಇಂತಹ ಕಾಂಗ್ರೆಸ್ ಅನ್ನು ಯಾಕೆ ಬೆಂಬಲಿಸಬೇಕು ಎಂಬ ಪ್ರಶ್ನೆ ಈಗ ಎಲ್ಲಾ ವರ್ಗದವರನ್ನು ಕಾಡುತ್ತಿದೆ.

ಇದಕ್ಕೆ ವಿರುದ್ಧವಾಗಿ ಇತರೆ ಪಕ್ಷಗಳ ಕಾರ್ಯತಂತ್ರವನ್ನು ನೋಡಿ. ಭಯೋತ್ಪಾದನೆ ಎಂಬ ಗುಮ್ಮ ತೋರಿಸಿ, ಹಿಂದೂ ಧರ್ಮ ರಕ್ಷಣೆ ಎಂಬ ನಾಟಕವಾಡಿ ಬಿಜೆಪಿ ತನ್ನ ಶಕ್ತಿಯನ್ನು ವೃದ್ಧಿಸಿಕೊಳ್ಳುತ್ತಲೇ ಸಾಗುತ್ತಿದೆ. ಎರಡು ದಶಕಗಳ ಹಿಂದೆ ಬರೀ ಪುರೋಹಿತಶಾಹಿಗಳ ಪಕ್ಷವಾಗಿದ್ದ ಬಿಜೆಪಿ ಇಂದಿಗೂ ತನ್ನ ಅಂತರಾಳದಲ್ಲಿ ಹಾಗೆಯೇ ಉಳಿದಿದೆ. ಆದರೆ ಅದು ಸೃಷ್ಟಿಸಿರುವ ಪಾತ್ರಗಳು, ರೂಪಿಸಿರುವ ದೃಶ್ಯಗಳು, ಆಯ್ಕೆ ಮಾಡಿರುವ ಪಾತ್ರಧಾರಿಗಳು... ಇವೆಲ್ಲವನ್ನು ಎಷ್ಟು ಕರಾರುವಾಕ್ಕಾಗಿ ನಡೆಸಿದೆ ಎಂಬುದಕ್ಕೆ ರಾಜ್ಯದಲ್ಲಿ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಬಿಜೆಪಿ ಎಲ್ಲಾ ಮೀಸಲು ಕ್ಷೇತ್ರಗಳಲ್ಲಿ ಗೆದ್ದಿತಲ್ಲದೆ, ಮುಸಲ್ಮಾನರು ನಿರ್ಣಾಯಕ ಪಾತ್ರ ವಹಿಸುವ ಕ್ಷೇತ್ರಗಳಿಂದಲೂ ಗೆದ್ದಿತು.


ಹಾಗೆಯೇ ಮಾಯಾವತಿಯ ಬಿಎಸ್‌ಪಿ ಕೂಡ. ಮೊದಮೊದಲು ದಲಿತರನ್ನೇ ಅವಲಂಬಿಸಿದ್ದ ಬಿಎಸ್‌ಪಿ ಕಾಲಕ್ರಮೇಣ ಹಿಂದುಳಿದವರನ್ನು ತನ್ನ ತೆಕ್ಕೆಗೆ ಸೆಳೆದುಕೊಂಡಿತು. ಅದು ಸಾಲದೆಂದು ಗೊತ್ತಾದಾಗ ಮೇಲುಜಾತಿಯವರೊಂದಿಗೆ ಕೈಜೋಡಿಸಿ 'ಸೋಷಿಯಲ್ ಇಂಜಿನಿಯರಿಂಗ್' ಎಂಬ ಹೊಸ ರಾಜಕೀಯ ತಂತ್ರವನ್ನೇ ಜಾರಿಗೆ ತಂದಿತು. ದೇವೇಗೌಡರೂ ಸಹ ಇಂತಹ ರಾಜಕೀಯ ಚಾಣಾಕ್ಷತೆಯಲ್ಲಿ ಕಡಿಮೆ ಏನಿಲ್ಲ, ಇಲ್ಲವೆಂದರೆ ಅವರ ಪಕ್ಷ ಈ ಬಾರಿ 28 ಸ್ಥಾನಗಳನ್ನು ಗೆಲ್ಲಲು ಸಾಧ್ಯವಾಗುತ್ತಿತ್ತೇ?

ಆದರೆ ಕಾಂಗ್ರೆಸ್ ಮಾತ್ರ ವಿಭಿನ್ನ. ಅತ್ತ ಸಿದ್ಧಾಂತವೂ ಇಲ್ಲ, ಇತ್ತ ಕಾರ್ಯತಂತ್ರವೂ ಇಲ್ಲ, ಜೊತೆಗೆ ಯಾವ ಯೋಜನೆಯೂ ಇಲ್ಲದ ಪಕ್ಷವೊಂದು ನಮ್ಮ ದೇಶದಲ್ಲಿದೆ ಎಂದರೆ ಅದು ಖಂಡಿತವಾಗಿಯೂ ಕಾಂಗ್ರೆಸ್ ಪಕ್ಷ.

ಈಗ ಕಾಶ್ಮೀರದಲ್ಲಿ ಭುಗಿಲೆದ್ದಿರುವ ವಿಷಯವನ್ನೇ ತೆಗೆದುಕೊಳ್ಳಿ, ತಾನೇನು ಮಾಡಬೇಕೆಂಬುದರ ಬಗ್ಗೆ ಸ್ಪಷ್ಟ ಚಿಂತನೆ ಇಲ್ಲದ ಕಾಂಗ್ರೆಸ್ ಕಾಶ್ಮೀರದಲ್ಲಿ ಬಿಜೆಪಿ ತೋಡಿದ್ದ ಗುಂಡಿಗೆ ಬಿದ್ದಿದೆ. ಅದನ್ನು ನೋಡಿ ಚೆಡ್ಡಿಗಳು ಸಹಜವಾಗಿಯೇ ಸಂತೋಷಗೊಂಡಿದ್ದಾರಲ್ಲದೆ ಅದರಿಂದ ಇನ್ನು ನಾಲ್ಕು ತಿಂಗಳಲ್ಲಿ ಆ ರಾಜ್ಯದಲ್ಲಿ ನಡೆಯಲಿರುವ ಚುನಾವಣೆಯಲ್ಲಿ ತಾವೆಷ್ಟು ಲಾಭ ಪಡೆಯಬಹುದೆಂದು ಲೆಕ್ಕ ಹಾಕುತ್ತಿದ್ದಾರೆ. ಅದರ ಅಂಗವಾಗಿಯೇ ಮೊನ್ನೆ 'ಭಾರತ್ ಬಂದ್'ಗೆ ವಿಶ್ವಹಿಂದೂ ಪರಿಷತ್ ಕರೆ ನೀಡಿದ್ದು.

ಪ್ರಸ್ತುತ ವಿವಾದದ ಕೇಂದ್ರಬಿಂದು ಅಮರನಾಥ್ ಗುಹೆ. ಪ್ರಾಕೃತಿಕ ಬದಲಾವಣೆಗಳಿಂದ ಅಲ್ಲಿನ ಗುಹೆಯೊಂದರಲ್ಲಿ ಹಿಮದ ಗುಡ್ಡೆ ರಚನೆಯಾಗುತ್ತದೆ. ಆ ಗುಡ್ಡೆಯನ್ನು ಶಿವಲಿಂಗ ಎಂದು ಭಾವಿಸುವ ಜನ ಹಲವಾರು ದಶಕಗಳಿಂದ ಅಲ್ಲಿಗೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸುತ್ತಿದ್ದಾರೆ. ಮೊದಮೊದಲು ಸುತ್ತಮುತ್ತಲಿನ ಪ್ರದೇಶಗಳಲ್ಲಿನ ಹಿಂದೂಗಳು ಕಡಿಮೆ ಸಂಖ್ಯೆಯಲ್ಲಿ ಅಲ್ಲಿಗೆ ಭೇಟಿ ನೀಡುತ್ತಿದ್ದರಲ್ಲದೆ ವರ್ಷದಲ್ಲಿ ಎರಡು ವಾರಗಳ ಅವಧಿಗೆ ಅಮರನಾಥ್ ಯಾತ್ರೆ ಸೀಮಿತಗೊಂಡಿತ್ತು.

ಆದರೆ ತೊಂಭತ್ತರ ದಶಕದಲ್ಲಿ ಬಿಜೆಪಿ ಎಲ್ಲೆಡೆ ತನ್ನ ಹಿಂದೂತ್ವ ಸಿದ್ಧಾಂತವನ್ನು ಹರಡಲಾರಂಭಿಸಿತು. ಅಷ್ಟು ಹೊತ್ತಿಗೆ ಬಿಜೆಪಿಯ ಸಹ ಪಯಣಿಗ ಜಮ್ಮು ಮತ್ತು ಕಾಶ್ಮೀರದ ರಾಜ್ಯಪಾಲ ಜಗಮೋಹನ್ ತೆಗೆದುಕೊಂಡಿದ್ದ ನಿರ್ಧಾರದಿಂದಾಗಿ ಕಾಶ್ಮೀರಿ ಪಂಡಿತ ಜನಾಂಗದವರು ಕಾಶ್ಮೀರ ಕಣಿವೆಯನ್ನು ತೊರೆದು ಜಮ್ಮುವಿನ ನಿರಾಶ್ರಿತ ಶಿಬಿರಗಳಲ್ಲಿ ನೆಲೆಸಿದರು. ಅವರನ್ನೆಲ್ಲ ಪ್ರತಿ ವರ್ಷ



ಜಮ್ಮುವಿನಲ್ಲಿ ಹಿಂದೂಗಳ ಪ್ರತಿಭಟನೆ

ಅಮರನಾಥ್ ಗುಹೆಗೆ ಹೊರಡಿಸಲಾರಂಭಿಸಿದ ಚೆಡ್ಡಿಗಳು ಅಲ್ಲಿಯತನಕ ಕೋಮಿನ ಸೋಂಕು ಇಲ್ಲದ ಯಾತ್ರೆಗೆ ಧರ್ಮ ದ್ವೇಷದ ಲೇಪವನ್ನು ಹಚ್ಚಿದರು. ವರ್ಷದಿಂದ ವರ್ಷ ದೇಶದ ಬೇರೆ ಕಡೆಯಿಂದಲೂ ಜನ ಬರಲಾರಂಭಿಸಿ ಯಾತ್ರಿಕರ ಸಂಖ್ಯೆ ಹೆಚ್ಚಾದಾಗ ಯಾತ್ರೆಯ ಅವಧಿಯನ್ನು ತೊಂಭತ್ತರ ದಶಕದಲ್ಲಿ ಎರಡು ವಾರಗಳಿಂದ ಒಂದು ತಿಂಗಳ ಅವಧಿಗೆ ವಿಸ್ತರಿಸಲಾಯಿತು. ಅದೇ ಹೊತ್ತಿಗೆ ತೀವ್ರಗೊಂಡಿದ್ದ ಭಯೋತ್ಪಾದನೆಯಿಂದಾಗಿ ಕಾಶ್ಮೀರಿಗಳು ಅವಲಂಬಿಸಿದ್ದ ಪ್ರವಾಸೋದ್ಯಮವೂ ಕುಗ್ಗಲಾರಂಭಿಸಿತು. ಆಗ ಯಾತ್ರೆಯ ಅವಧಿಯನ್ನು ವಿಸ್ತರಿಸಿದ್ದರಿಂದ ಅಲ್ಲಿನ ಕೂಲಿಗಳಿಗೂ ವ್ಯಾಪಾರಿಗಳೂ ಲಾಭ ಹೆಚ್ಚಾಗಿದ್ದರಿಂದ ಸ್ಥಳೀಯ ಮುಸಲ್ಮಾನರೂ ಆ ಕ್ರಮವನ್ನು ಸ್ವಾಗತಿಸಿದ್ದರು.

ಇದು ಹೀಗೆ ಮುಂದುವರೆಯುತ್ತಿರುವಾಗ ನಮ್ಮ ಸಂವಿಧಾನದಲ್ಲಿ ಕಾಶ್ಮೀರಕ್ಕೆ ವಿಶೇಷ ಸ್ಥಾನ ನೀಡಿರುವ ಕಲಂ 370 ರ ವಿರುದ್ಧ ಅರಚಾಡುತ್ತಾ ಬಿಜೆಪಿಯು ಎಲ್ಲೆಡೆ ಕೋಮುದ್ವೇಷ ಬಿತ್ತುತ್ತಾ, ಅಯೋಧ್ಯೆಯಲ್ಲಿ



ಕಾಶ್ಮೀರದಲ್ಲಿ ಮುಸಲ್ಮಾನರ ಪ್ರತಿಭಟನೆ

ರಾಮಮಂದಿರ ಕಟ್ಟುತ್ತೇವೆಂದು ಶಪಥ ಮಾಡುತ್ತಾ, ಮುಸಲ್ಮಾನರ ವಿರುದ್ಧ ಕೆಂಡಕಾರುತ್ತಾ ಬಂದಿದ್ದ ಬಿಜೆಪಿ 1999 ರಲ್ಲಿ ಇತರೆ ಪಕ್ಷಗಳಿಗಿಂತ ಹೆಚ್ಚು ಸ್ಥಾನಗಳನ್ನು ಪಡೆದು 13 ಪಕ್ಷಗಳೊಂದಿಗೆ ಜೊತೆಗೂಡಿ NDA ಸರ್ಕಾರವನ್ನು ದೆಹಲಿಯಲ್ಲಿ ಸ್ಥಾಪಿಸಿತು.

ಆಗ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ರೂಪಿಸಿದ ಕುತಂತ್ರದ ಕೂಸೇ ಶ್ರೀ ಅಮರನಾಥ್ ಶ್ರೈನ್ ಬೋರ್ಡ್ (ಎಸ್‌ಎಎಸ್‌ಬಿ). ಅಲ್ಲಿಯತನಕ ರಾಜ್ಯ ಸರ್ಕಾರವೇ ನಡೆಸಿಕೊಂಡು ಬಂದಿದ್ದ ಅಮರನಾಥ್ ಯಾತ್ರೆಯ ಜವಾಬ್ದಾರಿಯನ್ನು ಬಿಜೆಪಿ ಸೃಷ್ಟಿಸಿದ SASB ಗೆ ವಹಿಸಿದ ಕೇಂದ್ರ ಸರ್ಕಾರ, ಆ ಬೋರ್ಡಿನ ಮುಖ್ಯಸ್ಥನ ಸ್ಥಾನದಲ್ಲಿ ರಾಜ್ಯಪಾಲರನ್ನು ಕೂರಿಸಿತು.

ಸಹಜವಾಗಿಯೇ ಇದು ಕಾಶ್ಮೀರದ ಮುಸಲ್ಮಾನರನ್ನು ಕೆರಳಿಸಿತು. ಮೊದಲನೆಯದಾಗಿ ಇದು ನಮ್ಮ ಸಂವಿಧಾನದ ಉಲ್ಲಂಘನೆಯಾಗಿತ್ತಲ್ಲದೆ, ಎರಡನೆಯದಾಗಿ ಒಂದು ಧಾರ್ಮಿಕ ಸಂಗತಿ ಮೇಲೆ ಕೇಂದ್ರ ಸರ್ಕಾರವೇ ರಾಜ್ಯಪಾಲನ ಮೂಲಕ ಅಧಿಕಾರವನ್ನು ಚಲಾಯಿಸುವ ಹಕ್ಕನ್ನು ಪಡೆದುಕೊಂಡಿತ್ತು.

ಸ್ವಾತಂತ್ರ್ಯ ಬಂದಾಗಿನಿಂದಲೂ ಕಾಶ್ಮೀರಿಗಳಿಗೆ ಸ್ವಯಂ ನಿರ್ಧಾರಾಧಿಕಾರವನ್ನು (self determination) ನಿರಾಕರಿಸುತ್ತಾ ಬಂದಿರುವ, ಜೊತೆಜೊತೆಯಲ್ಲಿ ಸೈನ್ಯ ಮತ್ತು ಪೊಲೀಸರ ಮೂಲಕ ದೌರ್ಜನ್ಯ ನಡೆಸುತ್ತಿರುವ ಭಾರತ ಸರ್ಕಾರದ ಬಗ್ಗೆ ಕಾಶ್ಮೀರಿಗಳಿಗೆ ಅಪನಂಬಿಕೆ. ಹಾಗಿದ್ದಾಗ ಅಮರನಾಥವನ್ನು ರಾಜ್ಯದ ಹಿಡಿತದಿಂದ ಪಡೆದು, ಅದನ್ನು ಕೇಂದ್ರ ಸರ್ಕಾರದ ಗುಮಾಸ್ತನಂತಿರುವ ರಾಜ್ಯಪಾಲನಿಗೆ ಕೊಟ್ಟು, ಅದರಲ್ಲೂ ಆತ ಹಿಂದೂ ಧರ್ಮದವನಾಗಿದ್ದರೆ ಆತನೆ ಅದರ ಮುಖ್ಯಸ್ಥನಾಗಿರಬೇಕು ಎಂದು ಕಾನೂನು ಮಾಡಿದರೆ, ನಿಧಾನವಾಗಿ ಇಡೀ ರಾಜ್ಯದ ವ್ಯವಸ್ಥೆಯನ್ನೇ ಪರೋಕ್ಷವಾಗಿ ಕೇಂದ್ರದ ಹಿಡಿತಕ್ಕೆ ತೆಗೆದುಕೊಳ್ಳುವ ತಂತ್ರದ ಮುನ್ಸೂಚನೆ ಇದು ಎಂಬುದು ಕಾಶ್ಮೀರಿಗಳಿಗೆ ಅರ್ಥವಾಯಿತು.

ಆದರೆ ಆಗ ಇದಕ್ಕಿಂತಲೂ ದೊಡ್ಡ ಸಮಸ್ಯೆಗಳನ್ನು ಕಾಶ್ಮೀರಿಗಳು ಎದುರಿಸುತ್ತಿದ್ದರಿಂದ ಇಷ್ಟೊಂದು ಗಲಭೆಗಳೆದ್ದಿರಲಿಲ್ಲ. ಮೂರು ವರ್ಷಗಳ ಕಾಲ ಹೀಗೆ ಮುಂದುವರೆದು 2003 ರಲ್ಲಿ ಅಂದಿನ ಪ್ರಧಾನಿ ವಾಜಪೇಯಿ ಎಸ್.ಕೆ. ಸಿನ್ಹಾ ಎಂಬ ಮಾಜಿ ಸೈನ್ಯಾಧಿಕಾರಿಯನ್ನು ಜಮ್ಮು ಮತ್ತು ಕಾಶ್ಮೀರದ ರಾಜ್ಯಪಾಲರನ್ನಾಗಿ ನೇಮಿಸಿದರು. ಅಧಿಕಾರ ಸ್ವೀಕರಿಸಿದ ದಿನದಿಂದಲೇ ಈ ಸಿನ್ಹಾ ತನ್ನ ಹಿಂದೂತ್ವ ಅಜೆಂಡಾವನ್ನು ಕಾಶ್ಮೀರದಲ್ಲಿ ಕಾರ್ಯರೂಪಕ್ಕೆ ತರಲಾರಂಭಿಸಿದ. ಅವುಗಳಲ್ಲಿ ಒಂದಾಗಿದ್ದದ್ದು: ಪ್ರತಿವರ್ಷ ಅಮರನಾಥ್ ಯಾತ್ರೆಗೆ ಬರುವ ಜನರಿಗೆ ಸೌಲಭ್ಯಗಳನ್ನು ಒದಗಿಸಲು ನೂರು ಎಕರೆ ಅರಣ್ಯ ಪ್ರದೇಶವನ್ನು SASB ಗೆ ರಾಜ್ಯ ಸರ್ಕಾರ ಕೊಡಬೇಕೆಂಬುದು.

ಆಗ ಪಿಡಿಪಿ ಪಕ್ಷದ ಮುಫ್ತಿ ಮೊಹಮದ್ ಸಯೀದ್ ಮುಖ್ಯಮಂತ್ರಿಯಾಗಿದ್ದು, ನೂರು ಎಕರೆ ಜಾಗೆಯನ್ನು ಹಿಂದೂ ಸಂಘಟನೆಯೊಂದಕ್ಕೆ ರಾಜ್ಯ ಸರ್ಕಾರ ನೀಡಿದರೆ ಆಗುವ ಅನಾಹುತಗಳನ್ನು ಅರಿತು ಅದನ್ನು ಮುಂದೂಡುತ್ತಲೇ ಬಂದರು. ಪಿಡಿಪಿ ಮತ್ತು ಕಾಂಗ್ರೆಸ್ ನಡುವಿನ ಒಪ್ಪಂದದಂತೆ 2005 ರಲ್ಲಿ ಮುಫ್ತಿ ಜಾಗಕ್ಕೆ ಕಾಂಗ್ರೆಸ್‌ನ ಗುಲಾಮ್ ನಬಿ ಆಜಾದ್ ಬಂದರು. ಮೂಲತಃ



ಅಮರನಾಥ್ ಯಾತ್ರೆಯ ಯಾತ್ರಿಕರು

ಜಮ್ಮು ಪ್ರದೇಶದ ದೋಡಾ ಜಿಲ್ಲೆಯವರಾದ ಆಜಾದ್ ಆ ರಾಜ್ಯದ ಪ್ರಥಮ ಕಾಶ್ಮೀರೇತರ ಮುಖ್ಯಮಂತ್ರಿ. ಅಷ್ಟೇ ಅಲ್ಲ, ಆಜಾದ್ ಆ ಹುದ್ದೆಯನ್ನು ಅಲಂಕರಿಸಲು ಸಾಧ್ಯವಾಗಿದ್ದು ಆತ ಜನಪ್ರಿಯ ಮತ್ತು ಜನಪರ ವ್ಯಕ್ತಿ ಎಂಬ ಕಾರಣಕ್ಕಲ್ಲ; ಬದಲಾಗಿ ಆತ ಕಾಂಗ್ರೆಸ್ ಪಕ್ಷದ ಹೈಕಮಾಂಡಿಗೆ ಅತಿ ನಿಷ್ಠೆ ಹೊಂದಿರುವ ವ್ಯಕ್ತಿ ಎಂಬ ಕಾರಣಕ್ಕೆ. ಇದೆಲ್ಲದರ ಬಗ್ಗೆಯೂ ಕಾಶ್ಮೀರಿಗಳಿಗೆ ಅಸಮಾಧಾನವಿತ್ತು.

ಇಲ್ಲಿ ಇನ್ನೊಂದು ಅಂಶವನ್ನು ಗಮನಿಸಬೇಕು. ಜಮ್ಮು ಮತ್ತು ಕಾಶ್ಮೀರದಲ್ಲಿ ಕಳೆದ ಬಾರಿ 2002 ರಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ಕೇವಲ 30% ಜನ ತಮ್ಮ ಮತ ಚಲಾಯಿಸಿದ್ದರು. ಒಟ್ಟು 87 ಸ್ಥಾನಗಳಲ್ಲಿ ಫರೂಕ್ ಅಬ್ದುಲ್ಲಾ ನೇತೃತ್ವದ ನ್ಯಾಷನಲ್ ಕಾನ್ಫರೆನ್ಸ್ ಪಕ್ಷ 28 ಸ್ಥಾನಗಳನ್ನು ಗೆದ್ದಿದ್ದರೆ, ಬಿಜೆಪಿ ಕೇವಲ ಒಂದು ಸ್ಥಾನವನ್ನು ಪಡೆದಿತ್ತು, ಆದರೆ 20 ಸ್ಥಾನಗಳನ್ನು ಪಡೆದಿದ್ದ ಕಾಂಗ್ರೆಸ್ ಮತ್ತು 16 ಸ್ಥಾನಗಳನ್ನು ಪಡೆದಿದ್ದ ಪಿಡಿಪಿ ಕೈಜೋಡಿಸಿ ಸಮ್ಮಿಶ್ರ ಸರ್ಕಾರವನ್ನು ಸ್ಥಾಪಿಸಿದ್ದವು. ಅಂದರೆ, ಕೇವಲ 30% ಮತದಾನ ನಡೆದು, ಬರೀ 20 ಸ್ಥಾನಗಳನ್ನು ಪಡೆದಿದ್ದ ಕಾಂಗ್ರೆಸ್ ಅದೆಷ್ಟು ಜನಪ್ರಿಯವಾಗಿತ್ತು ಎಂದು ಲೆಕ್ಕ ಹಾಕಿ.

ಸೈನ್ಯದ ದೌರ್ಜನ್ಯ, ಪೊಲೀಸರ ದಬ್ಬಾಳಿಕೆ, ಭಯೋತ್ಪಾದಕರ ಅಟ್ಟಹಾಸ, JKLF ನಂತಹ ಸಂಘಟನೆಗಳ ಅಸಹಾಯಕತೆ, ಹುರಿಯತ್‌ನ ವಿವಿಧ ಬಣಗಳ ಅಬ್ಬರ... ಇವೆಲ್ಲವುಗಳ ನಡುವೆ ಕಾಶ್ಮೀರದ ಜನ ತತ್ತರಿಸಿದ್ದಾರೆ. ಅವರಲ್ಲಿ PDP ಆಗಲಿ, ಕಾಂಗ್ರೆಸ್ ಆಗಲಿ ಯಾವ ರೀತಿಯ ಭರವಸೆಯನ್ನು ಮೂಡಿಸದೆ, ಅವರ ಯಾವ ಸಮಸ್ಯೆಗಳಿಗೆ ಸ್ಪಂದಿಸದೆ ಆರು ವರ್ಷಗಳ ಕಾಲ ಅಧಿಕಾರವನ್ನು ಚಲಾಯಿಸಿದ್ದಾಗಿದೆ. ಈಗ ಇನ್ನು ನಾಲ್ಕು ತಿಂಗಳಲ್ಲಿ ಮತ್ತೆ ಅವೆರಡೂ ಪಕ್ಷಗಳು ಚುನಾವಣೆಗಳನ್ನು ಎದುರಿಸಬೇಕಿದೆ. ಕಾಂಗ್ರೆಸ್‌ಗೆ ಇಂತಹ ಸಮಸ್ಯೆಗಳು ಎದುರಾದಾಗ ಎಡವಟ್ಟು ಮಾಡಿಕೊಳ್ಳುವುದು ಈಗ ರೂಢಿಯಾಗಿ ಹೋಗಿದೆ.

ಕಳೆದ ಜೂನ್ 25 ಕ್ಕೆ ತನ್ನ ಅವಧಿಯನ್ನು ಮುಗಿಸುತ್ತಿದ್ದ ರಾಜ್ಯಪಾಲ ಸಿನ್ಹಾ SASB ಗೆ ನೂರು ಎಕರೆಗಳನ್ನು ಕೊಡಬೇಕೆಂಬ ಒತ್ತಾಯವನ್ನು ಹೆಚ್ಚಿಸಿದ್ದಾನೆ. ಅದಕ್ಕೆ ಮಣಿದರೆ ಜಮ್ಮು ಪ್ರದೇಶದ ಹಿಂದೂಗಳನ್ನು ಸಂತೋಷಪಡಿಸಿದಂತೆಯೂ ಆಗುತ್ತದೆ (ಕನಿಷ್ಠ ತಾನಂತೂ ಬರುವ ಚುನಾವಣೆಯಲ್ಲಿ ಗೆಲ್ಲಬಹುದೆಂಬ ಸ್ವಾರ್ಥವೂ ಆಜಾದ್‌ಗೆ ಇದಿದ್ದರೆ ಅಚ್ಚರಿ ಇಲ್ಲ), ಆ ಜಾಗವನ್ನು ಗುತ್ತಿಗೆ ಆಧಾರದ ಮೇಲೆ SASB ಗೆ ನೀಡುವುದರಿಂದ ಕಾಶ್ಮೀರದ ಮುಸಲ್ಮಾನರ ಕೆಂಗಣ್ಣಿನಿಂದ ತಪ್ಪಿಸಿಕೊಂಡಂತೆಯೂ ಆಗುತ್ತದೆ ಎಂದು ಭಾವಿಸಿದ ಆಜಾದ್ ಅಂತಹದ್ದೊಂದು ಆದೇಶವನ್ನು ಹೊರಡಿಸಿಯೇ ಬಿಟ್ಟರು.

ಇಂತಹ ಒಂದು ಅವಕಾಶಕ್ಕಾಗಿ ಹುರಿಯತ್ ಬಣಗಳು ಕಾಯುತ್ತಿದ್ದವು.

ಪಾಕಿಸ್ತಾನದಲ್ಲಿ ಈಗ ಅಧಿಕಾರ ಪಡೆದಿರುವ ಹೊಸ ಸರ್ಕಾರ ಇತ್ತೀಚೆಗೆ ಹುರಿಯತ್ ಬಣಗಳಿಗೆ ಅಷ್ಟೇನೂ ನೆರವು ಮತ್ತು ಬೆಂಬಲ ನೀಡುತ್ತಿರಲಿಲ್ಲವಾದ್ದರಿಂದ ಅವು ನಿಶ್ಶಕ್ತಗೊಂಡಿದ್ದವಲ್ಲದೆ ಬರಲಿರುವ ಚುನಾವಣೆಯನ್ನು ಬಹಿಷ್ಕರಿಸಬೇಕೆಂದು ಕರೆ ನೀಡಿದ್ದವು. ಈ ಪ್ರಕರಣವನ್ನೇ ಕಾರಣವಾಗಿಟ್ಟುಕೊಂಡು ಕಾಶ್ಮೀರದಲ್ಲಿ ಪ್ರತಿಭಟನೆಗಳನ್ನು ಪ್ರಾರಂಭಿಸಿದವು. ತಮ್ಮ ನೆಲ ಜಲದ ಬಗ್ಗೆ ಅಪಾರ ಕಾಳಜಿ ಹೊಂದಿರುವ ಕಾಶ್ಮೀರಿಗಳು ಅದಕ್ಕೆ ಸ್ಪಂದಿಸಿ ದೊಡ್ಡ ಸಂಖ್ಯೆಗಳಲ್ಲಿ ಬೀದಿಗೆ ಇಳಿದರು.


ಇದನ್ನು ಆಜಾದ್ ನಿರೀಕ್ಷಿಸಿರಲಿಲ್ಲ. ಮೊದಮೊದಲು ಭೂಮಿಯನ್ನು ಗುತ್ತಿಗೆ ಆಧಾರದಲ್ಲಿ ಮಾತ್ರ ನೀಡಲಾಗಿದೆ, ಅಲ್ಲಿ ಶಾಶ್ವತ ಕಟ್ಟಡಗಳನ್ನು ನಿರ್ಮಿಸುವುದಿಲ್ಲ ಎಂದೆಲ್ಲಾ ವಿವರಿಸಲು ಯತ್ನಿಸಿದರು. ಆದರೆ ಅದರಲ್ಲಿ ವಿಫಲಗೊಂಡಾಗ ಕೆಲ ದಿನಗಳಲ್ಲೇ ಭೂಮಿ ಹಸ್ತಾಂತರದ ಆದೇಶವನ್ನು ಹಿಂದಕ್ಕೆ ಪಡೆದರು.

ಆಗ ಚೆಡ್ಡಿಗಳು ತಮ್ಮ ಕಿತಾಪತಿಯನ್ನು ಪ್ರಾರಂಭಿಸಿದರು. ನೂರು ಎಕರೆ ಭೂಮಿಯನ್ನು SASB ಗೆ ಕೊಡಬೇಕೆಂದು ಜಮ್ಮುವಿನಲ್ಲಿ ಪ್ರತಿಭಟಿಸಿದರು. ಅದೂ ಸಾಲದೆಂಬಂತೆ 'ಭಾರತ ಬಂದ್'ಗೆ ಕರೆ ಕೊಟ್ಟರು. ಅದನ್ನೇ ನೆಪ ಮಾಡಿಕೊಂಡು ಬಿಜೆಪಿ ಅಧಿಕಾರದಲ್ಲಿರುವ ಮಧ್ಯಪ್ರದೇಶದಲ್ಲಿ ಕೋಮುಗಲಭೆಗಳನ್ನು ಸೃಷ್ಟಿಸಿ ಆರು ಜನರ ಸಾವಿಗೆ ಕಾರಣರಾದರು.

ಅತ್ತ ಕಾಶ್ಮೀರದ ಮುಸಲ್ಮಾನರಿಗೂ ಭದ್ರತೆ ಇಲ್ಲ, ಇತ್ತ ಜಮ್ಮುವಿನ ಹಿಂದೂಗಳಿಗೂ ನೆಮ್ಮದಿ ಇಲ್ಲ ಎಂಬಂತಾಗಿದೆ ಅಲ್ಲಿನ ಪರಿಸ್ಥಿತಿ. ಇದಕ್ಕೆ ಇವತ್ತು ಕಾಂಗ್ರೆಸ್‌ನ ಪೆದ್ದುತನ ಮತ್ತು ಬಿಜೆಪಿಯ ಮತ್ಸರತನ ಎರಡೂ ಕಾರಣವಾಗಿದೆ..... ■

ಕಡಿದಿದ್ದು ಸೊನ್ನೆ, ಪ್ರಚಾರಕ್ಕೆ ಕೋಟಿ

ಇದು ಯಡ್ಡಿ 'ಮಾದರಿ' ಆಡಳಿತ!



ಯಡ್ಡಿಗೆ ಆರ್‌ಎಸ್‌ಎಸ್ ನಾಯಕರೂ ಉಗಿದಿದ್ದಾರೆ!

ಯಡ್ಡಿ ಮತ್ತು ಅವರ ಸಚಿವ ಸಂಪುಟದ ಸದಸ್ಯರು ತಾಳ-ಮೇಳವಿಲ್ಲದಂತೆ ವರ್ತಿಸುತ್ತಿದ್ದಾರೆ. ಇದನ್ನು ನೋಡಿ ಆರ್‌ಎಸ್‌ಎಸ್ ನಾಯಕರಿಗೂ ಕಿರಿಕಿರಿ ಎನ್ನಿಸಿದೆ. ಕಳೆದ ವಾರ 'ಚೆಡ್ಡಿಗಳ' ಮಾರ್ಗದರ್ಶನ ಪಡೆಯಲು ಯಡ್ಡಿ ಕರೆದಿದ್ದ ಸಭೆಯಲ್ಲಿ ಭಾಗವಹಿಸಿದ್ದ ಆರ್‌ಎಸ್‌ಎಸ್ ಮುಖಂಡರು 'ಹೀಗೆಲ್ಲಾ ಆಡಳಿತ ಮಾಡಿದರೆ ಆಗುವುದಿಲ್ಲ' ಎಂಬ ಬುದ್ಧಿ ಮಾತನ್ನೂ ಹೇಳಿದ್ದಾರೆ.

ಯಡ್ಡಿಯ ಜೊತೆಯಲ್ಲಿ ಅನುಭವಿಗಳೇ ಇಲ್ಲವಾಗಿದ್ದಾರೆ. ಹಿಂದಿನ ಸರ್ಕಾರದಲ್ಲಿ ಸಚಿವರಾಗಿದ್ದ ಕೆ.ಎಸ್. ಈಶ್ವರಪ್ಪ, ಅಶೋಕ್, ಕಟ್ಟಾ ಸುಬ್ರಮಣ್ಯ ನಾಯ್ಡು ಮತ್ತಿತರರು ತಮಗೆ ಸಿಕ್ಕಿರುವ ಖಾತೆಗಳ ಬಗ್ಗೆ ಕ್ಯಾತೆ ಮಾಡಿಕೊಂಡು ಯಡ್ಡಿಯಿಂದ ದೂರವಾಗಿದ್ದಾರೆ. ಅಷ್ಟೇ ಅಲ್ಲ, ತಮಗೆ ಇಷ್ಟ ಬಂದಂತೆ ಕೆಲಸ ಮಾಡುತ್ತಿದ್ದಾರೆ; ಬಾಯಿಗೆ ಬಂದ ಹೇಳಿಕೆಗಳನ್ನು ಪತ್ರಿಕೆಗಳಿಗೆ ನೀಡಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಯತ್ನಿಸುತ್ತಿದ್ದಾರೆ.

ಇನ್ನು ವಿ.ಎಸ್.ಆಚಾರ್ಯ, ಬಸವರಾಜ ಬೊಮ್ಮಾಯಿ, ರಾಮಚಂದ್ರಗೌಡ ತರಹದವರಿಗೆ ತಮ್ಮ ಖಾತೆಗಳ ಮಹತ್ವವೇ ಗೊತ್ತಿಲ್ಲ. ಕೃಷ್ಣಯ್ಯ ಶೆಟ್ಟಿ, ಶ್ರೀರಾಮುಲು, ರವೀಂದ್ರನಾಥ್ ತರಹದ ಮೂರ್ಖರು ಸರ್ಕಾರಕ್ಕೆ ಮುಜುಗರ ತರಬಹುದೇ ಹೊರತು ಉಪಯೋಗವಂತೂ ಆಗುವುದಿಲ್ಲ.

ಒಟ್ಟಾರೆ ಹೆಂಡ ಕುಡಿದ ಮಂಗಗಳಂತಾಗಿದ್ದಾರೆ ಯಡ್ಡಿಯ ಸಚಿವ ಸಂಪುಟದ ಸದಸ್ಯರು.

ಮುಖ್ಯಮಂತ್ರಿ ಯಡಿಯೂರಪ್ಪ ನಾಚಿಕೆ, ಮಾನ-ಮರ್ಯಾದೆ ಎಲ್ಲವನ್ನೂ ಬಿಟ್ಟು ಭಂಗಿ ನೆಡಲು ಹೊರಟಂತಿದೆ. ತೋರಿಕೆಗೆ ಅಭಿವೃದ್ಧಿಯ ಮಂತ್ರ ಪಠಿಸುತ್ತಾ, ಎಲ್ಲ ಸಮಸ್ಯೆಗಳಿಗೂ ಕೇಂದ್ರ ಸರಕಾರವನ್ನು ದೂರುತ್ತಾ, ಸಣ್ಣ-ಪುಟ್ಟ ಕಾರಣಗಳಿಗೂ ವಿರೋಧ ಪಕ್ಷದವರನ್ನು ಶಪಿಸುತ್ತಾ, ಕುಂಡೆ ಸುಟ್ಟ ಬೆಕ್ಕಿನಂತೆ ಅಲ್ಲಿಂದಿಲ್ಲಿಗೆ ಓಡಾಡುತ್ತಿರುವ ಯಡ್ಡಿಗೆ ರಾಜ್ಯದ ಆಡಳಿತವನ್ನು ನಡೆಸುವುದು ಹೇಗೆ ಎಂಬುದೇ ಗೊತ್ತಿಲ್ಲ ಎಂಬ ಸತ್ಯ ರಾಜ್ಯದ ಜನತೆಯ ಅರಿವಿಗೆ ಬರತೊಡಗಿದೆ.

ಅಧಿಕಾರ ವಹಿಸಿಕೊಂಡ ಮೊದಲ ವಾರದಲ್ಲಿಯೇ ಎದುರಾದ ರಸಗೊಬ್ಬರ ಕೊರತೆಯ ಸಮಸ್ಯೆಯನ್ನು ಯಡ್ಡಿಯಿಂದ ಇಲ್ಲಿಯವರೆಗೂ ಬಗೆಹರಿಸುವುದಿರಲಿ, ಅದನ್ನು ಸಂಪೂರ್ಣವಾಗಿ ಅರ್ಥಮಾಡಿಕೊಳ್ಳುವುದೂ ಸಾಧ್ಯವಾಗಿಲ್ಲ. ಇನ್ನು ವಿವಿಧ ಇಲಾಖೆಗೆ ಸಮರ್ಥರನ್ನು ಸಚಿವರನ್ನಾಗಿ ನೇಮಿಸಿ ಸರ್ಕಾರದ ಕೆಲಸ-ಕಾರ್ಯಗಳಿಗೆ ಚಾಲನೆ ನೀಡಲೂ ಅವರಿಂದ ಸಾಧ್ಯವಾಗಿಲ್ಲ. ಬರೀ ಬಜೆಟ್‌ನಲ್ಲಿ ಅದನ್ನು ಮಾಡುತ್ತೇನೆ, ಇದನ್ನು ಮಾಡುತ್ತೇನೆ ಎಂದು ಹೇಳಿಕೊಂಡು ಓಡಾಡಿದರೆ ರಾಜ್ಯ ಅಭಿವೃದ್ಧಿ ಕಂಡಿತೇ ಎಂದು ಜನತೆ ಕೇಳುವಂತಾಗಿದೆ.

ಪ್ರಚಾರಕ್ಕೆ ಹಣದ ಹೊಳೆ

ಈಗ್ಗೆ ಯಡ್ಡಿ ಅಧಿಕಾರ ವಹಿಸಿಕೊಂಡು ಒಂದು ತಿಂಗಳು ಕಳೆದಿದೆ. ಆದರೆ ಈ ಅವಧಿಯಲ್ಲಿ ಆತ ಮಾಡಿರುವ ಕೆಲಸ ಸೊನ್ನೆ. ಆದರೂ ಲಜ್ಜೆ ಇಲ್ಲದೆ ಪ್ರತಿ ದಿನ ಕೋಟಿ, ಕೋಟಿ ರೂಪಾಯಿಗಳ ಯೋಜನೆಗಳನ್ನು ಘೋಷಿಸುತ್ತಾ ತಮ್ಮ ಪುಂಗಿಯನ್ನು ತಾವೇ ಊದುತ್ತಿದ್ದಾರೆ. ಇಷ್ಟೇ ಆಗಿದ್ದರೆ ಹೋಗಲಿ ಬಿಡಿ ಎಂದು ಸುಮ್ಮನಿರಬಹುದಿತ್ತು. ಆದರೆ ತಾನು ಈ 30 ದಿನಗಳಲ್ಲಿ ಏನನ್ನೂ ಕಡಿಯದಿದ್ದರೂ ತನ್ನನ್ನು 'ಅಭಿವೃದ್ಧಿಯ ಕನಸುಗಾರ' ಎಂದು ಬಿಂಬಿಸುವ ಜಾಹೀರಾತುಗಳಿಗೆಂದು ಯಡ್ಡಿ ಸರ್ಕಾರದ ಅರ್ಥಾತ್ ಸಾರ್ವಜನಿಕರ ಕೋಟಿಗಟ್ಟಲೆ ಹಣ ಖರ್ಚುಮಾಡುತ್ತಿದ್ದಾರಲ್ಲ, ಅದು ಅಕ್ಷರಶಃ ಆಕ್ಷೇಪಣೀಯ.

ಬೇಕಾದರೆ ನೀವು ಕಳೆದ ಒಂದು ತಿಂಗಳಿನ ಎಲ್ಲ ಪತ್ರಿಕೆಗಳನ್ನು ಬಿಡಿಸಿಟ್ಟುಕೊಂಡು ನೋಡಿ. ಒಂದಲ್ಲಾ ಒಂದು ಪತ್ರಿಕೆಯಲ್ಲಿ ಸರ್ಕಾರದ ಜಾಹೀರಾತು ಅರ್ಧಪುಟಕ್ಕೆ ಕಡಿಮೆ ಇಲ್ಲದಂತೆ ರಾರಾಜಿಸುತ್ತಿರುತ್ತದೆ. ಕೆಲ ಜಾಹೀರಾತುಗಳಂತೂ ಹಾಸ್ಯಾಸ್ಪದವಾಗಿದೆ. ಅದು ಬೇರೆ ವಿಷಯ!

ಇಷ್ಟು ಸಾಲದೆಂಬಂತೆ ಪ್ರಮುಖ ಪತ್ರಿಕೆಗಳಲ್ಲಿ ವಿಶೇಷ ಪುರವಣಿಗಳು ಬೇರೆ. ಜುಲೈ 4 ರಂದು 'ಪ್ರಜಾವಾಣಿ' ಪತ್ರಿಕೆಗೆ ನಾಲ್ಕು ಪುಟಗಳ ಜಾಹೀರಾತು ನೀಡಲಾಗಿದೆ. ಈ ಪುರವಣಿಯ ಹೆಸರು 'ಅಭಿವೃದ್ಧಿಯ ಕನಸುಗಾರ- ಬಿ.ಎಸ್. ಯಡಿಯೂರಪ್ಪ'. ಕೆಲಸ ಮಾಡುವುದನ್ನು ಬಿಟ್ಟು, ಪತ್ರಿಕೆಯಲ್ಲಿ ದೊಡ್ಡ-ದೊಡ್ಡ ಫೋಟೋ ಹಾಕಿಸಿಕೊಂಡರೆ ರಾಜ್ಯದ ಅಭಿವೃದ್ಧಿಯಾಗುತ್ತದೆಯೇ? ಅದರಲ್ಲೂ ಈ ಪುರವಣಿಯಲ್ಲಿ ರಾಜ್ಯಪಾಲರಿಗೆ ಹೂವು ನೀಡಿದ್ದು, ಅಧಿಕಾರ ವಹಿಸಿಕೊಂಡಾಗ ಸಹಿ ಹಾಕುತ್ತಿದ್ದದ್ದು, ವಿಧಾನ ಸೌಧದ ಎದುರು ಎಲ್ಲ ಸಚಿವರೊಂದಿಗೆ ನಿಂತಿದ್ದು, ಚರಂಡಿಯಲ್ಲಿ ನೀರು

ಯಡ್ಡಿ ಅಧಿಕಾರ ವಹಿಸಿಕೊಂಡು ಒಂದು ತಿಂಗಳು ಕಳೆದಿದೆ. ಆದರೆ ಈ ಅವಧಿಯಲ್ಲಿ ಆತ ಮಾಡಿರುವ ಕೆಲಸ ಸೊನ್ನೆ. ಆದರೂ ಲಜ್ಜೆ ಇಲ್ಲದೆ ಪ್ರತಿ ದಿನ ಕೋಟಿ, ಕೋಟಿ ರೂಪಾಯಿಗಳ ಯೋಜನೆಗಳನ್ನು ಘೋಷಿಸುತ್ತಾ ತಮ್ಮ ಪುಂಗಿಯನ್ನು ತಾವೇ ಊದುತ್ತಿದ್ದಾರೆ.

ಯಡ್ಡಿ ಪಾಲಿಗೆ ಈಶ್ವರಪ್ಪನೇ ಶನಿ

ಒಂದೆಡೆ ಐವರು ಪಕ್ಷೇತರರು ಒಗ್ಗಟ್ಟಾಗಿರುವುದು, ಇನ್ನೊಂದೆಡೆ ತನ್ನದೇ ಸಚಿವ ಸಂಪುಟದ ಹಿರಿಯ ಸದಸ್ಯ ಕೆ.ಎಸ್.ಈಶ್ವರಪ್ಪ ದಿನಕ್ಕೊಂದು ಅಸಂಬದ್ಧ ಹೇಳಿಕೆಗಳನ್ನು ನೀಡುತ್ತಿರುವುದು ಸದ್ಯಕ್ಕೆ ಮುಖ್ಯಮಂತ್ರಿ ಯಡ್ಡಿಯ ನಿದ್ದೆಯನ್ನು ಕೆಡಿಸಿವೆ.

"ನಾವು ಅಧಿಕಾರದಲ್ಲಿ ಮುಂದುವರೆಯಲೇಬೇಕಾದ ಸಂದರ್ಭ ಒದಗಿಬಂದಾಗ ವಿರೋಧ ಪಕ್ಷವನ್ನು ಒಡೆಯಲು ಹಿಂದೆಮುಂದೆ ನೋಡುವುದಿಲ್ಲ" ಎಂದು ಇಂಧನ ಸಚಿವ ಈಶ್ವರಪ್ಪ ಇತ್ತೀಚೆಗೆ ತಮ್ಮ ಕುತಂತ್ರ ತರ್ಕವನ್ನು ಬಹಿರಂಗಪಡಿಸಿದರು.

ತಮಾಷೆಯೆಂದರೆ ಈಶ್ವರಪ್ಪನವರ ಈ ತರ್ಕದಿಂದ ಕಂಗಾಲಾಗಿದ್ದು ಕಾಂಗ್ರೆಸ್ ಅಥವಾ ಜನತಾದಳಗಳಲ್ಲ. ಅದರ ಬದಲಿಗೆ 'ಒಡೆಯಪ್ಪ'ನ ಈ ಮಾತಿನಿಂದ ಅವರ ಪಕ್ಷದ ಮುಖ್ಯಮಂತ್ರಿ ಯಡಿಯೂರಪ್ಪನೇ ಸಿಕ್ಕಾಪಟ್ಟೆ ಅಪ್ಸೆಟ್ ಆಗಿ ತಲೆಮೇಲೆ ಕೈಹಿಡಿದು ಕುಳಿತುಕೊಂಡರು!

ಇದೆಲ್ಲದರ ಹಿಂದೆ ಈಶ್ವರಪ್ಪ ದೊಡ್ಡ ಮಾಸ್ಟರ್ ಪ್ಲಾನ್ ತಯಾರಿಸಿದ್ದಾರೆ. ಈ ಬಾರಿ ತಮಗೆ ಗೃಹ ಖಾತೆ ಅಥವಾ ಮತ್ತೊಮ್ಮೆ ಜಲ ಸಂಪನ್ಮೂಲ



ಖಾತೆಯನ್ನು ನೀಡಬೇಕು ಎಂದು ಈಶ್ವರಪ್ಪ ಹಠ ಹಿಡಿದು ಕುಳಿತಿದ್ದರು. ಆದರೆ ಈಶ್ವರಪ್ಪನ ಬಯೋ ಡಾಟಾ ಅರಿತಿದ್ದ ಮುಖ್ಯಮಂತ್ರಿ ಯಡ್ಡಿ ಅತ್ಯಂತ ಜಾಣ್ಮೆಯಿಂದ ಅವರಿಗೆ ಇಂಧನ ಖಾತೆಯನ್ನು ನೀಡಿ ಬಾಯ್ಮುಚ್ಚಿಸಿದ್ದರು. ಆದರೆ ಅದೇ ಇಂಧನ ಖಾತೆಯಿಂದ ಈಗ ಈಶ್ವರಪ್ಪ ಯಡಿಯೂರಪ್ಪನವರಿಗೆ ಇರಿಸುಮುರುಸಾಗುವಂತೆ ಮಾಡುತ್ತಿದ್ದಾರೆ.

ಒಂದೆಡೆ ರೈತರಿಗೆ ಉಚಿತ ವಿದ್ಯುತ್ ನೀಡುವ ಬಗ್ಗೆ ಈ ಬಾರಿಯ ಬಜೆಟ್‌ನಲ್ಲಿ ಅದನ್ನು ಬಹಿರಂಗಗೊಳಿಸುತ್ತೇವೆ ಎಂದು ರೈತರನ್ನು ಸಮಾಧಾನ ಮಾಡಲು ಯಡಿಯೂರಪ್ಪ ಯತ್ನಿಸುತ್ತಿದ್ದರೆ, ಇನ್ನೊಂದೆಡೆ ಅವರ ಮಾತಿನ ವಿರುದ್ಧದ ಹೇಳಿಕೆಗಳನ್ನು ನೀಡುತ್ತಿರುವ ಈಶ್ವರಪ್ಪ ಯಡಿಯೂರಪ್ಪನವರನ್ನು ಧರ್ಮಸಂಕಟಕ್ಕೆ ದೂಡುತ್ತಿದ್ದಾರೆ. "ನಾನು ರೈತರಿಗೆ ವಿದ್ಯುತ್ ನೀಡಲು ಪ್ರಯತ್ನ ಮಾಡುತ್ತಿದ್ದೇನೆ. ಒಂದು ವೇಳೆ ಆಗದಿದ್ದರೆ ನಾನೇನು ಮಾಡಲಿ? ನಾನು ಈ ಖಾತೆ ಬಿಟ್ಟು ಬೇರೆ ಖಾತೆಗೆ ಹೋಗುತ್ತೇನೆ" ಎಂದು ಈಶ್ವರಪ್ಪ ಸವಾಲು ಹಾಕಿದ್ದಾರೆ. ಇಂತಹ ಮಾತುಗಳಿಂದ ಈಗಾಗಲೇ ರಸಗೊಬ್ಬರದ ಅಭಾವದಿಂದ ಹೆಣಗಾಡುತ್ತಿರುವ ರೈತರಿಗೆ ತಮ್ಮ ಸ್ವಂತ ಊರಾದ ಶಿವಮೊಗ್ಗದಲ್ಲಿ ರಾಜಾರೋಷವಾಗಿ ಗುಡುಗಿದ್ದರು. ಅದು ಸಾಲದೆಂಬಂತೆ ಇದೇ ಈಶ್ವರಪ್ಪ ಮತ್ತೆ ಗದಗದಲ್ಲಿ ಅದೇ ಮಾತನ್ನು ರಿಪೀಟ್ ಮಾಡಿದರು. ಹಾಗೆ ಮಾಡುವ ಮೂಲಕ ಅವರಿಗೆ ಸಾಧ್ಯವಾದಷ್ಟು ಸೂಕ್ಷ್ಮತೆಯಿಂದ ಬಂಡಾಯದ ಕಹಳೆಯನ್ನು ಊದಿದರು! "ನಾನು ಹೇಳಿದ್ದು ಸರಿ; ಈಗ ವಿರೋಧ ಪಕ್ಷದಲ್ಲಿರುವವರು ಈ ಹಿಂದೆ ಮಾಡಿದ್ದನ್ನೇ ನಾವೂ ಮಾಡುತ್ತೇವೆ. ಇದರಲ್ಲಿ ತಪ್ಪೇನಿದೆ?" ಎಂದು ಈಶ್ವರಪ್ಪ ವೈರಿ ಪಕ್ಷಗಳನ್ನು ಒಡೆಯುವ

ಬಿಜೆಪಿಯ ಮೇಲೆ ಮತ್ತಷ್ಟು ಸಿಟ್ಟುಬರಿಸುತ್ತಿದೆ.

ಭಾರತೀಯ ಜನತಾ ಪಕ್ಷದಲ್ಲಿ ಈಶ್ವರಪ್ಪ ಕಳೆದ ಹಲವಾರು ವರ್ಷಗಳಿಂದ ಕುರುಬರ ಅನಭಿಷಕ್ತ ನಾಯಕರಾಗಿ ರಾರಾಜಿಸುತ್ತಾ ಬಂದಿದ್ದಾರೆ. ತಮ್ಮ ಪಕ್ಷದಲ್ಲಿ ಹಿಂದುಳಿದ ವರ್ಗದ ಪ್ರಮುಖ ನಾಯಕ ಈಶ್ವರಪ್ಪ ಎಂಬ ಕಾರಣಕ್ಕಾಗಿ ಪಾರ್ಟಿಯ ಹೈಕಮಾಂಡ್ ಕೂಡಾ ಆತನ ಬಗ್ಗೆ ಮೃದು ನಿಲುವನ್ನು ಹೊಂದಿದೆ. ಇದೆಲ್ಲದರಿಂದ ತಾನು ಏನೇ ಮಾತನಾಡಿದರೂ ಪಕ್ಷದಿಂದ ತನ್ನನ್ನು ಉಚ್ಚಾಟಿಸಲು ಸಾಧ್ಯವಿಲ್ಲ ಎಂಬ ಬಂಡ ಧೈರ್ಯ ಈಗ ಈಶ್ವರಪ್ಪನಿಗೆ ಬಂದಿದೆ. ಆ ಕಾರಣಕ್ಕೆ ಅವರು ಈಗ ಹೆಜ್ಜೆಹೆಜ್ಜೆಗೂ ಯಡಿಯೂರಪ್ಪನಿಗೆ ಕಿರಿಕ್ ಮಾಡುತ್ತಿದ್ದಾರೆ.

ತನ್ನ ಜಾತಿಯ ಎದುರಾಳಿ ಜಗದೀಶ ಶೆಟ್ಟರ್‌ಅನ್ನು ಸ್ಪೀಕರ್ ಸ್ಥಾನಕ್ಕೆ ತಳ್ಳಿ ಅವರಿಗೆ ಪರ್ಯಾಯವಾಗಿ ಬಸವರಾಜ ಬೊಮ್ಮಾಯಿ, ಪ್ರಭಾಕರ ಕೋರೆ, ವಿಜಯ ಸಂಕೇಶ್ವರ ಮೊದಲಾದ ನಾಯಕರನ್ನು ಹುಟ್ಟುಹಾಕಿದ ಯಡ್ಡಿ ಈ ಈಶ್ವರಪ್ಪನ ವಿಚಾರದಲ್ಲಿ ನಿಶ್ಶಕ್ತರಾಗಿದ್ದಾರೆ. ಯಾಕೆಂದರೆ ಈಶ್ವರಪ್ಪನಿಗೆ ಪರ್ಯಾಯವಾಗಿ ಮತ್ತೊಬ್ಬ ಕುರುಬ ನಾಯಕನನ್ನು ಹುಟ್ಟುಹಾಕಲು ಯಡ್ಡಿಯಿಂದ ಇಲ್ಲಿಯತನಕ ಸಾಧ್ಯವಾಗಿಲ್ಲ.

ಇದನ್ನು ಅರ್ಥ ಮಾಡಿಕೊಂಡಿರುವ ಈಶ್ವರಪ್ಪ ಈಗ ಸುಮ್ಮನೆ ಕೂರುವ ಸ್ಥಿತಿಯಲ್ಲಿಲ್ಲ. ಕಾಂಗ್ರೆಸ್‌ನಲ್ಲಿ ಯಾವುದೇ ಸ್ಥಾನಮಾನ ಸಿಗದೇ ಅತೃಪ್ತರಾಗಿರುವ ಸಿದ್ದರಾಮಯ್ಯ ಮತ್ತು ಅವರ ಬೆಂಬಲಿಗರು ಬಜೆಪಿಗೆ ಸೇರುತ್ತಾರೆ ಎಂಬ ಸುದ್ದಿ ಮಾಧ್ಯಮಗಳಲ್ಲಿ ಬರಲಾರಂಭಿಸಿದ ತಕ್ಷಣ ಈಶ್ವರಪ್ಪ ಜಾಗರೂಕರಾದರು. ಸಿದ್ದು ಮತ್ತು ಅವರ ಗ್ಯಾಂಗನ್ನು ಯಾವುದೇ ಬೆಲೆ ಕೊಟ್ಟು ಖರೀದಿಸಲು ಯಡಿಯೂರಪ್ಪ ಅತ್ಯಂತ ಉತ್ಸಾಹದಲ್ಲಿದ್ದಾರೆ. ಅದಕ್ಕೆ ಎರಡು ಕಾರಣಗಳಿವೆ. ಮೊದಲನೆಯದು: ಒಂದು ವೇಳೆ ಸಿದ್ದು ಮತ್ತು ಅವರ ಹಿಂಬಾಲಕರು ಬಜೆಪಿ ಸೇರಿದರೆ ತಮ್ಮ ಐದು ವರ್ಷ ಅಧಿಕಾರಕ್ಕೆ ಯಾವುದೇ ಸಂಚಕಾರ ಬರುವುದಿಲ್ಲ. ಎರಡನೆಯದು: ತಾನು ಹಿಂದುಳಿದ ವರ್ಗದ ನಾಯಕ ಎಂಬ ಏಕೈಕ ಕಾರಣಕ್ಕೆ ಆಗಾಗ ಕಸಿವಿಸಿ ಮಾಡುವ ಈಶ್ವರಪ್ಪನನ್ನೂ ಮೂಲೆಗುಂಪು ಮಾಡಿದ ತೃಪ್ತಿ ಯಡ್ಡಿಗೆ ಸಿಗುತ್ತದೆ. ಒಂದೇ ಏಟಿಗೆ ಎರಡು ಹಣ್ಣುಗಳನ್ನು ಉದುರಿಸುವ ಯಡ್ಡಿಯ ಆಟವನ್ನು ಚೆನ್ನಾಗಿ ಬಲ್ಲ ಈಶ್ವರಪ್ಪ ದಿನಕ್ಕೊಂದು ಹೇಳಿಕೆ ನೀಡಿ ಯಡ್ಡಿಯನ್ನು ಕುಗ್ಗಿಸುವ ಸರ್ವಪ್ರಯತ್ನವನ್ನು ಮಾಡುತ್ತಿದ್ದಾರೆ.

ಹರಿಯುತ್ತಿರುವುದನ್ನು ನೋಡಿದ್ದು ಮತ್ತಿತರ ಫೋಟೋಗಳನ್ನು ಪತ್ರಿಕೆಯಲ್ಲಿ ಹಾಕಿಸಿಕೊಂಡು ಮೆರೆಯಲು ಯಡಿಯೂರಪ್ಪನಿಗೆ ಜನತೆಯ ದುಡ್ಡೇ ಬೇಕಿತ್ತೇ?

ವಿ.ಕ.ದ ಹಾಸ್ಯ ಪುರವಣಿ!

ಕೆಲಸ ಮಾಡದೆ ತಮ್ಮ ಬಗ್ಗೆ ವಿಶೇಷ ಪುರವಣಿಗಳನ್ನು ಪ್ರಕಟಿಸಿ ಎಂದು ಪತ್ರಿಕೆಯವರಿಗೆ ಸರ್ಕಾರದ ಹಣ ಸುರಿದರೆ ಪಾಪ ಅವರಾದರೂ ಏನು ಮಾಡುತ್ತಾರೆ? ಪ್ರಜಾವಾಣಿಯಾದರೂ ಫೈಲ್ ಫೋಟೋಗಳನ್ನು ಪ್ರಕಟಿಸಿ, ಒಂದಿಷ್ಟು ಅಡ್ನಾಡಿಡಿಯ ಲೇಖನ ಬರೆದು ದುಡ್ಡು ಪಡೆದುಕೊಂಡಿತು.

ಆದರೆ ಕನ್ನಡದ ನಂ.1 ಪತ್ರಿಕೆ ಇದೆಯಲ್ಲ, ವಿಜಯ ಕರ್ನಾಟಕ, ಅದು ಹಾಸ್ಯಾಸ್ಪದ ಪುರವಣಿಯನ್ನು ಪ್ರಕಟಿಸಿ ಯಡ್ಡಿಯ ಮಾನವನ್ನು ಪೂರ್ತಿ ಕಳೆದಿದೆ. ಯಡ್ಡಿಯನ್ನು 'ಹೀರೊ' ಮಾಡಲೆಂದೇ ಪ್ರಕಟಿಸಲಾದ (ದಿನಾಂಕ: 5-07-2008) ಈ ವಿಶೇಷ ಪುರವಣಿಗೆ 'ಹೈಕೋರ್ಟ್ ಸಂಚಾರಿ ಪೀಠ' ಎಂಬ ಹೆಸರು ನೀಡಲಾಗಿದೆ.

ಆದರೆ ವಾಸ್ತವವಾಗಿ ಧಾರವಾಡ ಮತ್ತು ಗುಲ್ಬರ್ಗದಲ್ಲಿ ಹೈಕೋರ್ಟ್ ಸಂಚಾರಿ ಪೀಠ ಆರಂಭವಾಗಿದ್ದಕ್ಕೂ ಯಡ್ಡಿ ನೇತೃತ್ವದ ನೂತನ ಸರ್ಕಾರಕ್ಕೂ ಸಂಬಂಧವೇ ಇಲ್ಲ. ಸಂಚಾರಿ ಪೀಠದ ಹೋರಾಟಕ್ಕೆ ದೊಡ್ಡ ಇತಿಹಾಸವೇ ಇದೆ. ಈ ಹೋರಾಟದ ಬೀಜ ಬಿದ್ದಿದ್ದು 1920ರಲ್ಲಿಯೇ. ಕಳೆದ ಎರಡು ದಶಕದಲ್ಲಿ ಹೋರಾಟ ತೀವ್ರ ಕಾವು ಪಡೆದಿತ್ತು. 1985ರಲ್ಲಿಯೇ ಅಂದಿನ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ನೇತೃತ್ವದ ಸರ್ಕಾರ ಪೀಠ ಸ್ಥಾಪನೆಯ ಪ್ರಸ್ತಾಪವನ್ನು ಕೇಂದ್ರಕ್ಕೆ ಕಳಿಸಿತ್ತು. ಮುಂದೆ ಹೋರಾಟ ತೀವ್ರಗೊಂಡಾಗಲೆಲ್ಲಾ ಸರ್ಕಾರಗಳು ಆಮೆ ಹೆಜ್ಜೆ ಇಡುತ್ತಾ ಬಂದಿದ್ದವು. ಧರ್ಮಸಿಂಗ್ ನೇತೃತ್ವದ ಸರ್ಕಾರವಿದ್ದಾಗಲೇ ಶಂಕುಸ್ಥಾಪನೆ ನಡೆದಿತ್ತು, ಅವರ ಸರ್ಕಾರ ತನ್ನ ಬಜೆಟ್‌ನಲ್ಲಿ ಈ ಪೀಠಕ್ಕೆಂದು 66 ಕೋಟಿ ರೂ. ಬಿಡುಗಡೆ ಮಾಡಿತ್ತು.



ವಿ.ಕ.ದ ವಿಶೇಷ ಪುರವಣಿಯ ವಿಚಿತ್ರ ಟೈಟಲ್‌ಗಳು



ಹಿಂದಿನ ಸರ್ಕಾರಗಳೇ ಕಾರಣವಾಗಿದ್ದ ಪೀಠದ ಕಟ್ಟಡದ ಕಾಮಗಾರಿ ಈಗ ಮುಕ್ತಾಯಗೊಂಡು ಪೀಠ ಅಧಿಕೃತವಾಗಿ ಕಾರ್ಯಾರಂಭ ಮಾಡಿದೆ. ಇದಕ್ಕೆಂದು ಈಗಿನ ಯಡ್ಡಿ ಸರ್ಕಾರ ಮಾಡಿದ್ದೇನೂ ಇಲ್ಲ. ಆದರೂ ಯಡ್ಡಿಯ ದೊಡ್ಡ ಫೋಟೋವನ್ನು ಈ ಪುರವಣಿಯಲ್ಲಿ ಪ್ರಕಟಿಸಿ ಯಡ್ಡಿಯಿಂದಾಗಿಯೇ ಈ ಪೀಠ ಸ್ಥಾಪನೆಯಾಯಿತೇನೋ ಎಂಬಂತೆ ಬಿಂಬಿಸಲಾಗಿದೆ.

ಇಷ್ಟೇ ಅಲ್ಲ, ಈ ಪುರವಣಿಯಲ್ಲಿ ಇನ್ನೂ ಸಾಕಷ್ಟು ಹಾಸ್ಯಾಸ್ಪದ ವಿಷಯಗಳಿವೆ. ಎರಡನೇ ಪುಟದಲ್ಲಿ ಬಿಜೆಪಿಯ ರಾಷ್ಟ್ರೀಯ ನಾಯಕರೊಂದಿಗೆ ಯಡ್ಡಿ ನಿಂತಿರುವ ದೊಡ್ಡ ಫೋಟೋ ಪ್ರಕಟಿಸಿ 'ಅಂತೂ ಇಂತು ಪೀಠ ಬಂತು, ಹೋರಾಟಕ್ಕೆ ದೊರೆತ ಜಯ; ಇನ್ನೇನಿದ್ದರೂ ಅಭಿವೃದ್ಧಿಯ ಸಮಯ' ಎಂಬ ಹೆಡ್ಡಿಂಗ್ ಕೊಡಲಾಗಿದೆ. ಈ ರಾಷ್ಟ್ರ ನಾಯಕರು ಯಾವಾಗ ಪೀಠಕ್ಕಾಗಿ ಪಟ್ಟು ಹಿಡಿದಿದ್ದರೋ ಗೊತ್ತಿಲ್ಲ. ಪುರವಣಿಯ ಕೊನೆಯ ಪುಟದಲ್ಲಿ ಬಿಜೆಪಿಯ ದೆಲ್ಲಿ 'ದಂಡ'ಯಾತ್ರೆಯ ದೊಡ್ಡ ಫೋಟೋ ಇದೆ. ಮಜವೆಂದರೆ ಪುರವಣಿಯ ತುಂಬ ಇದೇರೀತಿ ಸಂಬಂಧ ಇಲ್ಲದ ಫೋಟೋ-ಸುದ್ದಿ ಪ್ರಕಟಿಸಲಾಗಿದೆ.

ಪಾಪ, ಪೀಠಕ್ಕಾಗಿ ನಿಜವಾಗಲೂ ಹೋರಾಟ ಮಾಡಿದ ಬಿ.ಡಿ. ಹಿರೇಮಠರ ಚಿಕ್ಕ ಸಂದರ್ಶನವೊಂದನ್ನು ಪುರವಣಿಯ ಕೊನೆಯಲ್ಲಿ ಚಿಕ್ಕದಾಗಿ ಪ್ರಕಟಿಸಿ ಕೈತೊಳೆದುಕೊಂಡಿದ್ದಾರೆ. ಯಡ್ಡಿಯ ಕೃಪೆಯಿಂದ ವಿಧಾನ ಪರಿಷತ್‌ಗೆ ಪ್ರವೇಶ ಪಡೆದಿರುವ 'ಕನ್ನಡ ನಾಡು' ಎಂಬ ದಿವಂಗತ ಪಕ್ಷದ ಸ್ಥಾಪಕ ಉದ್ಯಮಿ ವಿಜಯ ಸಂಕೇಶ್ವರ 'ಪೀಠ ಸ್ಥಾಪನೆ ಯಡಿಯೂರಪ್ಪನವರ ಗೆಲುವು' ಎಂಬ ಹೇಳಿಕೆ ದೊಡ್ಡದಾಗಿ ಪ್ರಕಟವಾಗಿದೆ. ಇದು ಹಾಸ್ಯ ಪುರವಣಿಯಲ್ಲದೆ ಇನ್ನೇನು?

ಏನಿಲ್ಲವೆಂದರೂ ಈ ಎರಡು ಪ್ರಮುಖ ದಿನಪತ್ರಿಕೆಗಳಲ್ಲಿ ಈ ಹೊಗಳುಭಟ್ಟ ಪುರವಣಿಗಳನ್ನು ಪ್ರಕಟಿಸಲು ಸರ್ಕಾರ ಹತ್ತಿರ ಹತ್ತಿರ ಒಂದು ಕೋಟಿ ರೂ ಖರ್ಚು ಮಾಡಿದೆ. ಇನ್ನು ಉಳಿದ ಪತ್ರಿಕೆಗಳಾದ 'ಕನ್ನಡ ಪ್ರಭ', 'ಉದಯವಾಣಿ', 'ಸಂ.ಕ.' ಸುಮ್ಮನಿದ್ದಾವೆಯೇ? ಅವುಗಳೂ ಈ ರೀತಿಯ ಪುರವಣಿ ಪ್ರಕಟಿಸಿದರೆ ಕನಿಷ್ಠ ಮೂರು ಕೋಟಿ ಸರ್ಕಾರದ ಯಾನೆ ಸಾರ್ವಜನಿಕರ ಹಣ ಪೋಲಾದಂತಾಗುತ್ತದೆ. ಛೀ, ಈ ರೀತಿಯ ಆಡಳಿತ ನಡೆಸಲು ಯಡ್ಡಿಗೆ ನಾಚಿಕೆ ಎಂಬುದೇ ಇಲ್ಲವೇ?

ಆಷಾಡದಲ್ಲಿ ಬೇಡ ಎಂದಿದ್ದರು!

ಹೈಕೋರ್ಟ್ ಸಂಚಾರಿ ಪೀಠ ಉದ್ಘಾಟನೆಯನ್ನೇ ಬಿಜೆಪಿ ಸರ್ಕಾರದ ದೊಡ್ಡ ಸಾಧನೆ ಎಂಬಂತೆ ಬಿಂಬಿಸಿಕೊಳ್ಳುತ್ತಿರುವ ಯಡ್ಡಿ ಮತ್ತು ಅವರ ಬೆಂಬಲಿಗರು ಈಗಲೇ ಈ ಪೀಠಗಳ ಉದ್ಘಾಟನೆ ಬೇಡ ಎಂದು ಪಟ್ಟು ಹಿಡಿದಿದ್ದರು. ಇದಕ್ಕೆ ಕಾರಣ ಆಷಾಡವೆಂದು!

ಈ ಬಗ್ಗೆ ಮುಖ್ಯ ನ್ಯಾಯಾಧೀಶರಿಗೆ ಮನವಿಯನ್ನೂ ಸಲ್ಲಿಸಿದ್ದ ಯಡ್ಡಿ ಬೆಂಬಲಿಗರು, ಈಗ ಉದ್ಘಾಟನೆ ಮಾಡುವುದರಿಂದ ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆ ಉಂಟಾಗುತ್ತದೆ ಎಂದು ಅವಲತ್ತುಕೊಂಡಿದ್ದರು. ಆದರೆ ತಾವು ಮುಖ್ಯ ನ್ಯಾಯಾಧೀಶರಾಗಿರುವಾಗಲೇ ಪೀಠ ಉದ್ಘಾಟನೆಯಾಗ ಬೇಕೆಂದು ಪಟ್ಟು ಹಿಡಿದಿದ್ದ ಮುಖ್ಯ ನ್ಯಾಯಮೂರ್ತಿ ಸಿರಿಯಾಕ್ ಜೋಸೆಫ್ ಈ ಮನವಿಗೆ ಕ್ಯಾರೆ ಎನ್ನದೆ ಸಂಚಾರಿ ಪೀಠದ ಉದ್ಘಾಟನಾ ಕಾರ್ಯಕ್ರಮ ಫಿಕ್ಸ್ ಮಾಡಿದ್ದರು.

ಕೆಲಸ ಎಲ್ಲ ಮುಗಿದಿದ್ದರೂ ಆಷಾಡದ ಕಾರಣ ನೀಡಿ, ಜನತೆಗೆ ನ್ಯಾಯ ದೊರೆಯುವುದನ್ನು ವಿಳಂಬ ಮಾಡಲು ಹೊರಟಿದ್ದವರು ಈಗ ಈ 'ಉದ್ಘಾಟನಾ ಕಾರ್ಯಕ್ರಮ' ನಡೆದಿರುವುದೇ ತಮ್ಮ ಸಾಧನೆ ಎಂದು ಹೇಳಿಕೊಂಡು ಪ್ರಚಾರ ಪಡೆಯುತ್ತಿದ್ದಾರೆ ! ■

ವಚನಭ್ರಷ್ಟ ಈಶ್ವರಪ್ಪ



ಮಾಜಿ ಮುಖ್ಯ ಮಂತ್ರಿ ಕುಮಾರಸ್ವಾಮಿ ತಮಗೆ ಅಧಿಕಾರವನ್ನು ಹಸ್ತಾಂತರಿಸದೆ ವಚನಭ್ರಷ್ಟರಾದರು ಎಂದು ಬೊಬ್ಬೆ ಹೊಡೆಯುತ್ತಾ ರಾಜ್ಯಾದ್ಯಂತ ಸುತ್ತಾಡಿದ ಬಿಜೆಪಿ ಅಧಿಕಾರವನ್ನೇನೋ ಪಡೆಯಿತು. ಆದರೆ ಈಗ ತಾನು ಚುನಾವಣಾ ಸಮಯದಲ್ಲಿ ನೀಡಿದ್ದ ಮಾತನ್ನೇ ಉಳಿಸಿಕೊಳ್ಳದೆ ರಾಜ್ಯದ ಜನರ ಮುಂದೆ ವಚನ ಭ್ರಷ್ಟವಾಗಿ ನಿಂತಿದೆ. ಅಷ್ಟೇ ಅಲ್ಲ, ಈ ಸರ್ಕಾರದ ಇಂಧನ ಸಚಿವ ಕೆ.ಎಸ್. ಈಶ್ವರಪ್ಪ ತಾನು 'ವಚನ ಭ್ರಷ್ಟ' ಮಾತ್ರವಲ್ಲ; ಮಹಾ 'ವಂಚಕ' ಕೂಡ ಎಂದು ಸಾರ ಹೊರಟಿದ್ದಾರೆ.

ಬಿಜೆಪಿಯ ಪ್ರಣಾಳಿಕೆಯಲ್ಲಿ ತಮ್ಮ ಪಕ್ಷ ಅಧಿಕಾರಕ್ಕೆ ಬಂದ 24 ಗಂಟೆಗಳಲ್ಲಿ ರೈತರಿಗೆ ಉಚಿತ ವಿದ್ಯುತ್ ನೀಡುತ್ತದೆ ಎಂದು ಹೇಳಲಾಗಿತ್ತು. ಈಗ ಅವರ ಪಕ್ಷ ಅಧಿಕಾರಕ್ಕೆ ಬಂದು 24 ಗಂಟೆ ಮಾತ್ರವಲ್ಲ, 24 ದಿನಗಳಿಗಿಂತಲೂ ಹೆಚ್ಚು ಕಾಲ ಉರುಳಿದೆ. ಆದರೆ ರೈತರಿಗೆ ಉಚಿತ ವಿದ್ಯುತ್ ನೀಡುವುದಿರಲಿ, ಅವರಿಗೆ ಸರಿಯಾಗಿ ಬೀಜ ಗೊಬ್ಬರವನ್ನೂ ಪೂರೈಸಲು ಈ ಸರ್ಕಾರದಿಂದ ಸಾಧ್ಯವಾಗಿಲ್ಲ. ಇದು ವಚನಭ್ರಷ್ಟತೆ, ವಂಚನೆ ಅಲ್ಲದೆ ಇನ್ನೇನು?

ಮತದಾರರಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕಾಗಿದ್ದ 'ಹರುಕು ಬಾಯಿ' ಈಶ್ವರಪ್ಪ ಅದರಿಂದ ತಪ್ಪಿಸಿಕೊಂಡು ಬಾಯಿಗೆ ಬಂದಂತೆ ಸುಳ್ಳು ಹೇಳಿಕೊಂಡು ಸುತ್ತಾಡುತ್ತಿದ್ದಾರೆ. "ಅಧಿಕಾರಕ್ಕೆ ಬಂದ 24 ಗಂಟೆಗಳಲ್ಲಿ ರೈತರಿಗೆ ಉಚಿತ ವಿದ್ಯುತ್ ಕೊಡುತ್ತೇವೆ ಎಂದು ಹೇಳಿದ್ದಿರಲ್ಲ? ಇದು ಸಾಧ್ಯವಿಲ್ಲ ಎಂದು ಗೊತ್ತಿದ್ದರೂ ಏಕೆ ಸುಳ್ಳು ಹೇಳಿದಿರಿ?" ಎಂದು ಈಶ್ವರಪ್ಪರನ್ನು ಕೇಳಿದರೆ "ನಾವು ಹೇಳಿದ್ದು ಸತ್ಯ ಎಂದು ನೀವು ನಂಬಿದ್ದು ಏಕೆ. 24 ಗಂಟೆಯಲ್ಲಿ ಸರ್ಕಾರ ಇನ್ನೂ ಸರಿಯಾಗಿ ಅಧಿಕಾರ ವಹಿಸಿಕೊಂಡೇ ಇರುವುದಿಲ್ಲ" ಎಂದು ಉದ್ಧಟತನದಿಂದ ಉತ್ತರಿಸುತ್ತಾರೆ. ಇವರ ಮಾತು ನಂಬಿ ಓಟು ಕೊಟ್ಟ ರೈತರು ಕರೆಂಟ್ ಶಾಕ್ ಹೊಡಿಸಿಕೊಂಡು ಸಾಯಬೇಕು ಅಷ್ಟೇ.

ಇಷ್ಟೇ ಆಗಿದ್ದರೆ ಈಶ್ವರಪ್ಪರನ್ನು ಸಹಿಸಿಕೊಳ್ಳಬಹುದಿತ್ತೇನೋ. ಆದರೆ ಹಸಿ-ಹಸಿ ಸುಳ್ಳು ಹೇಳಿಕೊಂಡು ಓಡಾಡುತ್ತಿರುವ ಇವರು ಹಿಂದಿನ ಸರ್ಕಾರದ ಕೆಲಸಗಳನ್ನೂ ತನ್ನ ಸಾಧನೆ ಎಂದು ಬೆನ್ನು ತಟ್ಟಿಕೊಳ್ಳುವುದನ್ನು ನೋಡಿದರೆ ನಗಬೇಕೋ-ಅಳಬೇಕೋ ಗೊತ್ತಾಗುತ್ತಿಲ್ಲ.

ಬಿಜೆಪಿಯ ಪ್ರಣಾಳಿಕೆಯಲ್ಲಿ ಪಕ್ಷ ಅಧಿಕಾರಕ್ಕೆ ಬಂದರೆ ಹೆಚ್ಚುವರಿಯಾಗಿ ಐದು ಸಾವಿರ ಮೆ.ವ್ಯಾ. ವಿದ್ಯುತ್ ಉತ್ಪಾದಿಸಲಾಗುತ್ತದೆ ಎಂಬ ಭರವಸೆಯನ್ನು ನೀಡಲಾಗಿತ್ತು. ಈ ಬಗ್ಗೆ ಸಚಿವ ಈಶ್ವರಪ್ಪರನ್ನು ಕೇಳಿದರೆ "ಒಂದು ವರ್ಷದಲ್ಲಿಯೇ ಒಂದು ಸಾವಿರ ಮೆ.ವ್ಯಾ. ವಿದ್ಯುತ್ ಉತ್ಪಾದಿಸಲು ಕ್ರಮ ತೆಗೆದುಕೊಳ್ಳಲಾಗಿದೆ" ಎಂದು ಕೊಚ್ಚಿಕೊಳ್ಳುತ್ತಾರೆ.

ಅರೆ ಆದೆಲ್ಲ ಇಷ್ಟು ಬೇಗ ಹೇಗೆ ಸಾಧ್ಯವಾಯಿತು ಎಂದು ಅಚ್ಚರಿಗೊಂಡು ವಿವರಣೆ ಕೇಳಿದರೆ, "ಬಳ್ಳಾರಿ ಉಷ್ಣ ವಿದ್ಯುತ್ ಸ್ಥಾವರ (ಬಿಟಿಪಿಎಸ್)ನಲ್ಲಿ 500 ಮೆ.ವ್ಯಾ. ವಾರಾಹಿ ಜಲ ವಿದ್ಯುತ್ ಯೋಜನೆಯಲ್ಲಿ 230 ಮೆ.ವ್ಯಾ. ಮತ್ತು ಬೇರೆ ಬೇರೆ ಪ್ರಾಜೆಕ್ಟ್‌ಗಳಲ್ಲಿ 250 ಮೆ.ವ್ಯಾ. ವಿದ್ಯುತ್ ಉತ್ಪಾದನೆಗೆ ಕ್ರಮ ತೆಗೆದುಕೊಳ್ಳಲಾಗಿದೆ" ಎಂದು ವಿವರಿಸುತ್ತಾರೆ.

ವಾಸ್ತವವಾಗಿ ಬಳ್ಳಾರಿ ಉಷ್ಣ ವಿದ್ಯುತ್ ಸ್ಥಾವರ ಕೆಪಿಸಿಯ ಹಳೆಯ ಯೋಜನೆ. ಇದು 2007ರ ಆಗಸ್ಟ್‌ನಲ್ಲಿಯೇ ಕಾರ್ಯಾರಂಭ ಮಾಡಬೇಕಾಗಿತ್ತು. 2100 ಕೋಟಿ ರೂ. ಬಂಡವಾಳ ಹೂಡಿ ಹಿಂದಿನ ಸರ್ಕಾರಗಳು ಸ್ಥಾಪಿಸಿದ ಈ ಸ್ಥಾವರದ ಉದ್ಘಾಟನೆ ಈಗ ಬಿಜೆಪಿಯ ಆಡಳಿತದಡಿ ನಡೆಯಲಿದೆ. ಆದರೆ ಇದನ್ನು ತಮ್ಮ ಸರ್ಕಾರದ ಸಾಧನೆ ಎಂದು ಈಶ್ವರಪ್ಪ ಕ್ಲೈಮ್ ಮಾಡುತ್ತಿದ್ದಾರೆ.

ಇನ್ನು ವಾರಾಹಿ ಪ್ರಾಜೆಕ್ಟ್ ಕೂಡ ಈ ಹಿಂದೆಯೇ ಸಿದ್ಧವಾಗಿದ್ದ ಯೋಜನೆ. ಮುಂದಿನ ನವೆಂಬರ್ ಅಥವಾ ಡಿಸೆಂಬರ್‌ನಲ್ಲಿ ಇಲ್ಲಿ ವಿದ್ಯುತ್ ಉತ್ಪಾದನೆ ಆರಂಭವಾಗಲಿದೆ. ಇದನ್ನು ಕೂಡ ಈಶ್ವರಪ್ಪ ತಮ್ಮ ಸಾಧನೆ ಎನ್ನುತ್ತಿದ್ದಾರೆ.

ಬಸಿರು ಯಾರದ್ದೇ ಆಗಿರಲಿ, ಕೂಸು ಮಾತ್ರ ತನ್ನದು ಎನ್ನುತ್ತಿದ್ದಾರೆ ನಾಚಿಕೆ ಇಲ್ಲದ ಈಶ್ವರಪ್ಪ!

ಆದರೆ ಈಶ್ವರಪ್ಪನವರ ಹಿಂಬಾಲಕರು ಹೇಳುವುದೇ ಬೇರೆ. ಸರ್ಕಾರವನ್ನು ಇಕ್ಕಟ್ಟಿಗೆ ತಳ್ಳಬೇಕು ಎಂಬುದು ಅವರ ಉದ್ದೇಶವಲ್ಲವಂತೆ. ಹೀಗೆ ಯಾವಾಗಲೂ ಸುದ್ದಿಯಲ್ಲಿದ್ದರೆ ಮುಂದೊಂದು ದಿನ ಪಕ್ಷದ ಹೈಕಮಾಂಡ್ ಮುಖ್ಯಮಂತ್ರಿ ಸ್ಥಾನಕ್ಕೆ ತನ್ನ ಹೆಸರನ್ನೂ ಪರಿಶೀಲಿಸಬಹುದು ಎಂಬ ದೂರದೃಷ್ಟಿತ್ವ ಮತ್ತು ದುರಾಸೆಯಿಂದಷ್ಟೇ ಈಶ್ವರಪ್ಪ ಈ ರೀತಿ ವರ್ತಿಸುತ್ತಿದ್ದಾರಂತೆ. ಯಾಕೆಂದರೆ ಯಡ್ಡಿಯ ನಂತರ ಮುಖ್ಯಮಂತ್ರಿ ಗದ್ದುಗೆ ಏರಲು ಕ್ಯೂನಲ್ಲಿರುವವರು ಅನಂತ್ ಕುಮಾರ್ ಮತ್ತು ಈಶ್ವರಪ್ಪ ಮಾತ್ರ. ಅನಂತಕುಮಾರ್‌ಗೆ ಜಾತಿ ಬಲ ಇಲ್ಲದಿರುವುದರಿಂದ ತನ್ನ ಹೆಸರೇ ಚಾಲ್ತಿಗೆ ಬರಬಹುದು ಎಂಬ ಹಗಲುಗನಸಿನಲ್ಲಿ ಈಶ್ವರಪ್ಪ ತೇಲಾಡುತ್ತಿದ್ದಾರಂತೆ.

ಹೀಗೆ ದುಶ್ಮನ್ ಕಿದರ್ ಹೇ ಎಂದರೆ ಬಗಲಮ್ ಮೇ ಎಂಬ ಪರಿಸ್ಥಿತಿ ಯಡ್ಡಿಯದ್ದಾಗಿದೆ. ವಿಧಾನ ಸಭೆಯಲ್ಲಿ ಮಾತಿನ ಮಲ್ಲರೆನಿಸಿ ತಮ್ಮ ವಾಕ್ಚಾತುರ್ಯದಿಂದ ಸರ್ಕಾರವನ್ನು ಪೇಚಿಗೆ ಸಿಲುಕಿಸುತ್ತಿದ್ದ ವಾಟಾಳ್ ನಾಗರಾಜ್, ಶ್ರೀರಾಮರೆಡ್ಡಿ, ಮಾಧುಸ್ವಾಮಿ, ಚಂದ್ರೇಗೌಡ್ರು, ರಮೇಶ್‌ಕುಮಾರ್ ಮೊದಲಾದ ನಾಯಕರು ಚುನಾವಣೆಯಲ್ಲಿ ಪರಾಭವಗೊಂಡರೆಂಬ ಸಂತೋಷಕ್ಕಿಂತಲೂ ತನ್ನ ಸಚಿವ ಸಂಪುಟದ ಸಹೋದ್ಯೋಗಿ ಈಶ್ವರಪ್ಪನ ಆಟಾಟೋಪವೇ ಯಡ್ಡಿ ಪಾಲಿಗೆ ಶನಿಯಾಗಿದೆಯಂತೆ.

ವಿರೋಧ ಪಕ್ಷದ ಸದಸ್ಯರನ್ನು ಹೇಗಾದರೂ ಮಾಡಿ ಮನವೊಲಿಸಬಹುದು. ಆದರೆ ಮುಖ್ಯಮಂತ್ರಿ ಗದ್ದುಗೆಯ ಮೇಲೆ ಸದಾ ಕಣ್ಣಿಟ್ಟಿರುವ ಈಶ್ವರಪ್ಪನನ್ನು ಹೇಗೆ ಸಂಭಾಳಿಸುವುದು ಎಂಬುದರ ಬಗ್ಗೆ ಯಡ್ಡಿ ಗಂಭೀರವಾಗಿ ಚಿಂತಿಸುತ್ತಿದ್ದಾರಂತೆ. ಹೀಗಾಗಿ ಈಶ್ವರಪ್ಪನ ಬಗ್ಗೆ ಯಡ್ಡಿಯ ದಿವ್ಯ ಮೌನ, ಯಡ್ಡಿಯ ವಿರುದ್ಧ ಈಶ್ವರಪ್ಪನ ನಿರಂತರ ಹಾವಳಿ ಮುಂದುವರೆದಿದೆ. ಇದು ಯಾವತ್ತು ಕೊನೆಯಾಗುತ್ತದೋ?

■ ಸದಾಶಿವ ಶೆಣೈ

■ ಯಡ್ಡಿಯ ಬೊಗಳೆ ಭರವಸೆಗಳು! ■


ಮುಖ್ಯ ಮಂತ್ರಿಯಾಗಿರುವ ಯಡ್ಡಿ ಎಂತಹ ಪೆದ್ದ ಶಿಖಾಮಣಿ ಎಂದರೆ ಅವರು ಚುನಾವಣಾ ಭಾಷಣಗಳಲ್ಲಿ ರೈತರಿಗೆ ಉಚಿತ ವಿದ್ಯುತ್ ನೀಡುವುದಾಗಿ ಸುಳ್ಳು ಹೇಳಿದ್ದರು. ಕೆಲ ನಿರ್ಬಂಧಗಳನ್ನು ಹೇರದೇ ರೈತರಿಗೆ ವಿದ್ಯುತ್ ನೀಡಲು ಸಾಧ್ಯವಿಲ್ಲ ಎಂಬುದು ವಿತ್ತ ಸಚಿವರಾಗಿ ಎರಡು ಬಜೆಟ್ ಮಂಡಿಸಿದ್ದ ಅವರಿಗೆ ಚೆನ್ನಾಗಿ ಗೊತ್ತಿತ್ತು.

ಕರ್ನಾಟಕದಲ್ಲಿ ಯಾವ ರಾಜಕೀಯ ಪಕ್ಷ ಅಧಿಕಾರಕ್ಕೆ ಬಂದರೂ ರಾಜ್ಯ ಸರ್ಕಾರಕ್ಕೆ ಸಾಲ ಕೊಡುವ ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಗಳ ಒತ್ತಾಯಕ್ಕೆ ಮಣಿದು ಈಗಾಗಲೇ ಸರ್ಕಾರ 'ವಿತ್ತೀಯ ಹೊಣೆಗಾರಿಕೆ ಕಾಯ್ದೆ'ಯೊಂದನ್ನು ಹೊಂದಿದೆ. ಇದರಿಂದಾಗಿ ವಿತ್ತೀಯ ಕೊರತೆ ಮತ್ತು ಕಂದಾಯ ಕೊರತೆಯನ್ನು ಸರ್ಕಾರಗಳು ನಿಯಂತ್ರಣದಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಇದಕ್ಕಾಗಿ ಸಬ್ಸಿಡಿಗಳನ್ನು ಕಡಿಮೆ ಮಾಡಬೇಕು. ಅಂದರೆ ರೈತರಿಗೆ ಉಚಿತ ವಿದ್ಯುತ್ ಕೊಡಲಾಗುವುದಿಲ್ಲ.

ವಿತ್ತ ಸಚಿವರಾಗಿದ್ದ ಯಡ್ಡಿಗೆ ಇದೆಲ್ಲವೂ ಗೊತ್ತಿದೆ. ಆದರೆ ಚುನಾವಣೆ ಸಂದರ್ಭದಲ್ಲಿ ಮತಗಳಿಸಲು ಜನರಿಗೆ ಬೇಕಾಬಿಟ್ಟಿ ವಚನ ನೀಡಿ, ಈಗ ಅದನ್ನು ಮಾಡದೆ ವಚನಭ್ರಷ್ಟರಾಗಿದ್ದಾರೆ. ಅವರಿಗೆ ಈಶ್ವರಪ್ಪ ಸಾಥ್ ನೀಡುತ್ತಿದ್ದಾರೆ ಅಷ್ಟೇ. ■

ಜನತೆ ಇವರಿಗೂ ಪಾಠ ಕಲಿಸಬೇಕಿದೆ.

ಕನ್ನಡ ಮಾಧ್ಯಮಕ್ಕೆ ಕುತ್ತು ತಂದ ತೀರ್ಪು



ಅಂತೂ ಹದಿಮೂರು ವರ್ಷಗಳ ದೀರ್ಘ ಗರ್ಭಧಾರಣೆ ನಂತರ ರಾಜ್ಯದ ಉಚ್ಚ ನ್ಯಾಯಾಲಯವು ಕಡೆಗೂ ಕೂಸು ಹಡೆದಿದೆ. ಆದರೆ ಅದು ಕನ್ನಡದ ಕೂಸಲ್ಲ, ಮಾತೃ ಮೂಲ ಮಗುವೂ ಅಲ್ಲ. ಯಾಕೆಂದರೆ ಮಾತೃಭಾಷಾ ಮಾಧ್ಯಮಕ್ಕೆ ವಿರುದ್ಧವಾದ ವಿಚಿತ್ರ ವಾದಗಳ ಹೊರೆಹೊತ್ತ 'ನ್ಯಾಯ'ವೊಂದು ಜನ್ಮತಾಳಿದೆ. ಈ ತೀರ್ಪಿನ ಕೆಲಭಾಗಗಳು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದು ಅವುಗಳನ್ನು ಗಮನಿಸಿದಾಗ ವಿಚಿತ್ರ ವಾದಗಳ ವೈಖರಿ ಗೊತ್ತಾಗುತ್ತದೆ. ಇಂಗ್ಲಿಷ್ ಕಲಿಕೆ ಅಪರಾಧವಲ್ಲವೆಂದು ಒತ್ತಿ ಹೇಳುವ 'ತೀರ್ಪು' ಕನ್ನಡ ಮಾಧ್ಯಮದ ಅನುಷ್ಠಾನವನ್ನು 'ಅಪರಾಧ'ವೆಂದು ಪರಿಗಣಿಸಿರುವಂತಿದೆ. ನಾವ್ಯಾರೂ ಇಂಗ್ಲಿಷ್ ಕಲಿಕೆ ಅಪರಾಧವೆಂದು ತಿಳಿದಿಲ್ಲ. ಆದರೆ ಇಂಗ್ಲಿಷ್ ಕಲಿಕೆ ಮತ್ತು ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಕೆ–ಎರಡರಲ್ಲೂ ವ್ಯತ್ಯಾಸವಿದೆ. ಕಡೇಪಕ್ಷ ನಾಲ್ಕನೇ ತರಗತಿಯವರೆಗಾದರೂ ಮಕ್ಕಳು ತಂತಮ್ಮ ಮಾತೃಭಾಷಾ ಮಾಧ್ಯಮದಲ್ಲಿ ಕಲಿಯಲಿ, ಜೊತೆಗೆ ಇಂಗ್ಲಿಷ್ ಅನ್ನು ಒಂದು ಭಾಷೆಯಾಗಿ ಕಲಿಯಲಿ ಎಂದು ಪ್ರತಿಪಾದಿಸುತ್ತ ಬಂದ ನಮ್ಮಂಥವರಿಗೆ ಹೈಕೋರ್ಟ್ ನ್ಯಾಯಾಧೀಶರ ಇಂಗ್ಲಿಷ್ ಪರ ಪಾಠ ವಿಚಿತ್ರವಾಗಿ ಕಾಣಿಸುತ್ತದೆ. ಇವತ್ತಿನ ಸಂದರ್ಭದಲ್ಲಿ ಸಂಪರ್ಕಕ್ಕಾಗಿ "ಇಂಗ್ಲಿಷ್"ಅಗತ್ಯ ಎಂದು ಹೇಳುವ ತೀರ್ಪು ಆ ಕಾರಣದಿಂದ ಇಂಗ್ಲಿಷ್ ಕಲಿಕೆಯೂ ಬೇಕೆಂದು ಹೇಳುವ ಬದಲು ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಯುವ ಅಗತ್ಯವನ್ನು ಹೇಳುತ್ತದೆ. ಇವತ್ತಿನ ಜಗತ್ತಿಗೆ ಇಂಗ್ಲಿಷ್ ಬೇಕೆಂದು ಭಾವಿಸುವ ಘನತೆವೆತ್ತ ನ್ಯಾಯ ಮೂರ್ತಿಗಳು ಸರ್ಕಾರಿ ಮತ್ತು ಅನುದಾನಿತ ಶಾಲೆಗಳಿಗೆ ಕನ್ನಡ ಅಥವಾ ಮಾತೃಭಾಷಾ ಮಾಧ್ಯಮವು ಇರಬಹುದೆಂದು ಹೇಳುವ ಮೂಲಕ 'ಸರ್ಕಾರಿ ಮಕ್ಕಳಿಗೆ' ಜಗತ್ತಿನ ಜ್ಞಾನ ಮತ್ತು ಜಗತ್ತಿನ ಸಂಪರ್ಕ ಸಾಧ್ಯತೆಗಳು ಬೇಡ ಎನ್ನುತ್ತಾರೆಯೇ? ಇಂಗ್ಲಿಷ್ ಮಾಧ್ಯಮದ ಪರವಾಗಿರುವಾಗಲೂ ಅಸಮಾನತೆಯ ಮಾತೇಕೆ? ಹೀಗೆಂದ ಕೂಡಲೇ ಇಂಗ್ಲಿಷ್ ಮಾಧ್ಯಮವನ್ನು ಸಾರ್ವತ್ರಿಕಗೊಳಿಸಬೇಕೆಂದು ನಾನು ಹೇಳುತ್ತಿಲ್ಲ, ಜಗತ್ತಿನ ಜ್ಞಾನ ಮತ್ತು ಸಂಪರ್ಕದ ಸಾಧ್ಯತೆಗಳಿಗೆ ಇಂಗ್ಲಿಷನ್ನು ಪ್ರಾಥಮಿಕ ಹಂತದಲ್ಲಿ ಒಂದು ಭಾಷೆಯಾಗಿ ಕಲಿತರೆ ಸಾಕೆಂದು ಹೇಳುತ್ತಿದ್ದೇನೆ. ಜೊತೆಗೆ ಜ್ಞಾನ ಗಳಿಕೆಯ ಸಾಧ್ಯತೆಗಳನ್ನು ಪ್ರಾದೇಶಿಕ ಭಾಷೆಗಳೂ ಹೆಚ್ಚಿಸಿಕೊಳ್ಳಬಹುದು.

ಕನ್ನಡವನ್ನು ಕುರಿತ ನ್ಯಾಯಾಂಗ ಹೋರಾಟಕ್ಕೆ ತನ್ನದೇ ಇತಿಹಾಸವಿದೆ. ಉಚ್ಚನ್ಯಾಯಾಲಯವು 1994ರ ಸರ್ಕಾರಿ ಆದೇಶದ ವಿರುದ್ಧ ತೀರ್ಪು ನೀಡಿದ್ದು, ಈ ಆದೇಶಕ್ಕೂ ಒಂದು ಇತಿಹಾಸವಿದೆ. ಓದುಗರಿಗಾಗಿ ಇದಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ನೀಡಬಯಸುತ್ತೇನೆ.

1982ರಲ್ಲಿ ಸಲ್ಲಿಸಲಾದ 'ಗೋಕಾಕ್ ವರದಿ'ಯನ್ನು ಆಧರಿಸಿ ಸರ್ಕಾರವು 20-07-1982ರಂದು ಆದೇಶವೊಂದನ್ನು ಹೊರಡಿಸಿತು. 20-07-1982ರ ಇಡಿ113ಎಸ್‌ಒಎಚ್79 ಕ್ರಮಾಂಕದ ಈ ಆದೇಶದಲ್ಲಿ ಪ್ರೌಢಶಾಲಾ ಹಂತದಲ್ಲಿ ಕನ್ನಡವೇ ಏಕೈಕ ಪ್ರಥಮ ಭಾಷೆಯೆಂದು ಜಾರಿಗೊಳಿಸಲಾಗಿತ್ತು, ಅಲ್ಲದೆ ಕನ್ನಡದ ಜೊತೆಗೆ ಇತರೆ ಎರಡು ಭಾಷೆಗಳನ್ನು ಆಯ್ಕೆಮಾಡಿಕೊಳ್ಳುವುದು , ಕನ್ನಡೇತರ ಶಾಲೆಗಳಲ್ಲಿ ಮೊದಲ ವರ್ಷದಿಂದಲೇ ಕನ್ನಡ ಕಡ್ಡಾಯ ಎಂಬ ಅಂಶಗಳು ಈ ಆದೇಶದಲ್ಲಿದ್ದವು. ಕೆಲವರು ರಾಜ್ಯದ ಉಚ್ಚ ನ್ಯಾಯಾಲಯ ದಲ್ಲಿ ಈ ಆದೇಶವನ್ನು ಪ್ರಶ್ನಿಸಿದರು. ಉಚ್ಚ ನ್ಯಾಯಾಲಯವು ಸಂವಿಧಾನದ 14, 29(1) ಮತ್ತು 30(1)ನೇ ವಿಧಿಗಳನ್ನು ಈ ಆದೇಶವು ಉಲ್ಲಂಘಿಸುತ್ತದೆಯೆಂಬ ಕಾರಣದಿಂದ ಸದರಿ ಸರ್ಕಾರಿ ಆದೇಶವನ್ನು ಅನೂರ್ಜಿತಗೊಳಿಸಿತು.

> ರಾಜ್ಯದ ಹೈಕೋರ್ಟ್ ಶಿಕ್ಷಣವನ್ನು ಒಂದು ವ್ಯಾಪಾರ ಎಂದು ಒಪ್ಪಿಕೊಂಡು ಆಘಾತಕರ ತೀರ್ಮಾನಗಳತ್ತ ನಡೆದಿರುವುದು ಸ್ಪಷ್ಟವಾಗಿದೆ. ಶಿಕ್ಷಣ ವ್ಯಾಪಾರಿಗಳಿಗೆ ಧಕ್ಕೆಯಾಗಬಾರದೆಂದು ಪ್ರತಿಪಾದಿಸಿದೆ... ಸರ್ಕಾರದ ನೀತಿಗಳು ಕಾನೂನು ಕಾಯಿದೆಗಳು ಸರ್ಕಾರಿ ವಲಯಕ್ಕೆ ಮಾತ್ರ, ಖಾಸಗಿ ವಲಯಕ್ಕಲ್ಲ ಎಂದು ಈ ತೀರ್ಪು ಹೇಳಿದೆ.... ಆರ್ಥಿಕವಾಗಿ ಉದಾರೀಕರಣದ ಈ ಕಾಲಘಟ್ಟವು ಸಂಪೂರ್ಣವಾಗಿ ಶ್ರೀಮಂತರ ಪರವಾಗಿದೆ. ಬಡವರ ಪರವಾಗಿಲ್ಲ. ಮುಕ್ತ ಮಾರುಕಟ್ಟೆಯಲ್ಲಿ ಬಂಡವಾಳಗಾರನೇ ಅಧಿಪತಿ. ಖಾಸಗೀಕರಣವೇ ಮನುಧರ್ಮಶಾಸ್ತ್ರ. ನ್ಯಾಯಾಂಗವೂ ಮುಕ್ತ ಮಾರುಕಟ್ಟೆ ಮನೋವೃತ್ತಿಯಿಂದ ಪ್ರಭಾವಿತವಾಗಿರುವುದಕ್ಕೆ ಹೊಸ ಸೇರ್ಪಡೆಯೇ ರಾಜ್ಯದ ಹೈಕೋರ್ಟ್ ನೀಡಿರುವ ಈ ತೀರ್ಪು.



ವಿಶೇಷ ಲೇಖನ

■ ಬರಗೂರು ರಾಮಚಂದ್ರಪ್ಪ

ಭಾಷಾ ಮತ್ತು ಧಾರ್ಮಿಕ ಅಲ್ಪಸಂಖ್ಯಾತರ ಹಕ್ಕುಗಳಿಗೆ ಧಕ್ಕೆಯಾಗುತ್ತದೆಯೆಂಬ ಅಂಶ ಇಲ್ಲಿ ಮುಖ್ಯವಾಗಿತ್ತು, ಯಾಕೆಂದರೆ ಕನ್ನಡವೊಂದೇ ಪ್ರಥಮ ಭಾಷೆಯಾದರೆ ಇತರೆ ಮಾತೃಭಾಷೆಯವರು ತಮ್ಮದನ್ನು ಪ್ರಥಮ ಭಾಷೆಯಾಗಿ ಕಲಿಯಲಾಗುತ್ತಿರಲಿಲ್ಲ. ಆದರೂ ನ್ಯಾಯಾಲಯವು ಮಾತೃಭಾಷೆಯ ಜೊತೆಗೆ ಇನ್ನೊಂದು ಭಾಷೆಯನ್ನು ಬೋಧಿಸಲು ಒಪ್ಪಿಗೆ ನೀಡಿ ಒಟ್ಟು ಮೂರು ಭಾಷೆಗಳಲ್ಲಿ ಒಂದಾಗಿ ಕನ್ನಡ ಕಲಿಕೆಯನ್ನು ಕಡ್ಡಾಯಗೊಳಿಸುವ ಅಧಿಕಾರವನ್ನು ಸರ್ಕಾರಕ್ಕೆ ನೀಡಿತು. ಇದು ಪ್ರೌಢಶಾಲೆಗಳಿಗೆ ಮತ್ತು ಭಾಷಾ ಕಲಿಕೆಗೆ ಸಂಬಂಧಿಸಿದ ತೀರ್ಪಾಗಿದ್ದರೂ ಮಾತೃ ಭಾಷೆಗೆ ಮತ್ತು ಅಲ್ಪಸಂಖ್ಯಾತರ ಕನ್ನಡ ಕಲಿಕೆಗೆ ಅವಕಾಶ ಕಲ್ಪಿಸಿದ್ದು ಹಾಗೂ ಸರ್ಕಾರಿ ಆದೇಶವನ್ನು ಸರ್ಕಾರಿ ಶಾಲೆ ಮತ್ತು ಖಾಸಗಿ ಶಾಲೆ ಎಂದು ವಿಂಗಡಿಸದೆ ಎಲ್ಲಕ್ಕೂ ಅನ್ವಯಿಸಲು ಅವಕಾಶವಾಗಿದ್ದನ್ನು ಇಲ್ಲಿ ಗಮನಿಸಬೇಕು.

ಈ ತೀರ್ಪಿನ ವಿರುದ್ಧ ರಾಜ್ಯಸರ್ಕಾರವು ಸರ್ವೋಚ್ಚ ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿತಾದರೂ ಮತ್ತೊಂದು ಆದೇಶವನ್ನು 19-6-1989ರಂದು ಹೊರಡಿಸಿತು. ಇದರ ಪ್ರಕಾರ (1) 1ರಿಂದ 4ನೇ ತರಗತಿಯವರೆಗೆ ಮಾತೃಭಾಷಾ ಮಾಧ್ಯಮ ಕಡ್ಡಾಯ (2) ಕನ್ನಡೇತರ ಶಾಲೆಗಳಲ್ಲಿ 3ನೇ ತರಗತಿಯಿಂದ ಕನ್ನಡವನ್ನು ಎಲ್ಲಾ ಶಾಲೆಗಳು ಐಚ್ಛಿಕವಾಗಿ ಬೋಧಿಸುವುದು (3) ಪ್ರೌಢಶಾಲೆಗಳಲ್ಲಿ ಒಂದು ಭಾಷೆಯಾಗಿ ಕನ್ನಡ ಕಡ್ಡಾಯ. ಇದರ ಜೊತೆಗೆ ಸರ್ಕಾರವು 1987-88ರಿಂದ ಆಂಗ್ಲ ಮಾಧ್ಯಮ ಶಾಲೆಗಳಿಗೆ ಅನುಮತಿ ನೀಡಬಾರದೆಂದು ತೀರ್ಮಾನಿಸಿತ್ತು. ಈ ಎಲ್ಲಾ ಅಂಶಗಳನ್ನು ಪ್ರಶ್ನಿಸಿ ಕೆಲವು ಶಿಕ್ಷಣ ಸಂಸ್ಥೆಗಳು ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿದವು. ಸುಪ್ರೀಂಕೋರ್ಟ್ 1993ರಲ್ಲಿ ಕೊಟ್ಟ ತೀರ್ಪಿನಲ್ಲಿ ಕರ್ನಾಟಕ ಸರ್ಕಾರದ 19-06-1989ರ ಆದೇಶದ ಸಿಂಧುತ್ವವನ್ನು ಎತ್ತಿ ಹಿಡಿಯಿತು. ಜೊತೆಗೆ 'ಭಾಷಾನೀತಿಯನ್ನು ಹೇಗೆ ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕೆಂದು ರಾಜ್ಯಕ್ಕೆ ತಿಳಿದಿದೆ. ಈ ವಿಚಾರದಲ್ಲಿ ನ್ಯಾಯಾಲಯವು ಹಸ್ತಕ್ಷೇಪ ಮಾಡಬಾರದು' ಎಂದೂ ಅಭಿಪ್ರಾಯಪಟ್ಟಿತು.

ಸುಪ್ರೀಂಕೋರ್ಟ್‌ನ ಈ ತೀರ್ಪಿನ ನಂತರ ರಾಜ್ಯ ಸರ್ಕಾರವು 29-4-1994ರ ಇಡಿ28ಪಿಜಿಸಿ94-ಕ್ರಮಾಂಕದ ಹೊಸ ಆದೇಶವನ್ನು ಹೊರಡಿಸಿತು. ಈ ಆದೇಶದ ಪ್ರಕಾರ-(1) 1ರಿಂದ 4ನೇ ತರಗತಿಯವರೆಗೆ ಮಾತೃಭಾಷೆಯೇ ಶಿಕ್ಷಣ ಮಾಧ್ಯಮವಾಗಿರುತ್ತದೆ. (2) ಕನ್ನಡೇತರ ವಿದ್ಯಾರ್ಥಿಗಳು ತಂತಮ್ಮ ಮಾತೃಭಾಷಾ ಮಾಧ್ಯಮದಲ್ಲಿ ಕಲಿಯುವುದರಿಂದ ಪ್ರಾದೇಶಿಕ ಭಾಷೆಯಾದ ಕನ್ನಡವನ್ನು ಮೂರನೇ ತರಗತಿಯಿಂದ ಐಚ್ಛಿಕವಾಗಿ ಕಲಿಯಬಹುದು. ಆದರೆ ಪರೀಕ್ಷೆ ಇಲ್ಲ. (3) 5ನೇ ತರಗತಿಯಿಂದ ಮೂರನೇ ಭಾಷೆಯನ್ನು ಜಾರಿಗೆ ತರಲಾಗುವುದು. ಒಂದು ಮತ್ತು ಎರಡನೇ ಭಾಷೆ ಬಿಟ್ಟು ಮತ್ತೊಂದು ಭಾಷೆಯನ್ನು ಇಲ್ಲಿ ಆಯ್ಕೆ ಮಾಡಿಕೊಳ್ಳಬಹುದು. ಆದರೆ ಉತ್ತೀರ್ಣರಾಗುವುದು ಕಡ್ಡಾಯವಲ್ಲ (4) ಪ್ರೌಢಶಾಲೆಯಲ್ಲಿ ಮೂರು ಭಾಷೆಗಳ ಕಲಿಕೆ ಮತ್ತು ಉತ್ತೀರ್ಣತೆ ಕಡ್ಡಾಯ (5) 4ನೇ ತರಗತಿಯ ನಂತರ ವಿದ್ಯಾರ್ಥಿಗಳು ಯಾವುದೇ ಭಾಷಾ ಮಾಧ್ಯಮವನ್ನು ಆಯ್ಕೆ ಮಾಡಿಕೊಳ್ಳಬಹುದು (6) ಸಿಬಿಎಸ್‌ಇ ಮತ್ತು ಐಸಿಎಸ್‌ಇ ಶಾಲೆಗಳಿಗೆ ರಾಜ್ಯ ಸರ್ಕಾರವು ನಿರಾಕ್ಷೇಪಣಾ ಪತ್ರವನ್ನು (ಎನ್.ಓ.ಸಿ.) ಕೊಡುವಾಗ ಕೆಲವು ನಿಬಂಧನೆಗಳನ್ನು ವಿಧಿಸುವ ಅಂಶಗಳನ್ನು ಈ ಆದೇಶದಲ್ಲಿ ಸೂಚಿಸಲಾಗಿತ್ತು.

ಅಲ್ಲದೆ ಸರ್ಕಾರದ ಹಿಂದಿನ ಆದೇಶದ ಪ್ರಕಾರ (1989) ಮಾತೃಭಾಷಾ ಮಾಧ್ಯಮವನ್ನು ಪೂರ್ವಾನ್ವಯಗೊಳಿಸಬೇಕಾಗಿತ್ತು ಮತ್ತು 1994ರ ಈ ಆದೇಶವು 1ರಿಂದ 4ರವರೆಗೆ ಮಾತೃಭಾಷಾ ಮಾಧ್ಯಮವನ್ನು ಕಡ್ಡಾಯಗೊಳಿಸಿತ್ತು. ಯಥಾಪ್ರಕಾರ ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್‌ಗಳಲ್ಲಿ ಸರ್ಕಾರದ ಆದೇಶವನ್ನು ಪ್ರಶ್ನಿಸಲಾಯಿತು. ಸಹ್ಯಾದ್ರಿ ಶಿಕ್ಷಣ ಸಂಸ್ಥೆಯ ಅರ್ಜಿ ಸಂಬಂಧದಲ್ಲಿ -1999ರಲ್ಲಿ- ಸುಪ್ರೀಂಕೋರ್ಟ್ 'ಈ ಪ್ರಕರಣವೇ ನಿರರ್ಥಕ' ಎಂದು ಹೇಳಿತು. ಅಲ್ಲಿಗೆ ಸುಪ್ರೀಂಕೋರ್ಟ್ 1993 ಮತ್ತು 1999ರಲ್ಲಿ ಮಾತೃಭಾಷಾ ಮಾಧ್ಯಮದ ಪರವಾಗಿ ಅಭಿಪ್ರಾಯ ನೀಡಿ ಆದೇಶ ಹೊರಡಿಸಿದಂತಾಗಿದೆ.

ಆದರೂ 29-4-1994ರ ಆದೇಶವನ್ನು ಪ್ರಶ್ನಿಸಿ ರಾಜ್ಯದ ಹೈಕೋರ್ಟ್‌ಗೆ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಿದ ನ್ಯಾಯಪೀಠವು ಸುಪ್ರೀಂಕೋರ್ಟ್‌ನ ಆದೇಶಗಳನ್ನು ಯಾಕೆ ಪರಿಗಣಿಸಿಲ್ಲ ಎಂದು ಪ್ರಶ್ನಿಸಬೇಕಾಗಿದೆ. ನ್ಯಾಯಾಂಗವು ಸಂವಿಧಾನದ ಚೌಕಟ್ಟು ಮತ್ತು ವಿವಿಧ ತೀರ್ಪುಗಳ–ಅದರಲ್ಲೂ ಸುಪ್ರೀಂಕೋರ್ಟ್‌ನ ತೀರ್ಪುಗಳ–ಆಶಯಗಳನ್ನು ಗಣನೆಗೆ ತೆಗೆದುಕೊಳ್ಳದೆ ನ್ಯಾಯಾಧೀಶರ ಇಷ್ಟಾನಿಷ್ಟಗಳಿಗನುಗುಣವಾಗಿ ನಿರ್ಣಯ ಕೈಗೊಳ್ಳುವ ಅವಕಾಶ ಕೊಟ್ಟಿದೆಯೇ? ಸರ್ಕಾರವು 29-04-1994ರ ಆದೇಶ ಹೊರಡಿಸುವಾಗ ಅದಕ್ಕೆ ಕಾನೂನು ಸಮರದ ಒಂದು ಇತಿಹಾಸವೇ ಇತ್ತೆಂಬುದನ್ನು ನಿರ್ಲಕ್ಷಿಸುವುದು ಸರಿಯೇ? ಹೋಗಲಿ ಈ ತ್ರಿಸದಸ್ಯ ಪೀಠವು ಕೊಟ್ಟಿರುವ ತೀರ್ಪು ನಿಜಕ್ಕೂ ಸಂವಿಧಾನಾತ್ಮಕ ಹಾಗೂ ಸಾಮಾಜಿಕ ನ್ಯಾಯಗಳನ್ನು ಒಳಗೊಂಡಿದೆಯೇ? ಕಡೇ ಪಕ್ಷ ಎರಡು ನ್ಯಾಯಗಳನ್ನು ಸಮತೋಲನಗೊಳಿಸುವ ದೃಷ್ಟಿಕೋನವಾದರೂ ಇದೆಯೇ? ಈ ಪ್ರಶ್ನೆಗಳಿಗೆ 'ಇಲ್ಲ' ಎನ್ನುವುದೇ ಉತ್ತರವಾದೀತು.

ಕನ್ನಡ ಅಥವಾ ಮಾತೃಭಾಷಾ ಮಾಧ್ಯಮಕ್ಕೆ ವಿರೋಧವಾಗಿದೆಯೆಂಬ ಒಂದೇ ಕಾರಣವಲ್ಲದೆ ಪ್ರಜಾಪ್ರಭುತ್ವದ ಕೆಲವು ಮೂಲತತ್ವಗಳನ್ನು ಈ ತೀರ್ಪು ಉಲ್ಲಂಘಿಸಿದೆಯೆಂಬ ಭಾವನೆ ನನ್ನದಾಗಿದೆ. ನಿಜ; ಪ್ರಾಥಮಿಕ ಹಂತದಲ್ಲಿ ಮಾತೃ ಭಾಷಾ ಮಾಧ್ಯಮವೇ ಸರಿಯೆಂದು ಬಹುಪಾಲು ಶಿಕ್ಷಣ ತಜ್ಞರು ಮತ್ತು ಮನೋ ವಿಜ್ಞಾನಿಗಳು ಪ್ರತಿಪಾದಿಸಿದ್ದರೂ, ಭಿನ್ನಮತ ಹೊಂದಿದವರೂ ಇದ್ದಾರೆ. ಆದರೆ ರಾಜ್ಯದ ಉಚ್ಚ ನ್ಯಾಯಾಲಯವು 29-04-1994ರ ಸರ್ಕಾರಿ ಆದೇಶಕ್ಕೆ ವಿರುದ್ಧವಾಗಿ 03-07-2008ರಂದು ನೀಡಿರುವ ತೀರ್ಪು ಭಾಷಾ ಮಾಧ್ಯಮವನ್ನೂ ಮೀರಿದ ಕೆಲ ವಿಚಿತ್ರ ಹಾಗೂ ವಿಪರ್ಯಾಸದ ಅಂಶಗಳನ್ನು ಪ್ರತಿಪಾದಿಸಿದೆ.

ಈ ತೀರ್ಪಿಗೆ ಆಧಾರವಾಗಿ ಸಂವಿಧಾನದ 19(1)(ಜಿ) 26 ಮತ್ತು 30(1) ಈ ವಿಧಿಗಳನ್ನು ಮುಖ್ಯವಾಗಿ ಉಲ್ಲೇಖಿಸಲಾಗಿದೆ. ಹಾಗಾದರೆ ಈ ವಿಧಿಗಳು ವಿದ್ಯಾರ್ಥಿಗಳ ಪೋಷಕರಿಗೆ ಬೋಧನಾ ಮಾಧ್ಯಮದ ಆಯ್ಕೆಯ ಸ್ವಾತಂತ್ರ್ಯವನ್ನು ಅನಾಮತ್ತಾಗಿ ನೀಡುತ್ತವೆಯೆ ಎಂದರೆ ಹಾಗೇನೂ ಇಲ್ಲ. ಈಗ ಸಂವಿಧಾನದ ಈ ವಿಧಿಗಳು ಏನು ಹೇಳುತ್ತವೆಯೆಂದು ನೋಡೋಣ:

19(1)(ಜಿ) ವಿಧಿಯು 'ಭಾರತದ ನಾಗರಿಕರು ಯಾವುದೇ ಉದ್ಯೋಗ, ವೃತ್ತಿ ವ್ಯಾಪಾರ ವಹಿವಾಟುಗಳನ್ನು ನಡೆಸುವ ಹಕ್ಕನ್ನು, ನೀಡುತ್ತದೆ. 26ನೇ ವಿಧಿಯು 'ಧಾರ್ಮಿಕ ವ್ಯವಹಾರವನ್ನು ನಿರ್ವಹಿಸುವ ಸ್ವಾತಂತ್ರ್ಯ'ವನ್ನು ಕೊಡುತ್ತದೆ. 30(1)ನೇ ವಿಧಿಯ ಪ್ರಕಾರ 'ಅಲ್ಪಸಂಖ್ಯಾತರು ತಮ್ಮ ಇಚ್ಛೆಯ ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಿ, ಆಡಳಿತ ನಡೆಸುವ ಹಕ್ಕನ್ನು' ಪಡೆದಿದ್ದಾರೆ.


ರಾಜ್ಯದ ಉಚ್ಚ ನ್ಯಾಯಾಲಯವು ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷಾ ಮಾಧ್ಯಮವನ್ನು ಕಡ್ಡಾಯಗೊಳಿಸಬಾರದೆಂದು ಆದೇಶ ನೀಡಲು ಸಂವಿಧಾನದ ಈ ವಿಧಿಗಳು ಪೂರಕವಾಗಿವೆಯೆ ಅಥವಾ ಅಧಿಕೃತ ಆಧಾರವಾಗಬಲ್ಲವೆ ಎಂಬ ಪ್ರಶ್ನೆಗೆ ಉತ್ತರ ಹುಡುಕಲು ತುಂಬಾ ಕಷ್ಟಪಡಬೇಕಾಗಿಲ್ಲ. ನಿಜ, ಸಂವಿಧಾನದ ವಿವಿಧ ವಿಧಿಗಳನ್ನು ಒಟ್ಟಾರೆ ನೋಡಿ ವ್ಯಾಖ್ಯಾನಿಸುವ ಅಗತ್ಯವೂ ಇರುತ್ತದೆ. ಆದರೆ ತೀರ್ಪೊಂದಕ್ಕೆ ಮೂಲಾಧಾರವಾದ ವಿಧಿಗಳು ಅಸ್ಪಷ್ಟವಾದಾಗ ಇಂತಹ ಅಗತ್ಯ ಬೀಳುತ್ತದೆ. ಇಲ್ಲದಿದ್ದರೆ ಇಲ್ಲ.

ರಾಜ್ಯದ ಹೈಕೋರ್ಟ್ ಶಿಕ್ಷಣವನ್ನು ಒಂದು ವ್ಯಾಪಾರ ಎಂದು ಒಪ್ಪಿಕೊಂಡು ಆಘಾತಕರ ತೀರ್ಮಾನಗಳತ್ತ ನಡೆದಿರುವುದು ಸ್ಪಷ್ಟವಾಗಿದೆ. ತಾನು ನೀಡಿದ ತೀರ್ಪಿಗೆ ಒಂದು ಆಧಾರವಾಗಿ 19(1)(ಜಿ) ವಿಧಿಯನ್ನು ಬಳಸಿಕೊಂಡಿರುವುದು ನನ್ನ ಈ ಮಾತಿಗೆ ಸಮರ್ಥನೆಯಾಗಿದೆ. ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವವರು ಸಾಮಾನ್ಯವಾಗಿ ಶಿಕ್ಷಣವನ್ನು ಒಂದು ಸೇವಾಕ್ಷೇತ್ರವೆಂದು ಘೋಷಿಸುತ್ತಾರೆ. 'ಸರಸ್ವತಿ ಸೇವೆ'ಗೆ ಕಂಕಣಬದ್ಧರಾಗಿರುವ ಆದರ್ಶವನ್ನು ಪ್ರತಿಪಾದಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ಶಿಕ್ಷಣವು 'ಸೇವೆ'ಯಾಗುವ ಬದಲು ಲಾಭದಾಯಕ ವ್ಯಾಪಾರವಾಗಿದೆ. ಶಿಕ್ಷಣತಜ್ಞರ ಜಾಗವನ್ನು ಇಂದು 'ಶಿಕ್ಷಣೋದ್ಯಮಿಗಳು' ಆಕ್ರಮಿಸಿಕೊಂಡಿದ್ದಾರೆ– ಎಂದು ನನ್ನಂಥ ಕೆಲವರು ಟೀಕೆ ಮಾಡುತ್ತಾ ಬಂದಿದ್ದೇವೆ. ಈಗ ರಾಜ್ಯದ ಹೈಕೋರ್ಟ್ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಪಟ್ಟ ತೀರ್ಪಿಗೆ, ವ್ಯಾಪಾರ ವಹಿವಾಟಿಗೆ ಸಂಬಂಧಿಸಿದ 19(1)(ಜಿ) ವಿಧಿಯನ್ನು ಸಹಾಯಕ್ಕೆ ಪಡೆದು 'ಸಮಕಾಲೀನ ಸತ್ಯ'ಕ್ಕೆ ಮನ್ನಣೆ ನೀಡಿದೆ. ಮತ್ತು ಶಿಕ್ಷಣ ಕ್ಷೇತ್ರವು ಸೇವಾ ಕ್ಷೇತ್ರವಲ್ಲ, ವೃತ್ತಿ, ಉದ್ಯೋಗ ಅಥವಾ ವ್ಯಾಪಾರ ಕ್ಷೇತ್ರವೆಂದು ಅಧಿಕೃತವಾಗಿ ಘೋಷಿಸಿದಂತಾಗಿದೆ. ಆದ್ದರಿಂದ ಶಿಕ್ಷಣ ವ್ಯಾಪಾರಿಗಳಿಗೆ ಧಕ್ಕೆಯಾಗಬಾರದೆಂದು ಪ್ರತಿಪಾದಿಸಿದೆ. ಇಷ್ಟಕ್ಕೂ ಈ ವಿಧಿಯನ್ನು ಶಿಕ್ಷಣ ಕ್ಷೇತ್ರದ ವಿಷಯಕ್ಕೆ ಆಧಾರವಾಗಿ ಬಳಸಿದ್ದು ಸಂಗತವೊ ಅಸಂಗತವೋ ಅಸಂಬದ್ಧವೊ ತಜ್ಞರು ಹೇಳಬೇಕು. ಇಲ್ಲದಿದ್ದರೆ ಸಾಮಾನ್ಯರೇ ಈ ಅಸಾಮಾನ್ಯ ತೀರ್ಮಾನದ ಬಗ್ಗೆ ಒಂದು ಅಭಿಪ್ರಾಯಕ್ಕೆ ಬರುತ್ತಾರೆ!

ಇನ್ನು 'ಧಾರ್ಮಿಕ ವ್ಯವಹಾರವನ್ನು ನಿರ್ವಹಿಸುವ ಸ್ವಾತಂತ್ರ್ಯ' ನೀಡುವ 26ನೇ ವಿಧಿಗೂ ಮಾತೃಭಾಷಾ ಮಾಧ್ಯಮದ ವಿರೋಧಿ ನಿರ್ಣಯಕ್ಕೂ ಏನು ಸಂಬಂಧವಿದೆ

ಎಂಬ ಷಷ್ಠೆ. ಮಾತೃಭಾಷಾ ಮಾಧ್ಯಮವು ಯಾರದೇ ಧಾರ್ಮಿಕ ವ್ಯವಹಾರಗಳಿಗೆ ಅಡ್ಡಿ ಬರುವುದಿಲ್ಲ, ಧಾರ್ಮಿಕ ಅಲ್ಪಸಂಖ್ಯಾತರ ಹಕ್ಕುಗಳಿಗೂ ಧಕ್ಕೆ ತರುವುದಿಲ್ಲ. 30(1)ನೇ ವಿಧಿಯ ಪ್ರಕಾರ ಅಲ್ಪಸಂಖ್ಯಾತರು ತಮ್ಮಿಚ್ಛೆಯ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವ ಹಕ್ಕಿಗೂ ಮಾತೃ ಭಾಷಾ ಮಾಧ್ಯಮವು ವಿರೋಧಿಯಾಗುವುದಿಲ್ಲ. ಸಂವಿಧಾನದ 350 ಎ ಮತ್ತು 350 ಬಿ ವಿಧಿಗಳು ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರಿಗೆ ಮಾತೃಭಾಷೆಯಲ್ಲಿ ಕಲಿಯುವ ಹಕ್ಕನ್ನು ನೀಡಿವೆ. ಇಂಗ್ಲಿಷ್ ಮಾಧ್ಯಮದಲ್ಲಿ ಕಲಿಯುವ ಹಕ್ಕನ್ನು ನೀಡಿಲ್ಲ. ಯಾಕೆಂದರೆ ಆಂಗ್ಲೋ-ಇಂಡಿಯನ್ನರನ್ನು ಹೊರತುಪಡಿಸಿ ಬೇರಾವ ಅಲ್ಪಸಂಖ್ಯಾತರಿಗೂ ಇಂಗ್ಲಿಷ್ ಮಾತೃಭಾಷೆಯಲ್ಲ. ಆಂಗ್ಲೋ-ಇಂಡಿಯನ್ನರಿಗೆ ಮಾತ್ರವೇ ಇಂಗ್ಲಿಷ್ ಮಾಧ್ಯಮ ಕಡ್ಡಾಯವಾಗಬಹುದು.

ಹೀಗೆ, 19(1)(ಜಿ), 26 ಮತ್ತು 30(1)- ಈ ಮೂರು ವಿಧಿಗಳಿಗೂ ಮಾತೃ ಭಾಷಾ ಮಾಧ್ಯಮವು ಧಕ್ಕೆ ತರುವುದಿಲ್ಲ. ಆದರೆ ಉಚ್ಚನ್ಯಾಯಾಲಯದ ಪೂರ್ಣ ಪೀಠಕ್ಕೆ ಇದೆಲ್ಲ ಬೇಕಾಗಿಲ್ಲ. ಅದರ ವಾದವು-ಹೌದು ತೀರ್ಪು ಎನ್ನುವ ಬದಲು ವಾದ ಎಂಬ ಪದವೇ ಸರಿಯಾದೀತು-ಸಂಪೂರ್ಣವಾಗಿ ಖಾಸಗಿಯವರ ಹಕ್ಕುಗಳನ್ನು ರಕ್ಷಿಸುವುದಕ್ಕೆ ಮೀಸಲಾಗಿದೆ. ಹೀಗಾಗಿ, ಮಾತೃಭಾಷಾ ಮಾಧ್ಯಮವನ್ನು ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಿಗೆ ಅನ್ವಯಿಸಬಹುದೇ ಹೊರತು ಖಾಸಗಿ, ಅನುದಾನ ರಹಿತ ಶಾಲೆಗಳಿಗೆ ಅನ್ವಯಿಸಲಾಗದು ಎಂದು 'ತೀರ್ಪು' ನೀಡಲಾಗಿದೆ. ಬೋಧನೆಯ ಮಾಧ್ಯಮವು ಪಾಲಕರ ಆಯ್ಕೆ ಎಂದು ಹೇಳಿದ್ದರೂ ಒಟ್ಟಾರೆಯಾಗಿ ಇದು ಖಾಸಗಿ ಶಿಕ್ಷಣೋದ್ಯಮಿಗಳ ಆಯ್ಕೆ ಮತ್ತು ಹಕ್ಕು ಎನ್ನುವ ನಿಲುವು ಸ್ಪಷ್ಟವಾಗಿದೆ.



ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಹಾಗೂ ಪ್ರಜಾಪ್ರಭುತ್ವದ ಒಂದು ಮುಖ್ಯ ಅಂಗವಾದ 'ಸರ್ಕಾರ'ದ ನೀತಿಗಳು ಕಾನೂನು-ಕಾಯಿದೆಗಳು ಸರ್ಕಾರಿ ವಲಯಕ್ಕೆ ಮಾತ್ರ, ಖಾಸಗಿ ವಲಯಕ್ಕಲ್ಲ- ಎಂದು ಈ ತೀರ್ಪು ಸ್ಪಷ್ಟಪಡಿಸಿದೆ. ಎಂಥ ವಿಪರ್ಯಾಸ! ಇನ್ನು ಮೇಲೆ ಹೆಲ್ಮೆಟ್ ಕಡ್ಡಾಯ ಸರ್ಕಾರಿ ನೌಕರರಿಗೆ ಮತ್ತು ಸರ್ಕಾರದಿಂದ ಉಪಕೃತರಾದವರಿಗೆ (ಅನುದಾನಿತರಾದವರಿಗೆ) ಮಾತ್ರ, ಖಾಸಗಿಯವರಿಗೆ ಹೆಲ್ಮೆಟ್ ಹಾಕುವ-ಹಾಕದಿರುವ ಸ್ವಾತಂತ್ರ್ಯವಿದೆಯೆಂದು ಸರ್ಕಾರವು ಆದೇಶ ಹೊರಡಿಸಬೇಕು! ಒಂದಂಕಿ ಲಾಟರಿ ಮತ್ತು ಸಾರಾಯಿ ನಿಷೇಧವು ಖಾಸಗಿ ಲಾಟರಿಪ್ರಿಯರಿಗೂ, ಖಾಸಗಿ ಪಾನಪ್ರಿಯರಿಗೂ ಅನ್ವಯಿಸುವುದಿಲ್ಲವೆಂದು ಹೊಸ ಕಾನೂನು ಮಾಡಬೇಕು! ನಾನು ಹೀಗೆ ಹೇಳಿದರೆ ವಿತಂಡವಾದದಂತೆ ಕಾಣಿಸಬಹುದು. ಆದರೆ ಒಟ್ಟು ಕತೆಯು ನೀತಿ-ಖಾಸಗಿಯವರ ಸ್ವಾತಂತ್ರ್ಯ ರಕ್ಷಣೆಯೇ ಮುಖ್ಯವೆಂಬ ಮನೋಧರ್ಮ ಮತ್ತು ಅದೇ ಮುಖ್ಯ ಮೌಲ್ಯವೆಂಬ ಪ್ರತಿಪಾದನೆಗೆ ನ್ಯಾಯಾಂಗ ಮುಂದಾಗಿದೆ.

ನೋಡಿ, ಇತರೆ ಹಿಂದುಳಿದ ವರ್ಗಗಳಿಗೆ ಮೀಸಲಾತಿ ವಿಷಯ ಬಂದಾಗ ಈ ದೇಶದಲ್ಲಿ ಏನೆಲ್ಲ ನಡೆಯಿತು! ವೃತ್ತಿ ಶಿಕ್ಷಣದ ಸೀಟು ಹಂಚಿಕೆಗೆ ಸಂಬಂಧಪಟ್ಟಂತೆ ಸುಪ್ರೀಂಕೋರ್ಟ್ ಖಾಸಗಿಯವರಿಗೆ ಹೆಚ್ಚು ಅನುಕೂಲವಾಗುವ ತೀರ್ಪು ನೀಡಿತಲ್ಲ! ಆರ್ಥಿಕವಾಗಿ ಉದಾರೀಕರಣದ ಈ ಕಾಲಘಟ್ಟವು ಸಂಪೂರ್ಣವಾಗಿ ಶ್ರೀಮಂತರ ಪರವಾಗಿದೆ. ಬಡವರ ಪರವಾಗಿಲ್ಲ, ಮುಕ್ತ ಮಾರುಕಟ್ಟೆಯಲ್ಲಿ ಬಂಡವಾಳಗಾರನೇ, ಅಧಿಪತಿ. ಖಾಸಗೀಕರಣವೇ ಮನುಧರ್ಮಶಾಸ್ತ್ರ. ನ್ಯಾಯಾಂಗವೂ ಮುಕ್ತ ಮಾರುಕಟ್ಟೆ ಮನೋವೃತ್ತಿಯಿಂದ ಪ್ರಭಾವಿತವಾಗಿರುವುದಕ್ಕೆ ಹೊಸ ಸೇರ್ಪಡೆಯೆಂದರೆ- ರಾಜ್ಯದ ಉಚ್ಚ ನ್ಯಾಯಾಲಯದ ಮಾತೃಭಾಷಾ ಮಾಧ್ಯಮ ವಿರೋಧಿ ವಾದ ಅಥವಾ ತೀರ್ಪು.

19(1)(ಜಿ)-ವಿಧಿಯನ್ವಯ ಎಲ್ಲ ರೀತಿಯ ವೃತ್ತಿ ವ್ಯಾಪಾರಗಳಿಗೆ ಸ್ವಾತಂತ್ರ್ಯವಿರುವುದು ನಿಜವಾದರೂ ಸರ್ಕಾರಕ್ಕೆ ನಿಯಂತ್ರಣ ಮತ್ತು ನಿಬಂಧನೆಗಳನ್ನು ಹೇರುವ ಅಧಿಕಾರವಿದೆ. ಈ ಅಧಿಕಾರವನ್ನು 19(6)ನೇ ವಿಧಿಯು ನೀಡುತ್ತದೆ. ಉಚ್ಚ ನ್ಯಾಯಾಲಯವು ಸರ್ಕಾರದ ನಿಯಂತ್ರಣಾಧಿಕಾರವನ್ನು ಒಪ್ಪುತ್ತದೆಯಾದರೂ 'ಭಾಷಾ ಮಾಧ್ಯಮದ ವಿಷಯದಲ್ಲಿ ನಿರ್ಬಂಧಪಡಿಸುವಂತಿಲ್ಲ' ಎಂದು ಪ್ರತಿಪಾದಿಸಿದೆ. ಹೀಗೆಂದು ಎಲ್ಲಿದೆ? ನಿರ್ಬಂಧ-ನಿಯಂತ್ರಣಗಳು ಸಾಮಾಜಿಕ ಹಿತಕ್ಕನುಗುಣವಾಗಿರಬೇಕೆಂಬ ಆಶಯವಿದೆಯೇ ಹೊರತು ಭಾಷಾ ಮಾಧ್ಯಮವನ್ನು ಹೊರತುಪಡಿಸಿ ಇತರೆ ನಿರ್ಬಂಧಗಳನ್ನು ಹೇರಬಹುದೆಂಬ ವಿವರಣೆಯಾಗಲಿ, ಪರೋಕ್ಷ ಸುಳುಹಾಗಲಿ ಎಲ್ಲೂ ಇಲ್ಲ.

ಹಾಗೆ ನೋಡಿದರೆ ಸಂವಿಧಾನದಿಂದ ದತ್ತವಾದ ಅಧಿಕಾರ ಬಳಸಿ ಸರ್ಕಾರವು 'ರಾಷ್ಟ್ರೀಕರಣ' ಮಾಡಬಹುದಾಗಿದೆ. ಆದರೆ ಉಚ್ಚ ನ್ಯಾಯಾಲಯ 'ಖಾಸಗೀಕರಣ'ದ ಪರವಾಗಿದೆ. ಅದರಲ್ಲೂ ಇಂಗ್ಲಿಷ್ ಖಾಸಗೀಕರಣ!

ಸಂವಿಧಾನಾತ್ಮಕವಾಗಿಯೇ ರಾಜ್ಯಸರ್ಕಾರಗಳು ಶಿಕ್ಷಣ ಕಾಯಿದೆಯನ್ನು ರೂಪಿಸಿ ಅದರಂತೆ ನಡೆಯುವ ಅಧಿಕಾರ ಹೊಂದಿವೆ. ಇದರಲ್ಲಿ ಇರಬಹುದಾದ ಕಾನೂನು ತೊಡಕುಗಳನ್ನು ಅಸಮತೋಲನದ ಅಂಶಗಳನ್ನು ನ್ಯಾಯಾಂಗ ಸರಿಪಡಿಸಬೇಕಾದ್ದು ಸರಿ. ಆದರೆ ನ್ಯಾಯಾಂಗವೇ 'ಅಸಮಾನತೆ'ಗೆ ಕುಮ್ಮಕ್ಕು ಕೊಟ್ಟರೆ ಏನು ಹೇಳಬೇಕು? ಮಾತೃಭಾಷಾ ಮಾಧ್ಯಮವನ್ನು ಖಾಸಗಿ ಅನುದಾನರಹಿತ ಶಿಕ್ಷಣ ಸಂಸ್ಥೆಗಳಿಗೆ ಅನ್ವಯಿಸಲಾಗದು ಎಂದು ಹೇಳುವ ಮೂಲಕ ಒಂದೇ ವಯಸ್ಸಿನ ಮಕ್ಕಳು ಎರಡು ವಿಭಿನ್ನ ಮಾಧ್ಯಮ ಮತ್ತು ಮಾದರಿಗಳಲ್ಲಿ ಪ್ರಾಥಮಿಕ ಶಿಕ್ಷಣ ಪಡೆಯುವುದನ್ನು ಪ್ರೋತ್ಸಾಹಿಸಿದಂತಾಗಿದೆ. ಬಡ ಮತ್ತು ಗ್ರಾಮೀಣ ಮಕ್ಕಳಿಗೆ ಸರ್ಕಾರಿ ಶಾಲೆ, ಉಳ್ಳವರಿಗೆ ಖಾಸಗಿ ಇಂಗ್ಲಿಷ್ ಶಾಲೆ! ಇದು ಇವತ್ತಿನ ಸಾಮಾಜಿಕ ನ್ಯಾಯ!

ಈ ತೀರ್ಪಿನಲ್ಲಿ ಪ್ರಾಥಮಿಕ ಶಿಕ್ಷಣದ ಗುಣಮಟ್ಟ ಹೆಚ್ಚಿಸುವ ಬಗ್ಗೆ ಹೇಳಲಾಗಿದೆ ಮತ್ತು ಕನ್ನಡವನ್ನು ಉಳಿಸಿಕೊಳ್ಳುವ ಇತರೆ ಮಾರ್ಗಗಳನ್ನು ಸೂಚಿಸಲಾಗಿದೆ. 4ನೇ ತರಗತಿಯವರೆಗಾದರೂ ಮಾತೃಭಾಷಾ ಮಾಧ್ಯಮಕ್ಕೆ ಅವಕಾಶ ಕೊಡದೆ ಕನ್ನಡದ ಉಳಿವಿನ ಮಾರ್ಗಗಳನ್ನು ಸೂಚಿಸುವುದು ಒಂದು ವೈಚಿತ್ರ್ಯವೇ ಸರಿ. ಆದರೆ ನ್ಯಾಯಾಲಯದ ಅಧಿಕಾರವನ್ನು ನಾವು ಪ್ರಶ್ನಿಸುವುದು ಸರಿಯಲ್ಲ, ಎಲ್ಲ ಸೂಚನೆಗಳಿಗೂ ಗೌರವ ಕೊಡೋಣ; ತೀರ್ಪನ್ನೂ ಗೌರವದಿಂದ ಕಾಣುತ್ತಲೇ ಗೌರವಪೂರ್ವಕವಾಗಿ ಭಿನ್ನಮತವನ್ನು ಹೇಳೋಣ. ನಿಜ, ಪ್ರಾಥಮಿಕ ಶಿಕ್ಷಣದ ಗುಣಮಟ್ಟ ಮುಖ್ಯ. ನನ್ನ ಮೊದಲ ಪ್ರಶ್ನೆ-'ಗುಣಮಟ್ಟ'ದ ನಿರ್ದಿಷ್ಟ ವಿವರಣೆ ಏನು? ಮೂಲ ಸೌಕರ್ಯಗಳಿದ್ದರೆ ಗುಣಮಟ್ಟವೇ? ಉತ್ತಮ ಮಾರ್ಗದರ್ಶಿ ಪಠ್ಯಗಳು ಮತ್ತು ಸೂಕ್ತ ಬೋಧನೆ ಇದ್ದರೆ ಗುಣಮಟ್ಟವೇ? ಇಂಗ್ಲಿಷ್ ಮಾಧ್ಯಮವಿದ್ದರೆ ಗುಣಮಟ್ಟವೇ? ಯಾವುದು ಗುಣಮಟ್ಟ? ಮೂಲಸೌಕರ್ಯಗಳಿಲ್ಲದ ಕೆಲ ಸರ್ಕಾರಿ ಶಾಲೆಗಳಿರುವಂತೆಯೇ ಖಾಸಗಿ ಇಂಗ್ಲಿಷ್ ಶಾಲೆಗಳೂ ಇವೆ. ಪಠ್ಯಗಳಲ್ಲಿ ವ್ಯತ್ಯಾಸವೇನೂ ಇರುವುದಿಲ್ಲವಾದರೂ ಖಾಸಗಿ ಶಾಲೆಗಳು ಹೆಚ್ಚುವರಿ ಪಠ್ಯ ನಿಗದಿ ಮಾಡುತ್ತವೆ. ಖಾಸಗಿ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಬಾಯಿಪಾಠವನ್ನು ಚೆನ್ನಾಗಿ ಮಾಡಿಸುತ್ತಾರೆ. ಸರ್ಕಾರಿ ಶಾಲೆಗಳಲ್ಲಿ ಎಲ್ಲರೂ ಅಲ್ಲದಿದ್ದರೂ ಕೆಲಸ ಕದಿಯುವ ಕೆಲ ಅಧ್ಯಾಪಕರು ಇರುತ್ತಾರೆ. ಆದರೆ ಎಲ್ಲ ಸರ್ಕಾರಿ ಶಾಲೆಗಳೂ ಕೆಟ್ಟದಾಗಿಲ್ಲ. ಸರ್ಕಾರಿ ಶಾಲೆಯ ಅಧ್ಯಾಪಕರೆಲ್ಲ ಕೆಟ್ಟ ಅಧ್ಯಾಪಕರಲ್ಲ. ಈ ನಾಡಿನ ಬಡಮಕ್ಕಳಿಗೆ, ಕೂಲಿಕಾರ್ಮಿಕರ ಮಕ್ಕಳಿಗೆ, ಬಡ ರೈತರ ಮಕ್ಕಳಿಗೆ ಪಾಠ ಮಾಡುವುದು ಸರ್ಕಾರಿ ಶಾಲೆಯ ಅಧ್ಯಾಪಕರು. ಹೆಚ್ಚು ಅಥವಾ ಸಂಪೂರ್ಣ ಶೈಕ್ಷಣಿಕ ಹಿನ್ನೆಲೆಯಿಲ್ಲದ ಕೌಟುಂಬಿಕ ಪರಿಸರದಿಂದ ಬಂದ ಮಕ್ಕಳನ್ನು ಮತ್ತು ಅವರ ಶಾಲೆಗಳನ್ನು 'ಗುಣಮಟ್ಟ'ದ ಸಿದ್ಧ ಮಾನದಂಡದಿಂದ ಅಳೆಯುವುದು ಹೇಗೆ ಸರಿ? ಇಷ್ಟಕ್ಕೂ ಇಲ್ಲಿಯವರೆಗಿನ ಬಹು ದೊಡ್ಡ ಸಾಧಕರಲ್ಲಿ ಎಷ್ಟು ಜನ ಖಾಸಗಿ ಇಂಗ್ಲಿಷ್ ಶಾಲೆಗಳಲ್ಲಿ ಪ್ರಾಥಮಿಕ ಶಿಕ್ಷಣವನ್ನು ಪಡೆದಿದ್ದಾರೆಂದು ಲೆಕ್ಕ ಹಾಕಿ ನೋಡಿ. ಆಗ ಗುಣಮಟ್ಟದ ಇನ್ನೊಂದು ಮಾನದಂಡ ಸಿಗುತ್ತದೆ. ಮಕ್ಕಳ ಸಾಮಾಜಿಕ-ಆರ್ಥಿಕ ಹಿನ್ನೆಲೆ, ಶಾಲೆಯ ಭೌಗೋಳಿಕ ಸ್ಥಾನ-ಇತ್ಯಾದಿಗಳನ್ನು ಗಮನಿಸದೆ ಸರಳವಾಗಿ ಗುಣಮಟ್ಟದ ನಿರ್ಣಯ ಕೊಡಲಾಗದು.

ಒಟ್ಟಿನಲ್ಲಿ ಸಂವಿಧಾನದ ವಿಧಿಗಳನ್ನು ಖಾಸಗೀಕರಣದ ಪರವಾಗಿ ವ್ಯಾಖ್ಯಾನಿಸಿಕೊಂಡು ಶೈಕ್ಷಣಿಕ ಅಸಮಾನತೆಗೆ ಅಧಿಕೃತ ಮನ್ನಣೆ ಕೊಡುವ ತೀರ್ಪು ಹೊರಬಂದಿದೆ. ಈ ತೀರ್ಪಿನ ವಿರುದ್ಧ ಸುಪ್ರೀಂಕೋರ್ಟ್‌ಗೆ ಹೋಗಬೇಕಾಗಿದೆ.

1993 ಮತ್ತು 1999ರಲ್ಲಿ ಸುಪ್ರೀಂಕೋರ್ಟ್ ಪ್ರಾಥಮಿಕ ಶಿಕ್ಷಣದಲ್ಲಿ ಮಾತೃಭಾಷಾ ಮಾಧ್ಯಮವನ್ನು ಪುರಸ್ಕರಿಸಿದಂತೆ ಮತ್ತೊಮ್ಮೆ ಪುರಸ್ಕರಿಸುತ್ತದೆಯೆಂದು ನಂಬಿ ಕಾನೂನು ಸಮರಕ್ಕೆ ಸಿದ್ಧವಾಗಬೇಕಾಗಿದೆ. ಜೊತೆಗೆ ಸಾಮಾಜಿಕ-ಆರ್ಥಿಕ ತಾತ್ವಿಕತೆಯನ್ನು ಒಳಗೊಂಡಂತೆ ಕನ್ನಡವನ್ನು ಅನ್ನದ ಪ್ರಶ್ನೆಯಾಗಿ ಪರಿಗಣಿಸಿದ ಚಿಂತನೆ ಮತ್ತು ಕ್ರಿಯೆ ಮುಖ್ಯವಾಗಬೇಕು. ■

ಚೆಡ್ಡಿಗಳ ಹಿಂದೆ ಹೋದ ಚೆಡ್ಡಿ ಸಾಯಿತಿಗಳು

ಚೆಡ್ಡಿಗಳು ಅಧಿಕಾರಕ್ಕೆ ಬಂದರೆ ಏನೆಲ್ಲಾ ಸಂಭವಿಸಬಹುದೆಂಬುದಕ್ಕೆ ಸ್ಯಾಂಪಲ್ ಎಂಬಂತೆ ಕೆಲ ಘಟನೆಗಳು ಸಂಭವಿಸಿದೆಯಂತಲ್ಲಾ, ಅತ್ತ ಬೆಳಗಾವಿಯಲ್ಲಿ ಇಂಜಿನಿಯರ್ ಮೇಲೆ ಹಲ್ಲೆ ಮಾಡಿರುವ ಚೆಡ್ಡಿಗಳು ಇತ್ತ ಶಿವಮೊಗ್ಗದಲ್ಲಿ ಸಾಬರ ಮೇಲೆ ಬೀಳಲು ಹೋಗಿ ತಾವೇ ಓಡಿಹೋದ ಘಟನೆ ನಡೆದಿದೆಯಂತಲ್ಲಾ, ಪ್ರತಿದಿನ ಮತೀಯವಾಗಿ ಕೆಣಕುತ್ತಾ ಹೋದಂತೆ, ಕೆಣಕಿಸಿಕೊಂಡವನು ಕೆರಳಿ ತಾನೂ ಸಾಯಲು ತಯಾರಾಗಿ, ಸುಮ್ಮಸುಮ್ಮನೆ ಸಾಯಬಾರದು, ಹತ್ತು ಜನರನ್ನಾದರೂ ತೆಗೆದೇ ಸಾಯಬೇಕೆಂಬ ತೀರ್ಮಾನಕ್ಕೆ ಬರುತ್ತಾನಂತಲ್ಲಾ, "ಹಾಗೇನಾದರೂ ಆದರೆ ಒಂದು ಮುಸ್ಲಿಂ ಸಾವಿಗೆ ಹತ್ತು ಹಿಂದೂ ಸಾವು ಸಂಭವಿಸುತ್ತದಲ್ಲೀ?" ಎಂದು ಚೆಡ್ಡಿಗಳನ್ನು ಕೇಳಿದರೆ, "ಮುಂಬರುವ ಲೋಕಸಭೆ ಚುನಾವಣೆಗೆ ಅದೇ ನಮಗೆ ಬೇಕಿರುವುದು. ಎಲ್ಲಾ ಓಟು ಬಿಜೆಪಿಗೆ ಬರಬೇಕಾದರೆ ನಾವು ಸಾಬರನ್ನು ಕೆರಳಿಸಲೇಬೇಕಿದೆ" ಎಂದವಂತಲ್ಲಾ, ಥೂತ್ತೇರಿ!

*****

ಇತ್ತ ಚೆಡ್ಡಿಗಳು ಸಿಕ್ಕಸಿಕ್ಕ ಅಂಗಡಿಗಳಿಗೆ ನುಗ್ಗಿ, ಸಿಕ್ಕಸಿಕ್ಕದ್ದನ್ನು ಚೆಡ್ಡಿ ಜೇಬಿಗೆ ತುರುಕಿಕೊಳ್ಳುತ್ತ, ಹಾಗೆಯೇ ತಮ್ಮ ವಕ್ರ ಹಲ್ಲುಗಳನ್ನು ಹಳದಿ ಬಣ್ಣದಿಂದ ಬಿಳಿ ಬಣ್ಣಕ್ಕೆ ತಿರುಗಿಸಿಕೊಳ್ಳಲು ಕಾಲ್ಗೇಟ್ ಟೂತ್‌ಪೇಸ್ಟ್ ಮತ್ತು ಬ್ರಶ್‌ಗಳನ್ನು ಬಗಲಿಗೆ ಹಾಕಿಕೊಳ್ಳುತ್ತ ದರೋಡೆ ನಡೆಸುತ್ತಿವೆಯಂತಲ್ಲಾ, ಅತ್ತ ಕರ್ನಾಟಕದ ದಿಗ್ಗಜರಂತಹ ಸಾಹಿತಿಗಳು ಸರ್ಕಾರಿ ಸವಲತ್ತಿನಲ್ಲಿ ಎಡೂರಪ್ಪನ ಹಿಂದೆ ದೆಲ್ಲಿಯವರೆಗೂ ಹೋಗಿದ್ದವಂತಲ್ಲಾ, ರಾಷ್ಟ್ರಕವಿಗಳನ್ನು ಹಿಂದೆ ಬಿಟ್ಟುಕೊಂಡು ಮುಂದೆಮುಂದೆ ಹೋದ ಎಡೂರಪ್ಪನಿಗೆ ಮಾತ್ರ ಪ್ರಧಾನಿ ಭೇಟಿಗೆ ಅವಕಾಶ ಸಿಕ್ಕಿ, ಇನ್ನು ಉಳಿದ ಸಾಹಿತಿಗಳು ಹೊರಗೇ ಉಳಿದದ್ದನ್ನು ಕೇಳಿದ ಕರ್ನಾಟಕದ ಮಾನವಂತ ಸಾಹಿತಿಗಳು "ಅಂತೂ ಮನಮೋಹನ್ ಸಿಂಗ್ ಸರಿಯಾಗಿಯೇ ಮಾಡಿದ್ದಾರೆ. ಪ್ರಯಾಣ ಭತ್ಯೆ ಸಿಗುವುದಾದರೆ ಎಲ್ಲಿಗಾದರೂ ರೆಡಿ, ಯಾರ ಜೊತೆಗಾದರೂ ರೆಡಿ ಎನ್ನುವ ಈ ವಯೋವೃದ್ಧರಿಗೆ ಕಡೆಗಾಲದಲ್ಲಿ ಇಂತಹ ಅವಮಾನವಾಗಬಾರದಿತ್ತು, ಅಂತೂ ಆದದ್ದೂ ಒಳ್ಳೆಯದು" ಎಂದು ಆಡಿಕೊಂಡರಂತಲ್ಲಾ, ಥೂತ್ತೇರಿ!!

*****



ಅತ್ತ ಘಟಾನುಘಟಿ ಸಾಹಿತಿಗಳು ಅಂತಹ ಅವಮಾನ ಅನುಭವಿಸಬೇಕಾದರೆ, ಇತ್ತ ಚಿತ್ರದುರ್ಗದ ಕಡೆಯ ಚಿಲ್ಲರೆ ಸಾಹಿತಿಯೊಂದು ಮುರುಘರಾಜೇಂದ್ರ ಶರಣರನ್ನು ಆಡಿಕೊಂಡು ತನ್ನ ಮಾನವನ್ನು ತಾನೇ ಹರಾಜು ಹಾಕಿಕೊಂಡಿದೆಯಂತಲ್ಲಾ, ಚಿತ್ರದುರ್ಗ ಪ್ರಾಂತ್ಯದಲ್ಲಿ ಮೆರೆದ ತರಾಸು ಎಂಬ ನವಿಲಿನ ಎದುರು ತನ್ನ ಪುಕ್ಕ ತೆರೆದುಕೊಂಡು ಕೈ ಗಾಯ ಮಾಡಿಕೊಂಡ ಈ ಕಾಗೆ ಸಾಹಿತಿಗೆ ಮುರುಘಾ ಶರಣರು ಮಾಡಿದ ಪಾದರಕ್ಷೆ ವ್ಯಾಖ್ಯಾನವನ್ನು ಅರ್ಥೈಸಿಕೊಳ್ಳುವ ಶಕ್ತಿ ಇಲ್ಲವಂತಲ್ಲಾ, ಈ ಸಾಯಿತಿ ಐತಿಹಾಸಿಕ ವಿಷಯಗಳನ್ನು ಗ್ರಹಿಸಿದ್ದು ಹೇಗೆ, ಬರೆದದ್ದು ಹೇಗೆ ಎಂದು ಆತನನ್ನು ಓದದೇ ಇದ್ದವರ ಅಭಿಪ್ರಾಯವಾಗಿದೆಯಂತಲ್ಲಾ, ಮೆಟ್ಟು ಕೀಳೆನ್ನುವುದಾದರೆ ಅವನ್ನ ತುಳಿಯುವ ಕಾಲು ಕೀಳು, ಅವನ್ನು ತಯಾರಿಸುವವನು ಕೀಳು, ಹೀಗೆ ಕೀಳುತನದ ಆಲೋಚನೆಯಲ್ಲಿ ಬದುಕುವವರಿಗೆ ಕಾಲು ಕೂಡ ಶಿರದಷ್ಟೇ ಶ್ರೇಷ್ಠ, ದೇಹದ ಯಾವ ಭಾಗವೂ ಕೀಳಲ್ಲ ಎಂಬ ತಿಳಿವಳಿಕೆಯನ್ನು ಈ ಬಂಡೆಗಲ್ಲು ಸಾಯಿತಿಗೆ ಹೇಳಿಕೊಡಬೇಕಾಗಿದೆಯಂತಲ್ಲಾ, ಥೂತ್ತೇರಿ!!

*****

ಎಡೂರಪ್ಪನ ಎದುರು ನಿಂತು ಹಲ್ಲು ಉಗುರನ್ನು ಕಳೆದುಕೊಂಡಂತಾದ 'ಬಂ' ಮತ್ತೆ ಎದ್ದು ಶಿಕಾರಿಪುರದ ಕಡೆ ಹೊರಟಿದ್ದಾರಂತಲ್ಲಾ, ಶಿಕಾರಿಪುರದಲ್ಲಿ 'ಬಂ' ಪರ ಹೋರಾಡಿ ಪುರುಸಾಸು ನೆಟ್ಟಗಾಗಿರುವ ಹೈದರ ಪ್ರಕಾರ "ಎಡೂರಪ್ಪ ಈ ಚುನಾವಣೆಗೆ ಐವತ್ತು ಕೋಟಿ ಖರ್ಚು ಮಾಡಿದರು ಎಂದು ದೂರುವ ಬಂಗಾರಪ್ಪ, ಕನಿಷ್ಠ ಐದು ಕೋಟಿಯನ್ನಾದರೂ ಖರ್ಚು ಮಾಡಬಾರದೆ? ಕಾಂಗ್ರೆಸ್ ಕೊಟ್ಟ ಹಣ, ಜೆಡಿಎಸ್ ಕೊಟ್ಟ ಹಣ, ಉತ್ತರ ಪ್ರದೇಶದ ಸಮಾಜವಾದಿಗಳು ಕೊಟ್ಟ ಹಣ ಮತ್ತು ಕೆಲ ಬಿಜೆಪಿಗಳೂ ಕೊಟ್ಟ ಹಣವನ್ನು ಹಲವಾರು ಜೇಬಿಗೆ ತುಂಬಿಕೊಂಡು ಹೊರಟುಹೋದರೆ, ಶಿಕಾರಿಪುರದ ಜನ ಸರಿಯಾದ ಗೆಪ್ಪೆಗೆ ಓಟು ಮಾಡಿದರೆ ಹೊರತು ಕೃಷ್ಣದ ಕಡೆ ತಿರುಗಿಯೂ ನೋಡಲಿಲ್ಲ" ಎಂದು ಚಪ್ಪಾಳೆ ಹೊಡೆದು ಕುಣಿದರಂತಲ್ಲಾ, ಥೂತ್ತೇರಿ!!

ಥೂತ್ತೇರಿ
ಯಾಹೂ

*****

ಹಿಂದೊಮ್ಮೆ ಕಾಂಗ್ರೆಸ್ ಪಾರ್ಟಿಗೆ ಜೋಡೆತ್ತಿನ ಗುರುತಿತ್ತು ಎಂಬುದು ಗೊತ್ತೆ ಎಂದು ಜೆಡಿಎಸ್‌ನ ಗುಲಾಮರು ಪ್ರಶ್ನೆ ಹಾಕುತ್ತಿವೆಯಂತಲ್ಲಾ, "ಆ ಜೋಡೆತ್ತಿನ ಗುರುತನ್ನ ಮತ್ತೆ ನಾವು ಪಡೆದುಕೊಂಡರೆ ಸದ್ಯದ ಪಾರ್ಟಿ ಸ್ಥಿತಿಗೆ ಹೊಂದಾಣಿಕೆಯಾಗುತ್ತದೆ. ಬೆಳಗಾಯ್ತೆಂದರೆ ನಾವು ಕುಮಾರಣ್ಣ ರೇವಣ್ಣರ ಆರಾಧನೆ ಮಾಡುತ್ತ ಅವರು ಹೇಳಿದ್ದನ್ನೆ ಹೇಳುತ್ತ ಕಾಲ ಹಾಕಬೇಕಾಗಿದೆ. ಇಂತದೆಲ್ಲಾ ಆ ದತ್ತನಿಗೇ ಸರಿ. ನಮ್ಮ ಕೈಲಾಗಲ್ಲ" ಎಂದು ಜೆಡಿಎಸ್‌ನ ಗತವಗಳು ಹೇಳಿದ್ದನ್ನು ಕೇಳಿಸಿಕೊಂಡ ರೇವಣ್ಣ, ಕೂಡಲೇ "ನಮ್ಮ ಪಾರ್ಟಿ ಹೊಡೆಯಲು ಸಂಚು ಮಾಡಿದ್ದಾರೆ. ಬೇಕಿದ್ದರೆ ನನ್ನನ್ನು ಹೊಡೆಯಲಿ ಆಗ ತೋರಿಸುತ್ತೇನೆ" ಎಂದು ತೊಡೆ ತಟ್ಟಿದರಂತಲ್ಲಾ, ಥೂತ್ತೇರಿ!!! ■

ವಿಜಯೇಂದ್ರನೆಂಬ ಕುಮಾರ ಕಂಠೀರವ ಪುತ್ರನ ಪರ್ಯಾಯ ಸರ್ಕಾರ

ಯಾರಲ್ಲೂ ಎದುರುತ್ತರವಿಲ್ಲ. ರೇಸ್‌ಕೋರ್ಸ್ ಎದುರಿನ ಮುಖ್ಯಮಂತ್ರಿ ಗೃಹ ಕಚೇರಿಯಾಗಲಿ, ವಿಧಾನ ಸೌಧದ ಸಿಎಂ ಛೇಂಬರಿನಲ್ಲಾಗಲಿ ಕುಮಾರ ಕಂಠೀರವನ ಆರ್ಭಟಕ್ಕೆ ಯಾರೂ ತಿರುಗುತ್ತರ ಕೊಡುವಂತಿಲ್ಲ. ಮುಖ್ಯಮಂತ್ರಿಗಳ ಪ್ರಿನ್ಸಿಪಲ್ ಸೆಕ್ರೆಟರಿ ವಿ.ಪಿ. ಬಳಿಗಾರ್ ಹೇಳಿಕೇಳಿ ನಿಷ್ಠುರಿ. ಕೈಬಾಯಿ ಗಲೀಜು ಮಾಡಿಕೊಂಡವರಲ್ಲ. ಅದೇನು ಗ್ರಹಚಾರವೋ ಏನೋ ಇಲ್ಲಿಗೆ ವಾರದ ಹಿಂದೆ ವಿಜಯೇಂದ್ರನಿಂದ ವಾಚಾಮಗೋಚರ ಉಗಿಸಿಕೊಂಡರಂತೆ!



ಮುಖ್ಯಮಂತ್ರಿಗಳ ಪಕ್ಕಾ ಚೇಲಾ ಸಿದ್ದಲಿಂಗ ಸ್ವಾಮಿಯನ್ನು ಮನೆಗೇ ಕರೆಸಿಕೊಂಡ ವಿಜಯೇಂದ್ರ ಮುಖಾಮೂತಿ ನೋಡದೇ ಹಾಕಿ ಚಚ್ಚಿದನಂತೆ!

ಮುಖ್ಯವಾಗಿ ಸೊಂಡೂರಿನ ಅರಣ್ಯ ಭೂಮಿಯಲ್ಲಿ ಫಲವತ್ತಾದ ಗಣಿಯೊಂದಕ್ಕೆ ಮುಖ್ಯಮಂತ್ರಿ ಪುತ್ರ ವಿಜಯೇಂದ್ರ ಕೈಹಾಕಿದ್ದಾನಂತೆ. ಅದಕ್ಕೆ ಗಣಿ ರೆಡ್ಡಿಗಳದೇ ಕುಮ್ಮಕ್ಕಂತೆ. ಜೊತೆಗೆ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಪುತ್ರ ಜಗದೀಶನ ಜೊತೆ ಭಾರಿ ಲ್ಯಾಂಡ್‌ಡೀಲ್ ಒಂದಕ್ಕೆ ವಿಜಯೇಂದ್ರ ಕೈಯಿಟ್ಟಿದ್ದಾನಂತೆ. ಎಂಬೆಸ್ಸೀ ಬಿಲ್ಡರ್ಸ್‌ನ ಖದೀಮ ಜೇತು ವೀರ್ವಾನಿ ಮತ್ತು ಆದರ್ಶ ಬಿಲ್ಡರ್ಸ್‌ನ ಭೂಕಂಟಕ ಜೈಶಂಕರ್ ಇಬ್ಬರೂ ಸದ್ಯ ವಿಜಯೇಂದ್ರನ ಎಡಗೈ ಬಲಗೈಗಳಂತೆ!




ಹೀಗೆ ಮೇಲಿಂದ ಮೇಲೆ ಕೇಳಿಬರುವ ಮುಖ್ಯಮಂತ್ರಿ ಯಡಿಯೂರಪ್ಪನವರ ದ್ವಿತೀಯ ಪುತ್ರ ವಿಜಯೇಂದ್ರನ ರೌದ್ರಾವತಾರ, ಹಿರಿಯ ಅಧಿಕಾರಿಗಳನ್ನು ಗದರುವ ಆತನ ಅಸದಳ ಪೌರುಷ, ಕೈಗೆತ್ತಿಕೊಂಡ ಲ್ಯಾಂಡ್ ಡೀಲುಗಳು, ಶುರು ಹಚ್ಚಿಕೊಂಡ ಗಣಿ ಲೂಟಿ ಇತ್ಯಾದಿಗಳ ಅಸಲಿಯತ್ತೇನೇ ಇದ್ದರೂ ಒಂದಂತೂ ಸತ್ಯ. ಒಂದೆಡೆ ಅಪ್ಪನ ಅಧಿಕೃತ ಸರ್ಕಾರ ಶುರುವಾಗಿರುವುದಕ್ಕಿಂತಲೂ ವೇಗವಾಗಿ ಮಗನ ಪರ್ಯಾಯ ಸರ್ಕಾರ ನಡೆಯುತ್ತಿದೆ.

ಯಡ್ಡಿಯ ಹಿರಿಮಗ ರಾಘವೇಂದ್ರ ಸದ್ಯ ಶಿಕಾರಿಪುರ ಮತ್ತು ಶಿವಮೊಗ್ಗದ ಉಸಾಬರಿ ನಿಭಾಯಿಸುತ್ತಿದ್ದರೆ ಎರಡನೇ ಮಗ ವಿಜಯೇಂದ್ರ ಅಬಕಾರಿ, ಗಣಿ, ಅರಣ್ಯ, ನಗರಾಭಿವೃದ್ಧಿ ಮತ್ತು ಹಣಕಾಸು ಇಲಾಖೆಗಳೆಲ್ಲಕ್ಕೂ ಮೂಗು ತೂರಿಸುತ್ತಿದ್ದಾನೆ. ಅಪ್ಪ ಉಪಮುಖ್ಯಮಂತ್ರಿಯಾಗಿದ್ದಾಗಲೇ ವಾಣಿಜ್ಯ ತೆರಿಗೆ ಇಲಾಖೆಯ ಆಯಕಟ್ಟಿನ ಹುದ್ದೆಗಳಿಗೆಲ್ಲ ವಿಜಯೇಂದ್ರನ ಚೇಲಾಗಳೇ ನೇಮಕಗೊಂಡಾಗಿತ್ತು. ಅಬಕಾರಿ ಇಲಾಖೆಯ ವಿಚಕ್ಷಣದಳದ ಜಂಟಿ ಕಮೀಷನರ್ ಈರಪ್ಪ ಮತ್ತೊಬ್ಬ ಉನ್ನತಾಧಿಕಾರಿ ನಾಗೇಂದ್ರಪ್ಪ ಇಬ್ಬರೂ ಕಳ್ಳಭಟ್ಟಿ ದುರಂತಕ್ಕೆ ಸಿಲುಕಿ ಎತ್ತಂಗಡಿಯಾಗದಂತೆ ವಿಜಯೇಂದ್ರನೇ ನಿಂತು ಕಾಪಾಡಿದ್ದ. ಆ ಮಟ್ಟಿಗೆ ಮಗನನ್ನು ಬೆಳೆಸಲು ಬಿಟ್ಟಿದ್ದ ಯಡಿಯೂರಪ್ಪ ಮತ್ತೊಂದೆಡೆ ತನ್ನ ಅಂತಃಪುರದ ಚೇಲಾ ಸಿದ್ದಲಿಂಗಸ್ವಾಮಿಯನ್ನು ಮಗನಿಗಿಂತಲೂ ಒಂದು ಕೈ ಮೇಲೆಂಬಂತೆ ಪೋಷಿಸಿದ್ದುಂಟು.

ಈ ಮಧ್ಯೆ ಬಿಜೆಪಿಗೇ ಬಹುಮತ ದಕ್ಕಿ ಯಡ್ಡಿ ಮುಖ್ಯಮಂತ್ರಿಯಾಗುತ್ತಿದ್ದಂತೆ ವಿಜಯೇಂದ್ರನನ್ನು ಹಿಂದಿನಷ್ಟು ಹತ್ತಿರಕ್ಕೆ ಬಿಟ್ಟುಕೊಳ್ಳಲಿಲ್ಲ. ಅದಕ್ಕಿದ್ದ ಮುಖ್ಯ ಕಾರಣ ಯಡ್ಡಿಯ ಅಂತಪುರದ ಪರಮಾಪ್ತ ಸಿದ್ದಲಿಂಗಸ್ವಾಮಿ. ಹಿಂದಿನಿಂದಲೂ ಯಡ್ಡಿಯ ವರ್ಗಾವರ್ಗಿ ವಸೂಲಾತಿ, ಆಮದನಿ ಇತ್ಯಾದಿಗಳನ್ನೆಲ್ಲ ಅಚ್ಚುಕಟ್ಟಾಗಿ ನಿಭಾಯಿಸುತ್ತಲೇ ಬಂದ ಸಿದ್ದಲಿಂಗಸ್ವಾಮಿಯನ್ನು ಯಡಿಯೂರಪ್ಪ ಅಪಾಟ ನಂಬುತ್ತಾರೆಂದರೆ ಅದಕ್ಕೆ ಶೋಭಾ ಕರಂದ್ಲಾಜೆಯ ಜೊತೆ ಆತನಿಗಿದ್ದ ನಂಟಲ್ಲದೇ ಬೇರೇನೂ ಇರಲಿಲ್ಲ. ಹಿಂದೊಮ್ಮೆ ಇದೇ ಕಾರಣಕ್ಕೆ ಯಡ್ಡಿ ಮಗ ವಿಜಯೇಂದ್ರ ಸಿದ್ದಲಿಂಗ ಸ್ವಾಮಿಯನ್ನು 'ತಲೆಹಿಡುಕ ನನಮಗನೇ...'ಎಂದು ಹಿಡಿದು ಬಡಿದಿದ್ದ. ಇನ್ನು ಮುಖ್ಯಮಂತ್ರಿಯಾದ ಮೇಲೆ ಬಿಡುತ್ತಾನಾ? ಜೊತೆಗೆ ಶೋಭಾ ಕರಂದ್ಲಾಜೆಯ ಅಸಂಖ್ಯಾತ ವ್ಯವಹಾರಗಳನ್ನೆಲ್ಲ ಇದೇ ಸಿದ್ದಲಿಂಗನೇ ನಿಂತು ನೆರವೇರಿಸಬೇಕು. ಇಂಥಾ ಸ್ಥಿತಿಯಲ್ಲಿ ವಿಜಯೇಂದ್ರ ಹಾವಳಿಗಿದರೆ ಪ್ರಮುಖ ಟ್ರಾನ್ಸ್‌ಫರ್, ಡೀಲಿಂಗ್ ಇತ್ಯಾದಿಗಳೆಲ್ಲ ಎಕ್ಕುಟ್ಟಿ ಕರಂದ್ಲಾಜೆ ತಲೆಬಿಸಿ ಮಾಡಿಕೊಳ್ಳುತ್ತಾಳೆ. ಆ ಹೊತ್ತಿಗಾಗಲೇ ಮಗನ ಹಾವಳಿ ವಿರುದ್ಧ ಸಿದ್ದಲಿಂಗಸ್ವಾಮಿ ಯಡ್ಡಿಯ ತಲೆ ಕೆಡಿಸಿಬಿಟ್ಟಿದ್ದ.

ಇದೆಲ್ಲವನ್ನೂ ಲೆಕ್ಕ ಹಾಕಿಯೇ ವಿಜಯೇಂದ್ರನನ್ನು ಅಧಿಕಾರದಿಂದ ಹೊರಗಿಡಲು ನಿರ್ಧರಿಸಿದ ಯಡ್ಡಿಗೆ ಅದು ಎಷ್ಟೊಂದು ಕಷ್ಟಕರವೆಂಬುದು ಅರ್ಥವಾಗಲು ಹೆಚ್ಚು ಹೊತ್ತು ಹಿಡಿಯಲಿಲ್ಲ. ಮುಲಾಜಿಲ್ಲದೇ ಮುಖ್ಯಮಂತ್ರಿ ನಿವಾಸದಲ್ಲಿ ಪ್ರತಿಷ್ಠಾಪಿತನಾದ ವಿಜಯೇಂದ್ರ ಇಲ್ಲಿಗೆ ವಾರದ ಹಿಂದಷ್ಟೇ ಪ್ರಿನ್ಸಿಪಾಲ್ ಸೆಕ್ರೆಟರಿ ಬಳಿಗಾರರನ್ನು ಕರೆಸಿಕೊಂಡು ವಾಚಾಮಗೋಚರ ಉಗಿದು ಬಿಟ್ಟ. ಅದು ಸೊಂಡೂರಿನ ಉಬ್ಬಲಗುಂಡಿ ಗಣಿಯ ಬಹುಮುಖ್ಯ ಡೀಲಾಗಿತ್ತು. ಮೈಸೂರು ಮಿನರಲ್ಸ್‌ನಿಂದ ಗಣಿಗಾರಿಕೆಯ ಗುತ್ತಿಗೆ ಪಡೆದಿದ್ದ ಆಂಧ್ರದ ಆಸಾಮಿಗಳಿಬ್ಬರ



ಲೈಸೆನ್ಸ್ ಅನ್ನು ಕುಮಾರಸ್ವಾಮಿ ಸರ್ಕಾರ ರದ್ದುಗೊಳಿಸಿತ್ತು. ಏಕೆಂದರೆ ಅದು ಅರಣ್ಯಭೂಮಿ. ಅದರ ವಿರುದ್ಧ ಅವರಿಬ್ಬರೂ ಹೈಕೋರ್ಟ್ ಮೆಟ್ಟಿಲೇರಿದ್ದರು. ಬಿಜೆಪಿ ಅಧಿಕಾರಕ್ಕೆ ಬರುತ್ತಿದ್ದಂತೆ ಅವರಿಬ್ಬರನ್ನೂ ಯಡ್ಡಿ ಮಗನಿಗೆ ತಗುಲಿ ಹಾಕಿದ್ದು ಗಣಿಕಳ್ಳ ಜನಾರ್ದನ ರೆಡ್ಡಿ. ಗಂಡಾಗುಂಡಿ ಮಾಡಿಯಾದರೂ ಉಬ್ಬಲಗುಂಡಿ ಗಣಿಯಿಂದ ಅದಿರು ದೋಚಲಾರಂಭಿಸಿದರೆ ದಿನಕ್ಕದು ಕಮ್ಮಿಯೆಂದರೂ ಮೂವತ್ತು ಲಕ್ಷದ ಆದಾಯ ತರುತ್ತದೆ.

ಈಗಾಗಲೇ ಅದಿರು ದೋಚಿ ಚೂರುಪಾರು ಅವಶೇಷಗಳಂತೆ ಅಳಿದುಳಿದ ಅದಿರಿಗೆ ಒಮ್ಮೆ ಲೈಸೆನ್ಸ್ ಸಿಕ್ಕಿತೆಂದರೆ ಅದನ್ನೇ ನೆಪ ಮಾಡಿಕೊಂಡು ಪಕ್ಕದ ಅರಣ್ಯ ಭೂಮಿಗೆ ಕನ್ನ ಹಾಕಬಹುದು. ಅದ್ಯಾವತ್ತೋ ಅಗೆದು ಸಂಗ್ರಹಿಸಿಟ್ಟಿದ್ದ ಅದಿರನ್ನು ತಾನು ಸಾಗಿಸುತ್ತೇನೆಂದು ಲೈಸೆನ್ಸ್ ಪಡೆದು ಪಕ್ಕದ ಅರಣ್ಯ ಭೂಮಿಯಿಂದ ಅದಿರು ದೋಚುವ ಉಪಾಯ ಹೇಳಿಕೊಟ್ಟ ಜನಾರ್ದನ ರೆಡ್ಡಿ ಅದಕ್ಕೆಂದು ಆಂಧ್ರದ ಕಾಂಗ್ರೆಸ್ ನಾಯಕ ಸುಬ್ಬರಾಮಿ ರೆಡ್ಡಿಯ ಮೂಲಕ ಕೇಂದ್ರ ಅರಣ್ಯ ಮಂತ್ರಿ ಜೈಪಾಲ್ ರೆಡ್ಡಿಯಿಂದ ನಿರಕ್ಷೇಪಣಾ ಪತ್ರ ಕೊಡಿಸುತ್ತೇನೆಂದು ವಿಜಯೇಂದ್ರನ ತಲೆ ಕೆಡಿಸಿದ್ದಾನೆ.

ಆದರೆ ಎಲ್ಲಕ್ಕೂ ಮುನ್ನ ಗಣಿ ಇಲಾಖೆ ಇದಕ್ಕೊಂದು ಸುಳ್ಳು ಪ್ರಮಾಣಪತ್ರ ಕೊಡಬೇಕು. ಉಬ್ಬಲಗುಂಡಿಯಲ್ಲಿ ಈಗಾಗಲೇ ಅಗೆದಿಟ್ಟ ಅದಿರಿನ ಸಂಗ್ರಹವಿದೆಯೆಂದೂ ಅದನ್ನು ಸಾಗಿಸಲು ಕೇಂದ್ರ ಸರ್ಕಾರದ ಅನುಮತಿ ಅಗತ್ಯವೆಂದೂ ರಾಜ್ಯ ಗಣಿ ನಿರ್ದೇಶನಾಲಯ ಒಮ್ಮೆ ಖೊಟ್ಟಿ ಪ್ರಮಾಣಪತ್ರ ಕೊಟ್ಟಿತೆಂದರೆ ಅದು ಮತ್ತೊಂದು ಅನಾಹುತಕ್ಕೆ ದಾರಿ ಮಾಡಿಕೊಟ್ಟಂತೆಯೇ. ಏಕೆಂದರೆ ಗಣಿಕಳ್ಳ ಜನಾರ್ದನ ರೆಡ್ಡಿ ಮತ್ತು ಆತನ ಅಣ್ಣ ಕರುಣಾಕರ ರೆಡ್ಡಿ ಈಗಾಗಲೇ ಇಂಥ ಒಂಭತ್ತು ಕಳ್ಳ ಗಣಿಗಳಿಗೆ ಕೋರಿಕೆ ಸಲ್ಲಿಸಿದ್ದಾರೆ. ಇವೆಲ್ಲವೂ ಅರಣ್ಯ ಭೂಮಿಗೆ ಕನ್ನ ಹಾಕುವ ಅರ್ಜಿಗಳೇ!

ಮಗನ ಹಂಗಿಗೆ ಬಿದ್ದು ಒಮ್ಮೆ ಉಬ್ಬಲಗುಂಡಿ ಕಳ್ಳ ಗಣಿಗೆ ಪರವಾನಗಿ ಕೊಟ್ಟನೆಂದರೆ ಅದನ್ನೇ ಮುಂದಿಟ್ಟುಕೊಂಡು ಗಣಿ ರೆಡ್ಡಿಗಳು ತಮ್ಮ ಒಂಭತ್ತು ಅರ್ಜಿಗಳಿಗೆ ಸಹಿ ಪಡೆಯುತ್ತಾರೆಂಬ ಆತಂಕ ಯಡ್ಡಿಯದು. ಹಾಗಂತ ಮಗ ವಿಜಯೇಂದ್ರ ಬಿಡಬೇಕಲ್ಲ; ಅರಣ್ಯ ಖಾತೆ ಮತ್ತು ಗಣಿ ಖಾತೆಗಳೆರಡೂ ಅಪ್ಪನ ಕೈಯಲ್ಲೇ ಇರುವಾಗ ಯಾವ ಮುಲಾಜು?

ಅದಕ್ಕೇ ಪ್ರಿನ್ಸಿಪಲ್ ಸೆಕ್ರೆಟರಿ ಬಳಿಗಾರರನ್ನು ಕರೆದು ವಾಚಾಮಗೋಚರ ಉಗಿದ ವಿಜಯೇಂದ್ರ ಇದಕ್ಕೆಲ್ಲ ಅಪ್ಪನ ಚೇಲಾ ಸಿದ್ದಲಿಂಗಸ್ವಾಮಿ ಚಾಡಿ ಚುಚ್ಚಿದ್ದೇ ಕಾರಣವೆಂದು ಆತನ ಮೇಲೆ ಎರಡನೇ ಬಾರಿ ಹಲ್ಲೆ ನಡೆಸಿದ್ದಾನೆ. ಇದು ಗೊತ್ತಾಗಿದ್ದೇ ಯಡ್ಡಿ ಮಗನನ್ನು ಕರೆದು ಕಾಟಾಚಾರಕ್ಕಷ್ಟೇ ರೇಗಿದ್ದಾರೆ. ಒಂದೆಡೆ ಪುತ್ರ ವ್ಯಾಮೋಹ. ಮತ್ತೊಂದೆಡೆ ಕಳಂಕದ ಪಾಪಪ್ರಜ್ಞೆ. ಮಗನಿಗೆ ಗಣಿ ಮಾಡಿ ಕೊಟ್ಟರೆ ಅದಕ್ಕೆ ಪ್ರತಿಯಾಗಿ ರೆಡ್ಡಿಗಳಿಗೆ ಒಂಭತ್ತು ಕಳ್ಳಗಣಿ ಮಂಜೂರು ಮಾಡಬೇಕು. ಜೊತೆಗೆ ಕಟ್ಟಾ ಜಗ್ಗನ ಪಾಲುದಾರಿಕೆಯಲ್ಲಿ ದೇವನಹಳ್ಳಿ ಏರ್‌ಪೋರ್ಟ್ ಹಿಂಭಾಗದ ಬಂಡಿಕೊಡಿಗೆಹಳ್ಳಿಯ 70 ಎಕರೆ ಜಮೀನನ್ನು ಡೀನೋಟಿಫೈ ಮಾಡಿಕೊಡುವ ಇನ್ನೊಂದು ವ್ಯವಹಾರಕ್ಕೆ ವಿಜಯೇಂದ್ರ ಕೈಹಾಕಿದ್ದಾನೆ. ಇದು ಹೇಳಿಕೇಳಿ ಎಂಬೆಸ್ಸೀ ಬಿಲ್ಡರ್ಸ್ ಖದೀಮ ಜೇತೂ ವೀರ್ವಾನಿಯ ಡೀಲು. ಆದರ್ಶ ಬಿಲ್ಡರ್ಸ್ ಧಣಿ ಜೈಶಂಕರ್ ಈಗಾಗಲೇ ಸರ್ಜಾಪುರದಲ್ಲಿ ನೂರೆಕರೆ ಭೂಮಿಯನ್ನು ರೈತರಿಂದ ಕಿತ್ತುಕೊಡುವಂತೆ ವಿಜಯೇಂದ್ರನಿಗೆ ದುಂಬಾಲು ಬಿದ್ದಿದ್ದಾನೆ. ಪೊಲೀಸ್ ಇನ್ಸ್‌ಪೆಕ್ಟರ್‌ಗಳ ವರ್ಗಾವರ್ಗಿಗೆ ಸಂಬಂಧ ಪಟ್ಟಂತೆ ಈಗಾಗಲೇ ವಿಜಯೇಂದ್ರ ಅನೇಕರಿಂದ ಟೋಕನ್ ಅಡ್ವಾನ್ಸ್ ಕಿತ್ತಿದ್ದಾನೆ. ವಾಣಿಜ್ಯ ತೆರಿಗೆ ಇಲಾಖೆಗೆ ಸಂಬಂಧಪಟ್ಟಂತೆ ಕಮರ್ಷಿಯಲ್ ಟ್ಯಾಕ್ಸ್ ಅಧಿಕಾರಿಗಳ ಒಂದು ಹಿಂಡೇ ವಿಜಯೇಂದ್ರನ ಸುತ್ತ ಠಳಾಯಿಸುತ್ತಿದೆ. ಇದೆಲ್ಲವನ್ನೂ ಪೂರೈಸುವಂತೆ ಪ್ರಿನ್ಸಿಪಲ್ ಸೆಕ್ರೆಟರಿ ಬಳಿಗಾರರನ್ನು ವಿಜಯೇಂದ್ರ ಪೀಡಿಸುತ್ತಿದ್ದಾನೆ.

ಮಗ ಹೇಳಿದ್ದನ್ನೆಲ್ಲ ಮಾಡುತ್ತಾ ಹೋದರೆ ಕರಂದ್ಲಾಜೆ ಮುನಿಸಿಕೊಳ್ಳುತ್ತಾಳೆ. ಏಕೆಂದರೆ ಚೇಲಾ ಸಿದ್ದಲಿಂಗಸ್ವಾಮಿ ತಂದಿಟ್ಟ ಲಿಸ್ಟಿನಲ್ಲಿರುವ ಪೊಲೀಸ್ ಇನ್ಸ್‌ಪೆಕ್ಟರ್‌ಗಳು, ಕಮರ್ಷಿಯಲ್ ಟ್ಯಾಕ್ಸ್ ಅಧಿಕಾರಿಗಳು, ಬಿಡಿಎ, ಅರಣ್ಯ ಇತ್ಯಾದಿ ಇಲಾಖೆಗಳ ಭ್ರಷ್ಟರೆಲ್ಲ ಕರಂದ್ಲಾಜೆಗೆ ಕಾಣಿಕೆ ಕೊಟ್ಟೇ ಲಾಬಿಗಿಳಿದಿದ್ದಾರೆ. ಒಂದೆಡೆ ಮಗನ ಹಾವಳಿ ಮತ್ತೊಂದೆಡೆ ಮನದನ್ನೆಯ ಮುಲಾಜು. ಮಗದೊಂದೆಡೆ ಗಣಿಕಳ್ಳರ ಕಾಟ. ಈ ಪೈಕಿ ಯಾರನ್ನು ತೃಪ್ತಿಗೊಳಿಸುವುದು? ಯಾರನ್ನು ಸಮಾಧಾನ ಮಾಡುವುದು?

ಮುಖ್ಯಮಂತ್ರಿಗಾದಿಯ ಪೀಕಲಾಟವೇ ಅಂಥದ್ದು!

■ ರಾ. ಸೋಮನಾಥ್

ಉಡುಪಿ: ದಲಿತ ವಿರೋಧಿ ಡಿವೈಎಸ್ಪಿಗೆ ಗೃಹ ಸಚಿವರ ಸಾಥ್!

ಉಡುಪಿಯಲ್ಲೊಬ್ಬರು ಅಪರೂಪದ ಪೊಲೀಸ್ ಅಧಿಕಾರಿ ಇದ್ದಾರೆ. ಎಂ.ಬಿ. ನಾಗರಾಜ ಎಂಬ ಹೆಸರಿನವರಾದ ಇವರು ಉಡುಪಿ ಉಪವಿಭಾಗದ ಡಿವೈಎಸ್ಪಿ.

ಜಾತಿಯಲ್ಲಿ ಇವರು ದಲಿತರಾದರೂ, ಇವರಿಗೆ ದಲಿತರನ್ನು ಕಂಡರಾಗುವುದಿಲ್ಲ. ಶೋಷಿತ ಸಮುದಾಯಗಳಿಗೆ ಸೇರಿದ ಸಂಘಟನೆಗಳನ್ನಂತೂ ಇವರು ಸಹಿಸುವುದೇ ಇಲ್ಲ. ಆಶ್ಚರ್ಯವಾದರೂ ಇದು ಸತ್ಯ.

ಡಿವೈಎಸ್‌ಪಿ ನಾಗರಾಜರ ಮೇಲಿನ ಆರೋಪಗಳು ಒಂದೆರಡಲ್ಲ. ಎಲ್ಲವನ್ನೂ ತಿಳಿದುಕೊಂಡಿರುವ ಎಸ್‌ಪಿ ದೇವಜ್ಯೋತಿ ರೇ ಅವರು ನಾಗರಾಜರ ವರ್ಗಾವಣೆಗೆ ಕಳೆದ ವಿಧಾನಸಭಾ ಚುನಾವಣೆಗಿಂತ ತಿಂಗಳ ಹಿಂದೆಯೇ ಪತ್ರ ಬರೆದಿದ್ದರು.


ವರ್ಗಾವಣೆ ಆದೇಶವೂ ನಾಗರಾಜರ ಕೈಸೇರಿತ್ತು. ಆದರೆ ಚೆಡ್ಡಿ ನಾಯಕ ಡಾ. ವಿ.ಎಸ್. ಆಚಾರ್ಯರ ಬೆಂಬಲ, ಕರ್ನಾಟಕ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಟಿ)ಯ ತಡೆಯಾಜ್ಞೆ ಮತ್ತು ಚುನಾವಣಾ ನೀತಿ ಸಂಹಿತೆಯಿಂದಾಗಿ ಉಡುಪಿಯಲ್ಲಿಯೇ ಉಳಿದುಕೊಳ್ಳುವಲ್ಲಿ ನಾಗರಾಜ್ ಯಶಸ್ವಿಯಾಗಿದ್ದರು.

ಸದ್ಯಕ್ಕೆ ಎಂ.ಬಿ. ನಾಗರಾಜ್ ಉಡುಪಿಯಿಂದ ನಿರ್ಗಮಿಸುವ ಸಾಧ್ಯತೆಗಳಿಲ್ಲ. ರಾಜ್ಯದ ಗೃಹ ಸಚಿವ ಡಾ. ವಿ.ಎಸ್. ಆಚಾರ್ಯರು ಕುಳಿತುಕೋ ಎಂದರೆ ಕುಳಿತುಕೊಳ್ಳುವ, ನಿಂತುಕೋ ಎಂದರೆ ನಿಂತುಕೊಳ್ಳುವ ನಾಗರಾಜ್ ಈಗ ಉಡುಪಿ ಜಿಲ್ಲೆಗೆ ಅನಧಿಕೃತ ಎಸ್ಪಿ!

ದಸಂಸ ವಿರುದ್ಧ ಕೆಂಡ

ದಲಿತ ಸಂಘರ್ಷ ಸಮಿತಿಯನ್ನು ಕಂಡರೆ ಈ ಡಿವೈಎಸ್‌ಪಿಗೆ ಗಂಟಲಲ್ಲಿ ನೀರಿಳಿಯುವುದಿಲ್ಲ! ಹೋದಲ್ಲಿ ಬಂದಲ್ಲಿ ದಸಂಸವನ್ನು ಹೀಗಳೆದು ಅವಮಾನಿಸುವುದು ನಾಗರಾಜರ ಕೆಟ್ಟ ಚಾಳಿಗಳಲ್ಲೊಂದು.

ಫೆಬ್ರವರಿ ತಿಂಗಳಲ್ಲಿ ಉಡುಪಿ ಎಸ್ಪಿ ಕಚೇರಿಯ ಸಭಾಂಗಣದಲ್ಲಿ ದಲಿತರ ಕುಂದು ಕೊರತೆ ಸಭೆ ನಡೆದಿತ್ತು. ಎಸ್ಪಿ ದೇವಜ್ಯೋತಿರೇ ಸ್ವತಃ ಉಪಸ್ಥಿತರಿದ್ದು ಅಧ್ಯಕ್ಷತೆ ವಹಿಸಿದ್ದ ಸಭೆಯಲ್ಲಿ ನಾಗರಾಜರೂ ಇದ್ದರೆಂದರೆ ಇನ್ನು ಕೇಳಬೇಕೇ?



ದಲಿತರ ಕುಂದು-ಕೊರತೆ ಸಭೆಯಲ್ಲಿಯೇ, ಎಸ್ಪಿ ದೇವಜ್ಯೋತಿರೇ ಎದುರೇ ದಸಂಸ ನಾಯಕರನ್ನು ಹೀಯಾಳಿಸಿದರು, ವ್ಯಂಗ್ಯ ಮಾಡಿದರು, ಬಾಯಿಗೆ ಬಂದಂತೆ ಬೈದರು ನಾಗರಾಜ್!

ಅಶಿಸ್ತಿನ ಪರಮಾವಧಿ

ಉಡುಪಿ ತಾಲ್ಲೂಕಿನ ಚೇರ್ಕಾಡಿ ಗ್ರಾಮದ ಪರಿಶಿಷ್ಟ ಪಂಗಡಕ್ಕೆ ಸೇರಿದ ಕುಟುಂಬದ ಸದಸ್ಯರು ಏಪ್ರಿಲ್‌ನಲ್ಲಿ ದಲಿತ ದೌರ್ಜನ್ಯ ಪ್ರಕರಣವೊಂದಕ್ಕೆ ಸಂಬಂಧಿಸಿ ದೂರು ನೀಡಲು ನಾಗರಾಜರ ಚೇಂಬರ್‌ಗೆ ಹೋದರು.

ನಾಗರಾಜ್ ತಮ್ಮ ಪತ್ನಿ ಜತೆಗೆ ಮೊಬೈಲಲ್ಲಿ ಹರಟೆ ಹೊಡೀತಾ ಕುಳಿತುಕೊಂಡಿದ್ದರು. ದೂರನ್ನು ಕೈಯಲ್ಲಿ ಹಿಡಿದುಕೊಂಡು ಕಾದು ಕುಳಿತಿದ್ದರು ವನಜ, ಸುಶೀಲಾ, ರೇವತಿ, ಕಾಳು ನಾಯ್ಕ ಹಾಗೂ ಮಾಧವ ನಾಯ್ಕ ಎಂಬುವರು.

ನಾಗರಾಜ್ ಸಾಹೇಬ್ರು ಈಗ ಮೊಬೈಲ್ ಕೆಳಗಿಡ್ತಾರೆ, ತಮ್ಮ ದೂರು ಪಡೆದುಕೊಂಡು ಅಹವಾಲು ಕೇಳ್ತಾರೆ ಎಂದು ಕಾದಿದ್ದವರಿಗೆ ಹತ್ತು ನಿಮಿಷದ ನಂತರ ಕಾದಿತ್ತು ಅಪಮಾನ.

ದಢೂತಿ ದೇಹದ ಒಬ್ಬ ಶ್ರೀಮಂತ ವ್ಯಕ್ತಿ ಡಿವೈಎಸ್‌ಪಿ ಛೇಂಬರ್‌ಗೆ ಬಂದರು. ಕೂಡಲೇ ಎದ್ದು ನಿಂತು ಶೇಕ್ ಹ್ಯಾಂಡ್ ನೀಡಿದ ನಾಗರಾಜರು, ಕುರ್ಚಿಯಲ್ಲಿ ಕುಳಿತಿದ್ದ ದಲಿತ ಮಹಿಳೆ ವನಜರನ್ನು ಮರುಮಾತಿಲ್ಲದೆ ಎಬ್ಬಿಸಿ, ದಢೂತಿ ವ್ಯಕ್ತಿಗೆ ಅದೇ ಕುರ್ಚಿಯಲ್ಲಿ ಕುಳ್ಳಿರಿಸಿ, ಅವರೊಂದಿಗೆ ಕಾಲು ಗಂಟೆ ಮಾತಾಡಿದರು.

ಇಷ್ಟೂ ಸಾಲದೆಂಬಂತೆ ಬಳಿಕ ಅವರ ಹೆಗಲ ಮೇಲೆ ಕೈಹಾಕಿಕೊಂಡು ಹೊರಗಡೆ ಹೋದವರು ಖಾಲಿಯಿದ್ದ ಡಿಸಿಆರ್‌ಬಿ ಛೇಂಬರ್‌ನಲ್ಲಿ ಕುಳಿತು ಮತ್ತೆ ಕಾಲುಗಂಟೆ ಅದೇನೋ ಗುಪ್ತ ಸಮಾಲೋಚನೆ ನಡೆಸಿ ತಮ್ಮ ಛೇಂಬರ್‌ಗೆ ಮರಳಿದರು.

ಹೀಗೆ ಮರಳಿದ ನಾಗರಾಜ್ ದಲಿತರು ನೀಡಿದ ದೂರನ್ನು ಸರಿಯಾಗಿ ಓದಿ ನೋಡುವ ಕನಿಷ್ಠ ಸೌಜನ್ಯವನ್ನೂ ಪ್ರದರ್ಶಿಸಲಿಲ್ಲ.

"ನಿಮಗೆ ಬೇರೆ ಕೆಲಸವಿಲ್ವ? ದಲಿತ ದೌರ್ಜನ್ಯ ಅಂತ ಹೇಳ್ತೀರಿ? ಎಲ್ಲಾ ಸುಳ್ಳು!! ಬೇವರ್ಸಿ ಬೋಳಿಮಕ್ಳು, ಹೋಗಿ... ಹೋಗಿ!!"

ಹೀಗಂದವರು ದಲಿತರೇ ಆದ ನಾಗರಾಜ್. ಗ್ರಾಮೀಣ ಪ್ರದೇಶದಿಂದ ನೊಂದುಕೊಂಡು ದೂರು ಹಿಡಿದುಕೊಂಡು ಡಿವೈಎಸ್‌ಪಿ ಛೇಂಬರ್‌ಗೆ ಬಂದ ದಲಿತ ಮಹಿಳೆಯರಿಗೆ ತಾವು ಯಾಕೆ ಇಲ್ಲಿಗೆ ಬಂದೆವೋ ಅನಿಸಿರಬೇಕು.

ಅವಾಚ್ಯ ಶಬ್ದಗಳ ನಿಂದನೆ ಕೇಳಿಸಿಕೊಂಡವರು ತಂದ ದೂರನ್ನು ಟೇಬಲ್ ಮೇಲಿಟ್ಟು ಹೊರ ನಡೆದಿದ್ದರು.

ಗೃಹ ಸಚಿವ ಆಚಾರ್ಯರ ಅಭಯಹಸ್ತ ತನ್ನ ಮೇಲಿರುವಾಗ ಈ ನಾಗರಾಜರಿಗೆ ಇನ್ನೆಂಥ ಆತಂಕ....? ಉಡುಪಿಯಲ್ಲಿ ದಲಿತ ದೌರ್ಜನ್ಯ ಪ್ರಕರಣಗಳೆಲ್ಲ ಇನ್ನು ಹಳ್ಳ ಹಿಡಿಯುವುದಂತೂ ಗ್ಯಾರಂಟಿ!

■ ಶ್ರೀರಾಮ ದಿವಾಣ

ಕೊರಗರಿಗೂ ಕೊಂಕು ನುಡಿದರು

ಶತಶತಮಾನಗಳಿಂದ ಶೋಷಣೆ, ದೌರ್ಜನ್ಯ ಅನುಭವಿಸಿ, ಇಂದಿಗೂ ಮೇಲೇಳಾಗದೆ ಪರಿತಪಿಸುತ್ತಿರುವ ಕೊರಗರು ಇದೀಗ ಕರಾವಳಿಯಲ್ಲಿ ಸಂಘಟಿತರಾಗುತ್ತಿದ್ದಾರೆ. ವಿದ್ಯಾವಂತ ಹಿರಿಯರು, ಯುವಕರು, ಮಹಿಳೆಯರನ್ನು ಹೊಂದಿರುವ, ಕೊರಗ ಸಂಘಟನೆಗಳ ಅಭಿವೃದ್ಧಿ ಒಕ್ಕೂಟ, ಪ್ರಾಮಾಣಿಕವಾದ ಒಂದು ಸಂಘಟನೆ.

ಈ ಸಂಘಟನೆಯ ನಾಯಕರು, ಪದಾಧಿಕಾರಿಗಳು, ಕಾರ್ಯಕರ್ತರು ಸೇರಿ 25-30 ಮಂದಿ ಒಟ್ಟಾಗಿ ಮೇ ತಿಂಗಳಲ್ಲಿ ಕೊರಗ ಮಹಿಳೆಯೊಬ್ಬರ ನಿಗೂಢ ಸಾವಿನ ಪ್ರಕರಣದ ತನಿಖೆಗೆ ಕೋರಿ ಇದೇ ಡಿವೈಎಸ್‌ಪಿ ಎಂ.ಬಿ. ನಾಗರಾಜರಿಗೆ ದೂರು ನೀಡಲು ಹೋಗಿದ್ದರು.

ಕೊರಗ ಸಂಘಟನೆಯವರು ನೀಡಿದ ದೂರನ್ನು ಮೇಜಿನ ಮೇಲೆಸೆದ ನಾಗರಾಜರು, ಫಿರ್ಯಾದಿದಾರರನ್ನು ಕನಿಷ್ಠ ಕುಳಿತುಕೊಳ್ಳಲೂ ಹೇಳದೆ "ನೀವ್ಯಾರು? ಯಾಕೆ ಬಂದಿರಿ? ನಿಮಗೆ ಆಕೆ ಏನಾಗಬೇಕು?" ಎಂದು ಬಾಯಿಗೆ ಬಂದಂತೆ ಎಗರಾಡತೊಡಗಿದರು.

"ನಿಮ್ಮ ಸಂಘ-ಗಿಂಗ ಎಲ್ಲ ನಮ್ಮಲ್ಲಿ ಬೇಡ" ಎಂದ ನಾಗರಾಜರು ಕೊನೆಗೂ. ಕೊರಗರ ಕೈಯಿಂದ ದೂರು ತೆಗೆದುಕೊಳ್ಳದೆ ಮರಳುವಂತೆ ಮಾಡಿದ್ದರು. ■

ರೆಡ್ಡಿಗಳ ಚೆಡ್ಡಿ ಸರ್ಕಾರ!



ಬಿಜೆಪಿಗೆ ಪ್ರಜಾತಂತ್ರದಲ್ಲಿ ನಂಬಿಕೆಯೇ ಇಲ್ಲ ಎಂಬುದು ಅದರ ಟೀಕಾಕಾರರ ವಾದವಾಗಿತ್ತು. ಅದು ಅಕ್ಷರಕ್ಷಃ ಸತ್ಯ ಎಂಬುದನ್ನು ಸ್ವತಃ ಬಿಜೆಪಿಯೇ ಈಗ ಸಾಬೀತುಪಡಿಸಿದೆ, ಆ ಮೂಲಕ ರಾಜ್ಯದ ಜನರಿಗೆ ದ್ರೋಹ ಬಗೆದಿದೆ.

ಕರ್ನಾಟಕ ತನ್ನ ಇತಿಹಾಸದಲ್ಲಿ ಹಲವಾರು ತರಹದ ರಾಜಕೀಯ ನಾಟಕಗಳನ್ನು ಕಂಡಿದೆ. ರಾಮಕೃಷ್ಣ ಹೆಗಡೆಯವರ ಮೌಲ್ಯಗಳಿಲ್ಲದ ಮೌಲ್ಯಾಧಾರಿತ ರಾಜಕಾರಣದಿಂದ ಹಿಡಿದು, ಅಧಿಕಾರಕ್ಕಾಗಿ ಸಿದ್ಧಾಂತಗಳನ್ನು ತೊರೆದವರ ತನಕ, ಕೊನೆಗೆ ಸಿದ್ಧಾಂತವೆಂದರೇನೆಂದೇ ಗೊತ್ತಿಲ್ಲ ಎಂದವರನ್ನೂ ರಾಜ್ಯ ಕಂಡಿದೆ. ಆದರೆ ಎಂದೂ ಇಷ್ಟು ಹೇಸಿಗೆ ಹುಟ್ಟಿಸುವಂತಹ ರಾಜಕಾರಣವನ್ನು ಕರ್ನಾಟಕ ಕಂಡಿರಲಿಲ್ಲ!

ಗಣಿ ರೆಡ್ಡಿಗಳಿಗೆ 'ಸುಪಾರಿ'

ಕಳೆದ ಚುನಾವಣೆಯಲ್ಲಿ ಬಿಜೆಪಿ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿತಾದರೂ ಅದಕ್ಕೆ ಸರಳ ಬಹುಮತ ದೊರಕಿರಲಿಲ್ಲ. ಆಗ ಅನಿವಾರ್ಯವಾಗಿ ಆರು ಮಂದಿ ಪಕ್ಷೇತರರ ಬೆಂಬಲ ಪಡೆದು ಸರ್ಕಾರವನ್ನು ರಚಿಸಿದ್ದು ಈಗ ಎಲ್ಲರಿಗೂ ಗೊತ್ತಿರುವ ವಿಚಾರ. ಆದರೆ ಇದರಿಂದಾಗಿ ಬಿಜೆಪಿಗೆ ಕಿಂಚಿತ್ತೂ ನೆಮ್ಮದಿ ಇರಲಿಲ್ಲ. ಪಕ್ಷೇತರರಿಗೆ ಸಚಿವ ಸ್ಥಾನಗಳನ್ನು ಕೊಟ್ಟು ಸುಮ್ಮನಾಗಿಸಲಾಗಿತ್ತಾದರೂ ತನ್ನ ಜುಟ್ಟು ಅವರ ಕೈಯಲ್ಲಿ ಇದ್ದರೆ ನಾಳೆ ಸಮಸ್ಯೆ ತಪ್ಪಿದ್ದಲ್ಲ ಎಂದು ಬಿಜೆಪಿಗೆ ಗೊತ್ತಿತ್ತು.

ಇದಕ್ಕೆ ಸರಿಯಾಗಿ ಯಡ್ಡಿ ಸರ್ಕಾರ ಒಂದು ತಿಂಗಳನ್ನು ಪೂರೈಸುವ ಮುನ್ನವೇ ಆ ಆರು ಜನ ಪಕ್ಷೇತರರು ಜೊತೆಗೂಡಿ ತಮ್ಮೊಳಗೇ ಮಾತುಕತೆಯನ್ನು ಪ್ರಾರಂಭಿಸಿದರು. ಆನಂತರ ಮುಖ್ಯಮಂತ್ರಿ ಯಡ್ಡಿಗೆ ಫೋನ್ ಮಾಡಿ ಎಚ್ಚರಿಕೆ ನೀಡಲು ಮುಂದಾದರು. ಆಗ ಅವರನ್ನು ಅಂದು ಹೇಗೋ ಸಮಾಧಾನ ಪಡಿಸಿದ ಯಡ್ಡಿ ತಮ್ಮ ಸೆರಗಿನ ಕೆಂಡತಂದಾಗಿದ್ದ ಈ ಪಕ್ಷೇತರರ ಕಾಟದಿಂದ ತಪ್ಪಿಸಿಕೊಳ್ಳಲು ಗಣಿ ರೆಡ್ಡಿಗಳಿಗೆ ಗ್ರೀನ್‌ಸಿಗ್ನಲ್ ಕೊಟ್ಟರು.


ಯಡ್ಡಿಯನ್ನು ಬೆದರಿಸಲು ಹೋಗಿ ತಾವೇ ಅಪ್ರಸ್ತುತರಾಗುವ ಸಂಕಟದಲ್ಲಿ ಸಿಕ್ಕಿಕೊಂಡ ಪಕ್ಷೇತರರು 'ಸರ್ಕಾರಕ್ಕೆ ನಮ್ಮ ಸಂಪೂರ್ಣ ಬೆಂಬಲ ಇದೆ ಎಂದು ಹೇಳಲು ನಾವು ಸಭೆ ಸೇರಿದ್ದೆವು' ಎಂದು ಮಾಧ್ಯಮಗಳ ಮುಂದೆ ಪೆದ್ದು ಪೆದ್ದಾಗಿ ವಿವರಣೆ ನೀಡಿ ಸುಮ್ಮನಾದರು.

ಆದರೆ ಇವರನ್ನು ಖತಂ ಮಾಡುವ, ಆ ಮೂಲಕ ಬಿಜೆಪಿ ಸರಕಾರವನ್ನು ರಕ್ಷಿಸುವ ರಾಜಕೀಯ 'ಸುಪಾರಿ'ಯನ್ನು ಪಡೆದಿದ್ದ ರೆಡ್ಡಿ ಗ್ಯಾಂಗ್ ಸುಮ್ಮನಾಗಲಿಲ್ಲ. ತಕ್ಷಣವೇ ಚುರುಕಿನ ಕಾರ್ಯತಂತ್ರ ಆರಂಭಿಸಿದ ರೆಡ್ಡಿ ಗ್ಯಾಂಗ್ ಮೊದಲು ಸಂಪರ್ಕಿಸಿದ್ದು ಅಸಮಾಧಾನದಿಂದ ತುಳುಕಾಡುತ್ತಿದ್ದ ಕೆಲ ಕಾಂಗ್ರೆಸ್ ಮತ್ತು ಜೆಡಿಎಸ್ ಶಾಸಕರನ್ನು. ಅಂತಹವರಲ್ಲಿ ಮೊದಲು 'ವ್ಯವಹಾರ' ಕುದುರಿದ್ದು ಕಾರವಾರದ ಕಾಂಗ್ರೆಸ್ ಶಾಸಕ ಆನಂದ ಅಸ್ನೋಟಿಕರ್‌ನೊಂದಿಗೆ. ಆನಂತರ ಬಿಜೆಪಿಯ ಬಲೆಗೆ ಬಿದ್ದದ್ದು ದೇವದುರ್ಗದ ಹುಂಬ ಕೆ.ಶಿವನಗೌಡ ನಾಯಕ. ಈತನ ಮೇಲೆ ವಾಲ್ಮೀಕಿ ನಾಯಕರ ಮೂಲಕ ಶ್ರೀರಾಮುಲು ಒತ್ತಡ ಹೇರಿದ. ಆತನೊಂದಿಗೆ ಈಗಾಗಲೇ ಕೋಟ್ಯಾಂತರ ರೂಪಾಯಿಗಳ ಸಾಲ, ಅಣ್ಣ ತಮ್ಮಂದಿರೊಂದಿಗೆ ಜಗಳ, ತಾನು ಅಧ್ಯಕ್ಷನಾಗಿರುವ ಸಕ್ಕರೆ ಕಾರ್ಖಾನೆಯ ಲುಕ್ಸಾನು, ಇವೆಲ್ಲವುಗಳಿಂದ ಬಳಲಿ ಬೆಂಡಾಗಿದ್ದ ಜೆಡಿಎಸ್‌ನ ಬಾಲಚಂದ್ರ ಜಾರಕಿಹೊಳಿ ಕೂಡ ಸುಲಭವಾಗಿಯೇ ರೆಡ್ಡಿಗಳ ಗಣಿ ಗುಂಡಿಗೆ ಜಾರಿ ಬಿದ್ದ.


ಈ ಬಾಲಚಂದ್ರ ಜಾರಕಿಹೊಳಿಗೆ ಸಚಿವನನ್ನಾಗಿ ಮಾಡುವುದಾಗಿ ಆಸೆ ತೋರಿಸಲಾಗಿದ್ದರೆ, ಆನಂದ ಅಸ್ನೋಟಿಕರ್ ಮತ್ತು ಕೆ. ಶಿವನಗೌಡ ನಾಯಕರಿಗೆ ನಿಗಮ-ಮಂಡಳಿಯ ಅಧ್ಯಕ್ಷ ಸ್ಥಾನ ನೀಡುವುದಾಗಿ ಭರವಸೆ ನೀಡಲಾಗಿದೆ.

25 ಕೋಟಿ ಗಿಫ್ಟ್!

ಕಳೆದ ಚುನಾವಣೆಗೆಂದು ವೆಚ್ಚ ಮಾಡಲಾಗಿದ್ದ ಖರ್ಚಿನ ಜೊತೆಗೆ ಒಬ್ಬೊಬ್ಬ ಶಾಸಕರಿಗೂ ಕನಿಷ್ಠ 30 ಕೋಟಿ ರೂ. ನೀಡುವುದಾಗಿ ಗಣಿ ಧಣಿಗಳು ಮಾತು ಕೊಟ್ಟಿದ್ದಾರಂತೆ. ಹಾಗೆಯೇ ಮತ್ತೆ ವಿಧಾನ ಸಭೆಗೆ ಆಯ್ಕೆಯಾಗಿ ಬರಲು ಅವರು ಎದುರಿಸಬೇಕಿರುವ ಚುನಾವಣಾ ಖರ್ಚನ್ನೂ ರೆಡ್ಡಿಗಳೇ ನೋಡಿಕೊಳ್ಳುವುದಾಗಿ ತಿಳಿಸಿದ್ದಾರಂತೆ. ಆನಂದ ಅಸ್ನೋಟಿಕರ್ ಈ ದುಡ್ಡಿಗೆ ಜೊಲ್ಲು ಸುರಿಸಿ ಬಿಜೆಪಿ ಬಣ ಸೇರಿಲ್ಲ, ಆದರೆ ಉಳಿದಿಬ್ಬರು ಈ ತಮ್ಮ ಕ್ಷೇತ್ರದ ಜನತೆಗೆ ದ್ರೋಹ ಬಗೆಯಲು ಈ ದುಡ್ಡೂ ಕಾರಣವಂತೆ.



ಬಾಲಚಂದ್ರ ಜಾರಕಿಹೊಳಿ



ಆನಂದ್ ಅಸ್ನೋಟಿಕರ್

ಅಂದಹಾಗೆ ಈ ದುಡ್ಡಿನ ವ್ಯವಹಾರ ನಡೆಸಿರುವ ರೆಡ್ಡಿ ಗ್ಯಾಂಗ್ ಒಂದು ರೂಪಾಯಿಯನ್ನು ಯಡ್ಡಿಯ ಬಳಿ ಕೇಳಿಲ್ಲ. ಎಲ್ಲವನ್ನೂ ತಾವೇ ನೋಡಿಕೊಳ್ಳುತ್ತೇವೆ ಎಂದು ಈ ಗ್ಯಾಂಗ್‌ನ 'ತ್ರಿ ಮೂರ್ತಿ' ಸಚಿವರು ಹೇಳಿದ್ದಾರಂತೆ. ಈಗಾಗಲೇ ತಮ್ಮ ಹಂಗಿನರಮನೆಯಲ್ಲಿರುವ ಯಡ್ಡಿ ಹೀಗೆಯೇ ಮುಂದುವರೆಯಲಿ ಎಂಬುದು ಅವರ ದೂರಾಲೋಚನೆ.

ಉತ್ತರ ಕರ್ನಾಟಕದಲ್ಲಿ ಬಿಜೆಪಿ ಹೆಚ್ಚು ಸ್ಥಾನಗಳಿಸಲು ತಾವೇ ಕಾರಣ ಎಂದು ಹೇಳಿಕೊಳ್ಳುತ್ತಿರುವ ರೆಡ್ಡಿ ಗ್ಯಾಂಗ್, ಮುಂದೆ ತಮ್ಮಿಂದಾಗಿಯೇ ಬಿಜೆಪಿ ಸ್ಪಷ್ಟ ಬಹುಮತ ಪಡೆದುಕೊಂಡಿದೆ ಎಂದು ಕ್ಲೈಮ್ ಮಾಡಿಕೊಳ್ಳಬಹುದು. ಹಾಗೆಯೇ ಮುಂದೊಂದು ದಿನ ರೆಡ್ಡಿಗಳ ವಿರುದ್ಧವೇ ಯಡ್ಡಿ ಬಾಲ ಬಿಚ್ಚದಂತೆ ಅವರನ್ನು ಕಟ್ಟಿಹಾಕುತ್ತಿದ್ದಾರೆ. ಒಟ್ಟಾರೆ ಪಕ್ಷೇತರರ ಹಂಗಿನಲ್ಲಿದ್ದ ಯಡ್ಡಿ ಈಗ ದುಡ್ಡಿನ ಗಣಿಗಳನ್ನು ಹೊಂದಿರುವ ರೆಡ್ಡಿಗಳ ಹಂಗಿನಲ್ಲಿ ಬಿದ್ದಂತಾಗಿದೆ.



ನರಸಿಂಹಸ್ವಾಮಿ



ಶಿವನಗೌಡ

ಜೊತೆಗೆ ಇದು ಯಡ್ಡಿ ಸರ್ಕಾರವಲ್ಲ, ಬದಲಾಗಿ ರೆಡ್ಡಿಗಳ ಚೆಡ್ಡಿ ಸರ್ಕಾರ ಎಂಬುದು ಸಾಬೀತಾಗಿದೆ.

ದ್ರೋಹ ಬಗೆದ ಅಸ್ನೋಟಿಕರ್

ಕಾರವಾರದ ಶಾಸಕರಾಗಿದ್ದ ವಸಂತ್ ಅಸ್ನೋಟಿಕರ್ ಕಾಂಗ್ರೆಸ್ ಮನುಷ್ಯ, ಅವರ ಹತ್ಯೆ ನಂತರ ಅವರ ಇಡೀ ಕುಟುಂಬ ಕಾಂಗ್ರೆಸ್ ಪಕ್ಷದಲ್ಲಿಯೇ ಮುಂದುವರೆದಿತ್ತು. ಕಾಂಗ್ರೆಸ್ ಪಕ್ಷ ಕೂಡ ಅವರನ್ನು ನಿರ್ಲಕ್ಷಿಸಲಿಲ್ಲ. ವಸಂತ್ ಅಸ್ನೋಟಿಕರ್‌ರ ಪತ್ನಿಯನ್ನು ವಿಧಾನಸಭೆಗೆ ನೇಮಕ ಮಾಡಿದ್ದರೆ, ಮಗ ಆನಂದ್‌ಗೆ ಕಳೆದ ಚುನಾವಣೆಯಲ್ಲಿ ಟಿಕೆಟ್ ನೀಡಿತ್ತು. ಈ ಕ್ಷೇತ್ರದಲ್ಲಿ ಬಿಜೆಪಿ ಪ್ರಾಬಲ್ಯ ಹೊಂದಿಲ್ಲ. ಪಕ್ಷೇತರ ಅಭ್ಯರ್ಥಿಯ ವಿರುದ್ಧ 19 ಸಾವಿರ ಮತಗಳ ಅಂತರದಿಂದ ಆನಂದ್ ಗೆದ್ದರು. ಆನಂದ್ ದುಡ್ಡಿನ ಮದದಲ್ಲಿ ಮೆರೆಯುತ್ತಿದ್ದರೂ ಆತನ ತಂದೆಯ ಕೊಲೆಯ ಬಗ್ಗೆ ಅಲ್ಲಿನ ಜನರಿಗೆ ಸಹಾನುಭೂತಿಯಿತ್ತಾದರಿಂದ ಜನ ಆತನನ್ನು ಗೆಲ್ಲಿಸಿದರು. ಆದರೆ ಅವನೀಗ ತನ್ನನ್ನು ಬೆಂಬಲಿಸಿದ್ದ ಮತದಾರರಿಗೆ, ತನಗೆ ಮನ್ನಣೆ ನೀಡಿದ ಕಾಂಗ್ರೆಸ್ ಪಕ್ಷಕ್ಕೆ ದ್ರೋಹ ಬಗೆದಿದ್ದಾನೆ.

ಕಾರವಾರದ ಬಂದರಿನ ಮೇಲೆ ತನ್ನ ಹಿಡಿತ ಸಾಧಿಸಿರುವ ಆನಂದ್, ಕೋಟ್ಯಾಧಿಪತಿ. ಮಾತ್ರವಲ್ಲ ಬಹಳ ಕಾಲದಿಂದ ಆತನಿಗೆ ಗಣಿ ಧಣಿಗಳೊಂದಿಗೆ ಸಂಪರ್ಕವೂ ಇದೆ. ಹೇಳಿ ಕೇಳಿ ಅವರು ಕದ್ದ ಅದಿರನ್ನು ವಿದೇಶಗಳಿಗೆ ಸಾಗಿಸುವುದು ಈತನ ಹಿಡಿತದಲ್ಲಿರುವ ಬಂದರಿನ ಮೂಲಕವೇ ಅಲ್ಲವೇ? ಅವರ ನಡುವಿದ್ದ ಈ ವ್ಯವಹಾರಿಕ ಸ್ನೇಹ ಇದೀಗ ರಾಜಕೀಯ ಸ್ನೇಹವಾಗಿಯೂ ಮಾರ್ಪಟ್ಟಿದೆ. ಅದರ ಹಿಂದೆ ಒಂದು ಬೆದರಿಕೆಯೂ ಅಡಗಿದೆ. ಅದೇನೆಂದರೆ ಅಕಸ್ಮಾತ್ ಚೆಡ್ಡಿಗಳ ಸರ್ಕಾರ 'ಬಂದರು ಆಡಳಿತ ಮಂಡಳಿ'ಯನ್ನು ಸ್ಥಾಪಿಸಿ ತನ್ನ ಲೂಟಿಗೆ ಅಡ್ಡಿಯಾಗುತ್ತದೆಯೋ ಎಂಬುದು. ಅಂತಹ ಒಂದು ಸಾಧ್ಯತೆಯಿಂದ ಹೆದರಿದ ಆನಂದ, ತನ್ನನ್ನು ಆರಿಸಿ ಕಳಿಸಿದ ಜನತೆಯನ್ನು ನಿರ್ಲಕ್ಷಿಸಿ, ರೆಡ್ಡಿ ಗ್ಯಾಂಗ್ ಸೇರಿ, ಲೂಟಿಗೆ ರಹದಾರಿ ಪಡೆಯ ಹೊರಟಿದ್ದಾನೆ.

ಬಾಯಲ್ಲಿ ಭಗವದ್ಗೀತೆ!

ತಾವು ಶಾಸಕರಾಗಲು ಅವಕಾಶ ನೀಡಿದ ಪಕ್ಷ ಮತ್ತು ತಮ್ಮನ್ನು ಆರಿಸಿ ಕಳುಹಿಸಿದ ಜನತೆಗೆ ದ್ರೋಹ ಬಗೆದಿರುವ ಈ ಮಾಜಿ ಶಾಸಕರು ಈಗ ಭಗವದ್ಗೀತೆ ಹಾಡುತ್ತಿದ್ದಾರೆ. ಕ್ಷೇತ್ರದ ಅಭಿವೃದ್ಧಿಯ ಉದ್ದೇಶದಿಂದ ಈ ನಿರ್ಧಾರ ತೆಗೆದುಕೊಂಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದಾರೆ. ಇದುವರೆಗೆ ವಿರೋಧ ಪಕ್ಷಗಳ ಶಾಸಕರು ಪ್ರತಿನಿಧಿಸುತ್ತಿದ್ದ ಕ್ಷೇತ್ರಗಳು ಅಭಿವೃದ್ಧಿಯಾಗುತ್ತಲೇ ಇರಲಿಲ್ಲವೇ?

ಪ್ರಜಾಪ್ರಭುತ್ವದಲ್ಲಿ ಆಡಳಿತ ಪಕ್ಷದಲ್ಲಿರುವ ಮತ್ತು ಅದರೊಂದಿಗೆ ಗುರುತಿಸಿಕೊಂಡ ಶಾಸಕರಿಗೆ ಮಾತ್ರ ಅಭಿವೃದ್ಧಿ ಮಾಡಲು ಅವಕಾಶವಿದೆ ಎಂದಾದರೆ ವಿರೋಧ ಪಕ್ಷಗಳ ಶಾಸಕರಿಗೆ ಬೆಲೆ ಇಲ್ಲ, ಅವರು ನೆಪ ಮಾತ್ರಕ್ಕೆ ಅಧಿಕಾರದಲ್ಲಿರುತ್ತಾರೆ ಎಂದಾಯಿತು. ಈ ತಪ್ಪು ಸಂದೇಶವನ್ನು, ಸುಳ್ಳು ಮಾಹಿತಿಯನ್ನು ನೀಡಲು ಈ ದ್ರೋಹಿಗಳಿಗೆ ಎಷ್ಟು ಧೈರ್ಯ ಎಂದು ಪ್ರಜಾತಂತ್ರ ಪ್ರೇಮಿಗಳೆಲ್ಲಾ ಪ್ರಶ್ನಿಸಬೇಕಾಗಿದೆ. ಮುಂದಿನ ಚುನಾವಣೆಯಲ್ಲಿ ಜನತೆ ಇವರಿಗೆ ತಕ್ಕ ಪಾಠ ಕಲಿಸಬೇಕಾದ ಅನಿವಾರ್ಯತೆ ಇದೆ. ಇಲ್ಲವಾದಲ್ಲಿ ಈ ಕೆಟ್ಟ ಸಂಸ್ಕೃತಿ ಮುಂದುವರೆಯಲಿದೆ.

ಇನ್ನೂ ಇದ್ದಾರೆ ಲೀಸ್ಟ್‌ನಲ್ಲಿ!

ಈಗ ರಾಜೀನಾಮೆ ನೀಡಿರುವ ನಾಲ್ವರು ಮುಂದೆ ನಡೆಯಲಿರುವ ಉಪ ಚುನಾವಣೆಗಳಲ್ಲಿ ಗೆದ್ದು ಬಂದರೂ ಬಿಜೆಪಿ ಸರ್ಕಾರದ ಉಳಿವಿನ ಬಗ್ಗೆ ಆತಂಕ ಇದ್ದೇ ಇದೆ. ಅದಕ್ಕೆ ವಿರೋಧ ಪಕ್ಷದಲ್ಲಿನ ಇನ್ನೂ ಕೆಲ ಶಾಸಕರನ್ನು ಸೆಳೆಯಲು ಬಿಜೆಪಿ ಹವಣಿಸುತ್ತಿದೆ. ಕೆಲವರು ಈಗಾಗಲೇ ಅದರ ಲೀಸ್ಟ್‌ನಲ್ಲಿದ್ದಾರೆಯಾದರೂ, ಇನ್ನು ಪಕ್ಷದ ಸಂಪರ್ಕಕ್ಕೆ ಬಾರದಿರುವ ಕೆಲ ಅತೃಪ್ತ ನಾಯಕರೂ ಸದ್ಯದಲ್ಲೇ ತಮ್ಮ ಪಕ್ಷ ಸೇರಲಿದ್ದಾರೆ ಎಂಬ ಸುಳ್ಳು ಸುದ್ದಿಯನ್ನು ಬಿಜೆಪಿ ಹರಡಿಸುತ್ತಿದೆ. ಆ ಮೂಲಕ ಕಾಂಗ್ರೆಸ್ ಮತ್ತು ಜೆಡಿಎಸ್‌ನ ಒಗ್ಗಟ್ಟನ್ನು ಒಡೆಯುವ ತಂತ್ರ ನಡೆಸುತ್ತಿದೆ. ಈ ತಂತ್ರದ ಕಾರಣದಿಂದಲೇ ಸಿದ್ಧರಾಮಯ್ಯ ಶ್ಯಾಮನೂರು ಶಿವಶಂಕರಪ್ಪ, ಮತ್ತಿತರರು ಬಿಜೆಪಿ ಸೇರಲಿದ್ದಾರೆ ಎಂಬ ವದಂತಿ ಈಗ ಎಲ್ಲೆಡೆ ಕೇಳಿಬರುತ್ತಿದೆ.

ಆದರೆ ಕಾಂಗ್ರೆಸ್‌ನ ವಿ.ಸೋಮಣ್ಣ ಮಹಾದೇವಪ್ಪ, ಜೆಡಿಎಸ್‌ನ ಉಮೇಶ್ ಕತ್ತಿ ಮತ್ತಿತರರು ಬಿಜೆಪಿ ಸೇರಲಿದ್ದಾರೆ ಎಂಬ ಸುದ್ದಿ ಇದೆಯಾದರೂ ಇದೇನೂ ಹೊಸ ಸುದ್ದಿಯಲ್ಲ.

ಆದರೆ ಬಜೆಟ್‌ನಂತರ ಬಿಜೆಪಿ ಮತ್ತೆ ಪಕ್ಷ ಒಡೆಯುವ ಕುತಂತ್ರಕ್ಕೆ ಮುಂದಾಗಲಿದೆ ಎಂಬುದಂತೂ ಸತ್ಯ. ■

ಕಮಲದ ಕೆಸರಿಗೆ ಜಾಲಪ್ಪ



ಕೇಂದ್ರ ಸಚಿವರಾಗಿ, ರಾಜ್ಯ ಸಚಿವರಾಗಿ, ಸಂಸದರಾಗಿ ರಾಜಕೀಯ ಅಧಿಕಾರವನ್ನು ಆನಂದಿಸಿರುವ ಆರ್.ಎಲ್. ಜಾಲಪ್ಪ ತಮ್ಮ ಮಗನನ್ನು ಕಮಲದ ಕೆಸರಿನ ಹೊಂಡಕ್ಕೆ ತಳ್ಳಿದ್ದಾರೆ. ಜೊತೆಗೇ ತಾವೂ ಈ ಕೆಸರಿನ ಹೊಂಡಕ್ಕೆ ಬೀಳುವ ಸೂಚನೆ ನೀಡಿದ್ದಾರೆ.

ದೊಡ್ಡಬಳ್ಳಾಪುರದ ಶಾಸಕರಾಗಿ ಜಾಲಪ್ಪರ ಮಗ ಜೆ. ನರಸಿಂಹಸ್ವಾಮಿ ಆಯ್ಕೆಯಾಗಿದ್ದೇ ಒಂದು ಪವಾಡ. ಅವರು ಕಾಂಗ್ರೆಸ್ ಪಕ್ಷದವರು ಎಂಬ ಕಾರಣಕ್ಕೆ ಅವರನ್ನು ಜನ ಬೆಂಬಲಿಸಿದ್ದರು. ಆದರೆ ಈ ಅಪ್ಪ-ಮಗ ಇಗ ತಾವು ಗಳಿಸಿರುವ ಹಣ, ಆಸ್ತಿ, ಸಾಮಾಜಿಕ ಮನ್ನಣೆ ಎಲ್ಲದಕ್ಕೂ ಕಾರಣವಾಗಿದ್ದ ಕಾಂಗ್ರೆಸ್ ಪಕ್ಷಕ್ಕೇ ದ್ರೋಹ ಬಗೆದಿದ್ದಾರೆ.

ಕಾಂಗ್ರೆಸ್‌ನಲ್ಲಿ ಹಲವಾರು ವರ್ಷಗಳ ಕಾಲ ಅಧಿಕಾರ ಅನುಭವಿಸಿದ, ಆ ಅಧಿಕಾರದಿಂದಲೇ ಇವತ್ತು ಕ್ಯಾಪಿಟೇಶನ್ ಕುಳವೂ ಆಗಿರುವ ಜಾಲಪ್ಪ ಈಗ ಮಾತ್ರ "ಯಾರೂ ನನ್ನ ಮಾತು ಕೇಳುತ್ತಿಲ್ಲ, ನನ್ನ ಮಗನಿಗೆ ಪಕ್ಷದಲ್ಲಿ ಕಿಂಚಿತ್ ಬೆಲೆ ಸಿಗುತ್ತಿಲ್ಲ" ಎಂದು ಹಪಹಪಿಸುತ್ತಿದ್ದಾರೆ. ಜನ ಕೇಳುವಂತಹ ಮಾತುಗಳನ್ನು ಅವರಾಡಿದ್ದರೆ ಜನ ಕೇಳಿಸಿಕೊಳ್ಳುತ್ತಿದ್ದರು, ಅವರಿಗೂ ಅವರ ಮಗನಿಗೂ ಬೆಲೆ ಕೊಡುತ್ತಿದ್ದರು ಎಂಬ ಅರಿವೂ ಅವರಿಗೆ ಈಗ ಇದ್ದಂತಿಲ್ಲ. ಅದೇನೇ ಇರಲಿ, ಈಗ ಜಾಲಪ್ಪನವರ ಅಸಮಾಧಾನವನ್ನು ಬಿಜೆಪಿ ಬಳಸಿಕೊಂಡಿದೆ. ಜೆ. ನರಸಿಂಹಸ್ವಾಮಿಗೆ ಗತಿ ಕಾಣಿಸಲು ಮುಂದಾಗಿದೆ.

ಇದು ಯಡ್ಡಿಯ ಕಾರ್ಯಾಚರಣೆ

ಶನಿವಾರ ಮೂವರು ಶಾಸಕರಿಂದ ರಾಜೀನಾಮೆ ಕೊಡಿಸಿದ್ದು ರೆಡ್ಡಿ ಗ್ಯಾಂಗ್ ಆದರೆ, ಭಾನುವಾರ ಜೆ. ನರಸಿಂಹಸ್ವಾಮಿಯನ್ನು ಬಿಜೆಪಿಗೆ ಸೇರಿಸಿಕೊಂಡದ್ದು ಯಡ್ಡಿ. ತಮಗಿರುವ 'ಕುಜ'ದೋಷ ನಿವಾರಣೆಗಾಗಿ ಘಾಟಿ ಸುಬ್ರಮಣ್ಯ ಕ್ಷೇತ್ರಕ್ಕೆಂದು ತೆರಳಿದ್ದ ಮುಖ್ಯಮಂತ್ರಿ ಯಡ್ಡಿ ಅಲ್ಲಿಗೆ ಕಾಕತಾಳಿಯವಾಗಿ ಅಲ್ಲಿಗೆ ಬಂದಿದ್ದ ನರಸಿಂಹಸ್ವಾಮಿಯ ಹೆಗಲ ಮೇಲೆ ಕೈ ಹಾಕಿದರು.


ಅಲ್ಲಿಯೇ ಅವರನ್ನು ಪಕ್ಷಕ್ಕೆ ಸೆಳೆಯುವ ಮೊದಲ ಸುತ್ತಿನ ಮಾತುಕತೆ ನಡೆಯಿತು. "ಕಾಂಗ್ರೆಸ್‌ನಲ್ಲಿ ನಿನ್ನ ಅಪ್ಪ ಮೂಲೆಗುಂಪಾಗಿದ್ದಾರೆ. ಜೆಡಿಎಸ್ ಜೊತೆಗೆ ಪಕ್ಷ ಹೊಂದಾಣಿಕೆ ಮಾಡಿಕೊಂಡರೆ ಅವರನ್ನು ಕ್ಯಾರೆ ಎನ್ನುವುದಿಲ್ಲ, ನಿನಗೂ ಅಲ್ಲಿ ಭವಿಷ್ಯವಿಲ್ಲ. ಕ್ಷೇತ್ರದ ಅಭಿವೃದ್ಧಿಗೆ ಏನು ಮಾಡಬೇಕೋ ಅದನ್ನೆಲ್ಲಾ ಮಾಡೋಣ, ಬಂದು ಬಿಡು" ಎಂದು ಯಡ್ಡಿ ನರಸಿಂಹಸ್ವಾಮಿಯ ತಲೆ ತಿಂದರು. ಯಡ್ಡಿ ಬಿಟ್ಟ ಹುಳ ಕೆಲಸ ಮಾಡಿತು. ಹೆಚ್ಚು ಕಷ್ಟವಿಲ್ಲದೆ ನರಸಿಂಹಸ್ವಾಮಿ ಎಂಬ ಮಿಕ ಯಡ್ಡಿಯ ಬಲೆಗೆ ಬಿದ್ದಿತು.

ಈಶ್ವರಪ್ಪ ನೀಡಿದ್ದ ಎಚ್ಚರಿಕೆ!



ಬಿಜೆಪಿ ಪಕ್ಷ ತನ್ನ ಐದು ವರ್ಷ ಅಧಿಕಾರ ಪೂರೈಸಲು ವಿರೋಧ ಪಕ್ಷಗಳನ್ನು ಒಡೆಯುವ ತಂತ್ರ ನಡೆಸುತ್ತಿರುವುದನ್ನು ಯಡಿಯೂರಪ್ಪನ ವಿರೋಧಿ ಬಣದಲ್ಲಿರುವ ಸಚಿವ ಈಶ್ವರಪ್ಪ ಕಳೆದ ವಾರವೇ ಬಹಿರಂಗ ಪಡಿಸಿದ್ದರು. ಇದರಿಂದ ವಿರೋಧ ಪಕ್ಷಗಳು ಎಚ್ಚೆತ್ತುಕೊಂಡು ಈ ತಂತ್ರವನ್ನು ವಿಫಲಗೊಳಿಸಲಿ ಎಂಬ ಉದ್ದೇಶ ಅವರದ್ದಾಗಿರಬೇಕು. ಆದರೆ ಅಂತಃಕಚ್ಚಾಟದಲ್ಲಿಯೇ ಕಾಲ ಕಳೆಯುತ್ತಿರುವ ಕಾಂಗ್ರೆಸ್ ನಾಯಕರಿಗೆ ಇದು ಗೊತ್ತಾಗಲೇ ಇಲ್ಲ. ಜನತಾ ದಳದ ಕುಮಾರಸ್ವಾಮಿಗೆ ಇದು ಗೊತ್ತಾದರೂ ಅವರು ಅದರಿಂದ ಬಚಾವಾಗಲಿಲ್ಲ.

ಮೀಡಿಯಾಗಳಿಗೆ ಮಕ್ಮಲ್ ಟೋಪಿ!



ನಾಜಿ ಕರ್ನಲ್ ಜೋಹಾನ್ ಬಾಕ್ ಬಂಧನ!

ಕುಮಾರ್ ಬುರಡಿಕಟ್ಟಿ

ಭಾರತದ ಮಾಧ್ಯಮಗಳು ಎಷ್ಟರಮಟ್ಟಿಗೆ ದಿವಾಳಿಯೆದ್ದು ಹೋಗಿವೆ ಎಂಬುದಕ್ಕೆ ಜೂನ್ 29ರ ಭಾನುವಾರ ಭಾರತದ ಹೆಸರಾಂತ ಪತ್ರಿಕೆಗಳು ತಮ್ಮ ಮುಖಪುಟದಲ್ಲಿ ಪ್ರಕಟಿಸಿದ ಹಾಗೂ ಟಿವಿ ಚಾನೆಲ್‌ಗಳು ಬ್ರೇಕಿಂಗ್ ನ್ಯೂಸ್ ಎಂದು ಬಿತ್ತರಿಸಿದ 'ಕರ್ನಾಟಕದ ಗಡಿಯಲ್ಲಿ ಹಿಟ್ಲರ್ ಸಹಚರ ಕರ್ನಲ್ ಜೋಹಾನ್ 'ಬಾಕ್‌ನ ಬಂಧನ'ದ ವರದಿ ಒಂದು ಜ್ವಲಂತ ಉದಾಹರಣೆ.

ದೇಶದಲ್ಲಿ ಅತ್ಯಂತ ಹೆಚ್ಚು ಪ್ರಸಾರದಲ್ಲಿರುವ ಪತ್ರಿಕೆಗಳಾದ ದಿ ಟೈಮ್ಸ್ ಆಫ್ ಇಂಡಿಯ, ಇಂಡಿಯನ್ ಎಕ್ಸ್‌ಪ್ರೆಸ್, ಡೆಕ್ಕನ್ ಹೆರಾಲ್ಡ್, ಏಶಿಯನ್ ಏಜ್, ಡೆಕ್ಕನ್ ಕ್ರಾನಿಕಲ್, ಟೆಲಿಗ್ರಾಫ್, ಗೋಮಾಂಟಕ್ ಟೈಮ್ಸ್, ದೈನಿಕ್ ಗೋಮಾಂಟಕ್, ಹೆರಾಲ್ಡ್, ಗೋವಾ ದೂತ್ - ಎಲ್ಲವೂ ಈ ಸುದ್ದಿಯನ್ನು ದೊಡ್ಡದಾಗಿ ಮುಖಪುಟದಲ್ಲಿಯೇ ಪ್ರಕಟಿಸಿದವು.

ಕನ್ನಡದ ದಿನಪತ್ರಿಕೆಗಳೇನೂ ಈ ವಿಚಾರದಲ್ಲಿ ಹಿಂದೆ ಬೀಳಲಿಲ್ಲ. ಕನ್ನಡ ಪ್ರಭ ಮುಖಪುಟದಲ್ಲಿ ದೊಡ್ಡದಾಗಿ 'ಖಾನಾಪುರ ಅರಣ್ಯದಲ್ಲಿ ಹಿಟ್ಲರ್‌ನ ಕರ್ನಲ್ ಬಂಧನ' ಎಂದು ಪ್ರಕಟಿಸಿದರೆ 'ಪ್ರಜಾವಾಣಿ'ಯು ಮುಖಪುಟದಲ್ಲಿ 'ನಾಜಿ ಪಾರ್ಟಿ ಮುಖಂಡನ ಸೆರೆ' ಎಂದು ಬರೆಯಿತು. ಟಿವಿ-9 ಸುದ್ದಿವಾಹಿನಿಯು ದಿನವಿಡೀ ಬಾಕ್‌ನ ಫೋಟೋವನ್ನು ತೋರಿಸುತ್ತಾ ಈ ಸುದ್ದಿಯನ್ನು ರೋಚಕವಾಗಿ ಪ್ರಸಾರ ಮಾಡಿತು. ಎಲ್ಲಕ್ಕಿಂತ ವಿಚಿತ್ರ ಎಂದರೆ ರಾಜ್ಯ ಇಂಟಲಿಜೆನ್ಸ್ ಮುಖ್ಯಸ್ಥ ಶಂಕರ್ ಬಿದರಿಯವರು "ಜೋಹಾನ್ ಬಾಕ್‌ನನ್ನು ಈಗಾಗಲೇ ಬರ್ಲಿನ್‌ಗೆ ಕರೆದೊಯ್ಯಲಾಗಿದೆ" ಎಂದು ಹೇಳಿದರು.



ಈ ಎಲ್ಲಾ ಪತ್ರಿಕೆಗಳು ಆಧರಿಸಿದ್ದು ಕೇವಲ ಒಂದು 'ಪತ್ರಿಕಾ ಪ್ರಕಟಣೆ'ಯನ್ನು ಮಾತ್ರ. ಪ್ರಶ್ನೆಗಳನ್ನು ಕೇಳುವುದನ್ನೇ ಮರೆತಿರುವ, ತನಿಖಾ ವರದಿಗಳೆಂದರೆ ಏನೆಂದೂ ಗೊತ್ತಿರದ, ಬದಲಾಗಿ ಯಾರೋ ಕೊಡುವ 'ರೆಡಿಮೇಡ್' ಮಾಹಿತಿಯನ್ನೇ ಸುದ್ದಿ ಎಂದು ಪ್ರಕಟಿಸುವಲ್ಲಿ ಈಗ ನಿಸ್ಸೀಮರಾಗಿರುವ ಮೀಡಿಯಾಗಳು ಈ ಸುದ್ದಿ ಎಲ್ಲಿಂದ ಬಂದಿದೆ, ಯಾರು ಪತ್ರಿಕಾ ಪ್ರಕಟಣೆಯನ್ನು ಬಿಡುಗಡೆ ಮಾಡಿದ್ದಾರೆ, ಸುದ್ದಿ ಸರಿಯಿದೆಯೇ ಎಂದು ಚೆಕ್ ಮಾಡುವ ಗೊಡವೆಗೆ ಮಾತ್ರ ಹೋಗಲಿಲ್ಲ.

ಆದರೆ, ಎರಡೇ ದಿನದಲ್ಲಿ ಇದು ಸಂಪೂರ್ಣ ಸುಳ್ಳು ಸುದ್ದಿ ಎಂದು ಸಾಬೀತಾಯಿತು! ಮೀಡಿಯಾಗಳಿಗೆ ಮಕ್ಮಲ್ ಟೋಪಿ ಹಾಕಿದವರೇ ತಾವದನ್ನು ಏಕೆ ಮಾಡಿದೆವು ಎಂದು ಸ್ಪಷ್ಟಪಡಿಸಿದರು. ಆ 'ರೋಚಕ ಸುದ್ದಿ'ಯನ್ನು ಪ್ರಕಟಿಸುವಾಗ ಇದ್ದ ಪೈಪೋಟಿ ಅದು ಸುಳ್ಳೆಂದು ಸಾಬೀತಾದದ್ದನ್ನು ಪ್ರಕಟಿಸುವಲ್ಲಿ ಇರಲಿಲ್ಲ. ಏಕೆಂದರೆ ಮೀಡಿಯಾಗಳೇ ಅನಾಮಧೇಯರಿಂದ ಮಕ್ಮಲ್ ಟೋಪಿ ಹಾಕಿಸಿಕೊಂಡು ಗುಂಡಿಗೆ ಬಿದ್ದಿದ್ದರಿಂದ ನಾಚಿಕೆಯಿಂದ ಅದನ್ನು ಹೊರಗೆ ಬಿಡಲೇ ಇಲ್ಲ!

ಮೊದಲು ಬಂದ ಸುದ್ದಿಯ ಸಾರಾಂಶವೇನು?

- ಎರಡನೇ ಮಹಾಯುದ್ಧದ ನಂತರ ಐವತ್ತು ವರ್ಷಗಳಿಂದ ತಲೆಮರೆಸಿಕೊಂಡಿದ್ದ ಹಿಟ್ಲರ್‌ನ ನಾಜಿ ಪಾರ್ಟಿಯ ಪ್ರಮುಖ ನಾಯಕರಲ್ಲಿ ಒಬ್ಬನಾಗಿದ್ದ ಜೋಹಾನ್ ಬಾಕ್ ಎಂಬಾತನನ್ನು ಜರ್ಮನಿಯ ಗುಪ್ತಚರ ಸಂಘಟನೆ ಮತ್ತು ಭಾರತದ ಗುಪ್ತಚರ ವಿಭಾಗದ ಅಧಿಕಾರಿಗಳು ಖಾನಾಪುರ-ಗೋವಾ ಅರಣ್ಯದಲ್ಲಿ ಬಂಧಿಸಿದರು. ಜರ್ಮನಿಯ ಚಾನ್ಸಲರ್ಸ್ ಕೋರ್ ಸಂಘಟನೆಯ Perus Narkp ವಿಭಾಗದ ಅಧಿಕಾರಿಗಳು ಈತನನ್ನು ಪತ್ತೆಹಚ್ಚಿದ್ದರು.
- ಎರಡನೇ ಮಹಾಯುದ್ಧದ ಸಮಯದಲ್ಲಿ 12 ಸಾವಿರ ಯಹೂದಿಯರ ಹತ್ಯಾಕಾಂಡಕ್ಕೆ ಕಾರಣವಾಗಿದ್ದ ಬಾಕ್ Marsha Tikash Wahnaab ಎಂಬ ಸಾಮೂಹಿಕ ಹತ್ಯಾ ಶಿಬಿರದ ಮುಖ್ಯಸ್ಥನಾಗಿದ್ದ.
- ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ನಾಜಿಗಳು ನಡೆಸಿದ ಅಪರಾಧಗಳ ಬಗ್ಗೆ ತನಿಖೆ ನಡೆಸುತ್ತಿರುವ ನುರೆನ್‌ಬರ್ಗ್ ವಿಚಾರಣಾ ನ್ಯಾಯಾಲಯ ಇದುವರೆಗೆ ವಿಚಾರಣೆಗೆ ಒಳಪಡಿಸಿದ ಎಲ್ಲ ಆರೋಪಿಗಳಿಗಿಂತಲೂ ಈತ ಘೋರ ಅಪರಾಧಿಯಾಗಿದ್ದ.
- ಜೂನ್ 27ರ ಮುಂಜಾನೆ ಗೋವಾದ ಬರ್ದೇಶ್ ಅರಣ್ಯ ಪ್ರದೇಶದಲ್ಲಿ ಜಂಟಿ ಕಾರ್ಯಾಚರಣೆ ಆರಂಭಿಸಲಾಗಿತ್ತು. ಮರುದಿನ ಮುಂಜಾನೆ ಬಾಕ್‌ನನ್ನು ಕರ್ನಾಟಕದ ಖಾನಾಪುರ ಅರಣ್ಯ ಪ್ರದೇಶದಲ್ಲಿ ವಶಕ್ಕೆ ತೆಗೆದುಕೊಂಡು ವಿಚಾರಣೆಗಾಗಿ ಗುಪ್ತಸ್ಥಳಕ್ಕೆ ಕರೆದೊಯ್ಯಲಾಯಿತು.
- ಗೋವಾ ಪ್ರದೇಶದಲ್ಲಿ ಈತ ತಲೆಮರೆಸಿಕೊಂಡಿದ್ದಾನೆ ಎಂಬ ಖಚಿತ ಮಾಹಿತಿಯ ಮೇರೆಗೆ ಆರು ತಿಂಗಳಿಂದ ಈತನ ಚಲನವಲನಗಳ ಮೇಲೆ ನಿಗಾ ಇಡಲಾಗಿತ್ತು. ಈತ ತಲೆಮರೆಸಿಕೊಂಡು ಭಾರತಕ್ಕೆ ಬಂದಿದ್ದಾನೆ ಎಂಬ ಇಸ್ರೇಲಿ ಮಾಧ್ಯಮಗಳ ವರದಿಯನ್ನಾಧರಿಸಿ ಕಾರ್ಯಾಚರಣೆ ಆರಂಭಿಸಲಾಗಿತ್ತು.
- ವಿದೇಶಿ ವ್ಯಕ್ತಿಯೊಬ್ಬ ಗೋವಾದ ಪತ್ರಿಕೆಯೊಂದರಲ್ಲಿ 18ನೇ ಶತಮಾನದ ಅಮೂಲ್ಯ ಪಿಯಾನೊವನ್ನು ಮಾರಾಟ ಮಾಡಲು ಮುಂದಾಗಿದ್ದಾನೆ ಎಂಬ ಜಾಹೀರಾತು ಬಿಡುಗಡೆಯಾಗಿತ್ತು. ಬಾಕ್ ಹತ್ಯಾಕಾಂಡ ನಡೆಸಿದ್ದ Marsha Tikash Wahnaab ಕ್ಯಾಂಪ್ ಹತ್ತಿರವೇ ಪೂರ್ವ ಬರ್ಲಿನ್‌ನಲ್ಲಿದ್ದ ವಸ್ತು ಸಂಗ್ರಹಾಲಯದಿಂದ ಇಂತಹುದ್ದೇ ಪಿಯಾನೊ ಕಾಣೆಯಾಗಿತ್ತು ಎಂಬ ಮಾಹಿತಿ ಲಭ್ಯವಿದ್ದ ಹಿನ್ನೆಲೆಯಲ್ಲಿ ತನಿಖೆಯನ್ನು ಆರಂಭಿಸಲಾಗಿತ್ತು. ಬಾಕ್ ಗೋವಾದಲ್ಲಿ ನೆಲೆಸುವ ಮುನ್ನ ಅರ್ಜೆಂಟೀನಾ, ಬಲ್ಗೇರಿಯಾ, ಯೆಮನ್, ಕೆನಡಾ ಮತ್ತಿತರ ದೇಶಗಳಲ್ಲಿ ಆಶ್ರಯ ಪಡೆದಿದ್ದ ಎನ್ನಲಾಗಿದೆ.
- 1920ರಲ್ಲಿ ಜನಿಸಿದ ಬಾಕ್ ಅತ್ಯಂತ ಚಾಣಾಕ್ಷ, ಅಮೋಘ ಪ್ರತಿಭೆಯ ಸಂಗೀತಗಾರ. ಈ ಪ್ರತಿಭೆಯಿಂದಲೇ ಆತ ನಾಜಿ ಪಾರ್ಟಿಯಲ್ಲಿ ಹಿರಿಯ ಸ್ಥಾನಕ್ಕೆ ಏರಿದ್ದ.

ಅಸಲಿಯತ್ತೇನು?

ಅಸಲೀಯತ್ತೇನೆಂದರೆ ಒಂದಿಷ್ಟೂ ಕಷ್ಟ ಪಡದೇ ರೆಡಿಮೇಡ್ ನ್ಯೂಸ್‌ಗಳು ಸಿಕ್ಕರೆ ಅದನ್ನೇ ಪ್ರಕಟಿಸುವ ಸೋಮಾರಿ ಚಾಳಿಯನ್ನು ಬೆಳೆಸಿಕೊಂಡಿರುವ ಗೋವಾದ ಮಾಧ್ಯಮಗಳಿಗೆ ಒಂದು ಪಾಠ ಕಲಿಸುವುದಕ್ಕಾಗಿ ಕೆಲವು ವ್ಯಕ್ತಿಗಳು ಹರಿಬಿಟ್ಟ ಅಪ್ಪಟ ಸುಳ್ಳು ಸುದ್ದಿ ಇದಾಗಿತ್ತು! ಆದರೆ, ದುರಂತ ಎಂದರೆ, ಕೇವಲ ಗೋವಾದ ಮಾಧ್ಯಮಗಳು ಮಾತ್ರವಲ್ಲ ಇಡೀ ಇಂಡಿಯಾದ ಮಾಧ್ಯಮಗಳೇ ರೆಡಿಮೇಡ್ ಸುದ್ದಿ ಪ್ರಿಯರು ಎಂಬುದು ಈ ಘಟನೆಯಿಂದ ಸಾಬೀತಾಗಿಬಿಟ್ಟಿತು.

ಇಂಥ ಸುಳ್ಳು ಸುದ್ದಿಯನ್ನು ಹರಿಬಿಟ್ಟ ಗುಂಪು ವ್ಯವಸ್ಥಿತವಾಗಿಯೇ ತನ್ನ ಕಾರ್ಯನಿರ್ವಹಿಸಿತ್ತು. ಇಂಗ್ಲಿಷಿನ ಅಕ್ಷರಗಳನ್ನು ಹಿಂದೆಮುಂದೆ ಜೋಡಿಸಿ ಹೊಸ ಶಬ್ದಗಳನ್ನು ಸೃಷ್ಟಿಸಿ ಅದು ಜರ್ಮನ್ ಭಾಷೆಯ ಪದಗಳಂತೆ ಬಿಂಬಿಸಿ



ಮಾಧ್ಯಮಗಳನ್ನು ನಂಬಿಸುವಲ್ಲಿ ಅವರು ಯಶಸ್ವಿಯಾದರು! ಈ ಕೆಳಗಿನ ಉದಾಹರಣೆಗಳನ್ನೇ ನೋಡಿ:

ತಮ್ಮ ತಂಡಕ್ಕೆ ಅವರು Perus Narkp ಎಂದು ಹೆಸರಿಟ್ಟುಕೊಂಡಿದ್ದರು. ವಾಸ್ತವದಲ್ಲಿ ಅವರು Super Prank (ದೊಡ್ಡ ಕುಚೋದ್ಯ) ಎಂಬ ಇಂಗ್ಲಿಷ್ ಪದಗುಚ್ಛದಲ್ಲಿರುವ ಅಕ್ಷರಗಳನ್ನೇ ಹಿಂದೆ-ಮುಂದೆ ಮಾಡಿ ಈ ಹೊಸ ಹೆಸರನ್ನು ಸೃಷ್ಟಿಸಿಕೊಂಡಿದ್ದರು! ಇದು ಜರ್ಮನಿಯ ಚಾನ್ಸಲರ್ಸ್ ಕೋರ್ ಸಂಘಟನೆಯ ಇಂಟಲಿಜೆನ್ಸ್ ವಿಭಾಗದ ಹೆಸರು ಎಂದು ಹೇಳಿಕೊಂಡರು.



ಇದರ ಮುಖ್ಯಸ್ಥನ ಹೆಸರು Malak Abdul ಎಂದು ಹೇಳಿ ಅವನ ಹೆಸರಿನಲ್ಲಿಯೇ ಪತ್ರಿಕಾ ಪ್ರಕಟಣೆಯನ್ನು ಬಿಡುಗಡೆ ಮಾಡಿದರು. ಈ ಹೆಸರನ್ನು ಸೃಷ್ಟಿಸುವುದಕ್ಕೆ ಅವರು ಭಾರತದ ಮಾಜಿ ರಾಷ್ಟ್ರಪತಿ ಅಬ್ದುಲ್ ಕಲಾಮ್‌ರವರ (Abdul Kalam) ಹೆಸರಿನಲ್ಲಿರುವ ಅಕ್ಷರಗಳನ್ನು ಬಳಸಿಕೊಂಡಿದ್ದರು!

ಪತ್ರಿಕಾ ಪ್ರಕಟಣೆಯ ವಿವರಗಳನ್ನು ಸಿದ್ಧಪಡಿಸುವಲ್ಲಿಯೂ ಅವರು ಚಾಣಾಕ್ಷತನವನ್ನು ಮೆರೆದಿದ್ದರು. ಪೂರ್ವ ಜರ್ಮನಿಯಲ್ಲಿ ಎರಡನೇ ವಿಶ್ವ ಮಹಾಸಮರದ ಸಮಯದಲ್ಲಿ Marsha Tikash Wahnaab ಎಂಬ ಹೆಸರಿನ ಕಾನ್ಸಂಟ್ರೇಶನ್ ಕ್ಯಾಂಪ್ ಇತ್ತೆಂದು, ಅದರಲ್ಲಿ ಬಾಕ್ ಹನ್ನೆರಡು ಸಾವಿರ ಯಹೂದಿಗಳನ್ನು ಕೊಂದ ಎಂದೂ ಬರೆದರು. ವಾಸ್ತವ ಏನೆಂದರೆ, ಎರಡನೇ ಮಹಾಯುದ್ಧದ ಸಮಯದಲ್ಲಿ 'ಪೂರ್ವ ಜರ್ಮನಿ'ಯೇ ಇರಲಿಲ್ಲ! ಅಲ್ಲಿ Marsha Tikash Wahnaab ಹೆಸರಿನ ಕಾನ್ಸಂಟ್ರೇಶನ್ ಕ್ಯಾಂಪ್ ಅಂತೂ ಇರಲೇ ಇಲ್ಲ.

ಆದರೆ, ಈ ಕುಚೋದ್ಯವನ್ನು ಸೃಷ್ಟಿಸಿದವರು ಗೋವಾದ ರಾಜಧಾನಿ ಪಣಜಿಯಲ್ಲಿರುವ Shrama Shakti Bhawaan ಎಂಬ ಕಟ್ಟಡದ ಹೆಸರಿನಲ್ಲಿರುವ ಅಕ್ಷರಗಳನ್ನೇ ಬದಲಾಯಿಸಿ Marsha Tikash Wahnaab ಎಂಬ ಈ ಹೊಸ ಹೆಸರನ್ನು ಸೃಷ್ಟಿಸಿದ್ದರು. ಇನ್ನೊಂದು ತಮಾಷೆಯ ವಿಚಾರ ಎಂದರೆ ಇದೇ ಕಟ್ಟಡದಲ್ಲಿಯೇ ಗೋವಾದ ಪತ್ರಕರ್ತರ ಸಂಘದ ಆಫೀಸ್ ಇದೆ. ಸುಹಾಸಿನಿ ಪ್ರಭುಗಾಂವ್ಕರ್ ಅಧ್ಯಕ್ಷತೆಯಲ್ಲಿ ಈ ಸಂಘ ಮತ್ತು ಕಟ್ಟಡ ಎರಡೂ ಒಂದು ರೀತಿಯಲ್ಲಿ ಮಿನಿ ಕಾನ್ಸಂಟ್ರೇಶನ್ ಕ್ಯಾಂಪ್‌ನಂತೆಯೇ ಇದೆ ಎಂಬುದು ಕುಚೋದ್ಯಕಾರರ ಅಭಿಪ್ರಾಯವಾಗಿರುವುದರಿಂದ ಅವರು ಜರ್ಮನಿಯ ಕಪೋಲಕಲ್ಪಿತ ಕಾನ್ಸಂಟ್ರೇಶನ್ ಕ್ಯಾಂಪ್‌ನ ಹೆಸರನ್ನು ಸೃಷ್ಟಿಸುವುದಕ್ಕೆ ಈ ಕಟ್ಟಡದ ಹೆಸರನ್ನೇ ಬಳಸಿದ್ದರು!

ಮಾಧ್ಯಮಗಳನ್ನು ನಂಬಿಸುವುದಕ್ಕೆ ಪತ್ರಿಕಾ ಪ್ರಕಟಣೆಯ ಮೇಲುಗಡೆ Eht Rea Cabk Skripc ಎಂದು ಬರೆದಿದ್ದರು. ಇದು ಪ್ರಾಯಶಃ ಜರ್ಮನ್ ಭಾಷೆಯೇ ಇರಬೇಕೆಂದು ಭಾರತದ ಮಾಧ್ಯಮಗಳು ನಂಬಿಬಿಟ್ಟವು. ವಾಸ್ತವದಲ್ಲಿ ಅದು The Pen Pricks Are Back ಎಂಬ ಇಂಗ್ಲಿಷ್ ವಾಕ್ಯದ ಪದಗಳಿಂದ ಸುಮ್ಮನೇ ರಚಿಸಿದ ಯಾವ ಅರ್ಥವನ್ನೂ ಕೊಡದ ಹೊಸ ವಾಕ್ಯವಾಗಿತ್ತಷ್ಟೆ.

ಇಷ್ಟೆಲ್ಲ ಸಿದ್ಧತೆ ಮಾಡಿಕೊಂಡ ನಂತರ ಅವರು ಇಂಟರ್‌ನೆಟ್‌ನಲ್ಲಿ ಗೂಗಲ್ ಇಮೇಜ್ ಸರ್ಚ್ ಎಂಜಿನ್ ಬಳಸಿ ಯೂರೋಪಿಯನ್ ಗುಣಲಕ್ಷಣಗಳುಳ್ಳ ಸುಮಾರು 80 ವರ್ಷ ವಯಸ್ಸಿನ ಮುದುಕನ ಫೋಟೋವೊಂದನ್ನು ಹುಡುಕಿಕೊಂಡರು (ಅದು ಬಾಕ್‌ನ ಫೋಟೋ ಎಂದು ತೋರಿಸಲು). ನಂತರ ಗಿಡುಗನ ಚಿತ್ರವಿರುವ ಒಂದು ಮುದ್ರೆಯನ್ನು ಇಂಟರ್‌ನೆಟ್‌ನಲ್ಲಿ ಹುಡುಕಿ ಲೆಟರ್‌ಹೆಡ್ ತಯಾರಿಸಿಕೊಂಡರು. ಜೊತೆಗೆ ಜರ್ಮನ್ ಪೋಲೀಸರ ಅಧಿಕೃತ ವಿಳಾಸವನ್ನು ಸ್ವಲ್ಪ ತಿರುಚಿ ಬರೆದರು. ಅದರಲ್ಲಿ ನಮೂದಿಸಿದ ಫೋನ್ ನಂಬರ್‌ಗಳು ಜರ್ಮನ್ ಪೋಲೀಸರ ನಂಬರ್‌ಗಳಾಗಿರಲಿಲ್ಲ. ಪತ್ರಿಕಾ ಪ್ರಕಟಣೆ ಇನ್ನಷ್ಟು ಅಧಿಕೃತವಾಗಿ ಕಾಣುವಂತೆ ಮಾಡುವುದಕ್ಕೆ ಒಂದೆರಡು ಜರ್ಮನ್ ಪದಗಳನ್ನೂ ಸೇರಿಸಿದರು; ಜೊತೆಗೆ ಹದಿನೆಂಟನೇ ಶತಮಾನದ ಪಿಯಾನೋ ಕಳುವಾದ ಕತೆಯನ್ನೂ ಸೇರಿಸಿದರು. ಕೊನೆಗೆ ಗೂಗಲ್ ಇಮೇಜ್ ಸರ್ಚ್ ಎಂಜಿನ್ ಬಳಸಿಯೇ ಸಹಿಯ ಚಿತ್ರವನ್ನೂ ಪಡೆದುಕೊಂಡು ಎಲ್ಲ ಪತ್ರಿಕೆಗಳಿಗೆ, ಟಿವಿ ಚಾನೆಲ್‌ಗಳಿಗೆ ಈ-ಮೇಲ್ ಮೂಲಕ ಈ 'ಪತ್ರಿಕಾ ಪ್ರಕಟಣೆ'ಯನ್ನು ಕಳಿಸಿಕೊಟ್ಟರು.

ಸುದ್ದಿಯನ್ನು ಇನ್ನೊಂದಿಷ್ಟು ಬಿಸಿಬಿಸಿಯಾಗಿಸಲು ಅವರು ಒಂದೆರಡು ಪತ್ರಿಕಾ ಕಚೇರಿಗಳಿಗೆ ಫೋನ್ ಕೂಡ ಮಾಡಿದರು. ಅವರು ಜರ್ಮನ್ ಧಾಟಿಯಲ್ಲಿ ಮಾತನಾಡಿದ್ದನ್ನು ಕಂಡು ಪತ್ರಿಕೆಯವರೂ ನಂಬಿಬಿಟ್ಟರು. 'ದೈನಿಕ್ ಗೋಮಾಂಟಕ್' ಎಂಬ ಮರಾಠಿ ಪತ್ರಿಕೆಯ ಗೋವಾ ವರದಿಗಾರನಾದ ಸುಹಾಸ್ ಬೇಳೇಕರ್ ಎಂಬುವವನು ಜರ್ಮನ್ ಇಂಟಲಿಜೆನ್ಸ್ ಅಧಿಕಾರಿಯೊಂದಿಗೆ ಮಾತನಾಡಿದ ಖುಷಿಯೊಂದಿಗೆ ದೊಡ್ಡ ವರದಿಯನ್ನೇ ಬರೆದು ಹಾಕಿದ. ಇದು ಸ್ಥಳೀಯ ಪತ್ರಿಕೆಯಲ್ಲಿ ಪ್ರಕಟವಾಗಿದ್ದೇ ತಡ ರಾಷ್ಟ್ರೀಯ ಮಾಧ್ಯಮಗಳು ನಾ ಮುಂದು ತಾ ಮುಂದು ಎಂಬಂತೆ ಮುಗಿಬಿದ್ದು ಸುದ್ದಿಯನ್ನು ಪ್ರಕಟಿಸಿದವು. ಯಾವ ಪತ್ರಿಕೆಯೂ ಸುದ್ದಿಯ ಸತ್ಯಾಸತ್ಯತೆಯನ್ನು ಅರಿಯುವುದಕ್ಕೆ, ಅದರ ವಸ್ತುನಿಷ್ಠತೆಯನ್ನು ಪರೀಕ್ಷಿಸುವುದಕ್ಕೆ ಹೋಗಲೇ ಇಲ್ಲ.

ಮೀಡಿಯಾಗಳ ಮೇಲೆ ಯಾಕೆ ಈ ಸ್ಟಿಂಗ್ ಆಪರೇಶನ್?

ಗೋವಾ ಮೂಲದ ಬ್ಲಾಗರ್‌ಗಳು ಮಾಧ್ಯಮಗಳ ಮೇಲೆ ಇಂತಹ ಒಂದು ಸ್ಟಿಂಗ್ ಆಪರೇಶನ್ ಮಾಡುವುದಕ್ಕೂ ನ್ಯಾಯಸಮ್ಮತವಾದ ಒಂದು ಕಾರಣವಿದೆ. ಇತ್ತೀಚೆಗಂತೂ ಮಾಧ್ಯಮಗಳು ತಮ್ಮ ಸಾಮಾಜಿಕ ಜವಾಬ್ದಾರಿಯನ್ನು ಮರೆತು ಸೂಕ್ಷ್ಮ ವಿಚಾರಗಳನ್ನೂ ಸೆನ್ಸೇಶನಲ್ ನ್ಯೂಸ್ ಆಗಿ ಪರಿವರ್ತಿಸುತ್ತಾ ಸಾಮಾನ್ಯ ಜನರನ್ನು ದಾರಿ ತಪ್ಪಿಸುವಲ್ಲಿ ನಿರತವಾಗಿಬಿಟ್ಟಿವೆ. ಅವುಗಳಿಗೆ ಜನರ ಭಾವನೆಗಳಿಗಿಂತ ಮಾರುಕಟ್ಟೆಯಲ್ಲಿ ತಮ್ಮ ವರ್ಚಸ್ಸನ್ನು ಹೆಚ್ಚಿಸಿಕೊಳ್ಳುವುದು ಮತ್ತು ಆ ಮೂಲಕ ಲಾಭ ಮಾಡುವುದೇ ಪ್ರಧಾನವಾಗಿದೆ. ಅವು ತೀರದ ಲಾಭದಾಸೆಯಿಂದಾಗಿ ಸಾಮಾನ್ಯ ಜನರ ಭಾವನೆಗಳೊಂದಿಗೆ ಆಡುವ ಚೆಲ್ಲಾಟಕ್ಕೆ ಅದೆಷ್ಟೋ ಅಮಾಯಕರು ಬಲಿಯಾಗಿದ್ದಾರೆ. ಇದಕ್ಕೆ ಇತ್ತೀಚಿನ ಒಂದೆರಡು ಉದಾಹರಣೆಗಳನ್ನು ಕೊಡಬಹುದು.

ಕೆಲವು ತಿಂಗಳುಗಳ ಹಿಂದೆ ಹೊನ್ನಾಳಿ ಪೊಲೀಸರು ಮೋಟರ್ ಬೈಕ್ ಕಳ್ಳತನದ ಆರೋಪದ ಮೇಲೆ ಕೆಲವು ಮುಸ್ಲಿಂ ಯುವಕರನ್ನು ಬಂಧಿಸಿದಾಗ ಅವರನ್ನು ನ್ಯಾಯಾಲಯವಿನ್ನೂ ವಿಚಾರಣೆ ನಡೆಸುವ ಮೊದಲೇ ಮಾಧ್ಯಮಗಳು ಆ ಯುವಕರಿಗೆ ಭಯೋತ್ಪಾದಕರ ಪಟ್ಟ ಕಟ್ಟಿಬಿಟ್ಟಿದ್ದವು. ಹೆಚ್ಚೂ ಕಡಿಮೆ ಒಂದೂವರೆ ತಿಂಗಳು ಯಾವ್ಯಾವ ಪತ್ರಕರ್ತನಿಗೆ ಏನೇನು ವಾಂತಿ ಮಾಡಬೇಕೆನ್ನಿಸಿತೋ ಅದನ್ನೆಲ್ಲಾ ತಮ್ಮ ತಮ್ಮ ಪೇಪರ್‌ಗಳಲ್ಲಿ, ಟಿ.ವಿಗಳಲ್ಲಿ ವಾಂತಿ ಮಾಡಿಬಿಟ್ಟರು.

ಸಂಸತ್ತಿನ ಮೇಲೆ ದಾಳಿಗೆ ಸಂಬಂಧಿಸಿದಂತೆ ದೆಹಲಿ ವಿಶ್ವವಿದ್ಯಾಲಯದ ಪ್ರೊ. ಎಸ್.ಎ.ಆರ್. ಗಿಲಾನಿಯವರು ನಿರಪರಾಧಿಗಳಾಗಿದ್ದರೂ ಅವರನ್ನು ಭಯೋತ್ಪಾದಕರಂತೆ ಚಿತ್ರಿಸಿದರು. ಖುದ್ದು ಸುಪ್ರೀಂ ಕೋರ್ಟೇ ಅವರನ್ನು ನಿರಪರಾಧಿ ಎಂದು ಹೇಳಿದ್ದರೂ ಮಾಧ್ಯಮಗಳ ಬೇಜವಾಬ್ದಾರಿತನದಿಂದಾಗಿ ಅವರನ್ನು ಇಂದಿಗೂ ಟೆರರಿಸ್ಟ್ ಎಂಬಂತೆಯೇ ಬಿಂಬಿಸಲಾಗುತ್ತಿದೆ.

ಅಷ್ಟೇ ಏಕೆ, ತೀರಾ ಇತ್ತೀಚೆಗೆ ಗೋವಾದಲ್ಲಿ ನಡೆದ ಸ್ಕಾರ್ಲೆಟ್ ಕೀಲಿಂಗ್ ಮತ್ತು ದೆಹಲಿ ಬಳಿಯ ನೊಯಿಡಾದಲ್ಲಿ ನಡೆದ ಆರುಷಿ ಕೊಲೆ ಪ್ರಕರಣಗಳಲ್ಲೂ ಮಾಧ್ಯಮಗಳು ಇದಕ್ಕಿಂತ ಭಿನ್ನವಾಗಿ ಏನನ್ನೂ ಮಾಡಲಿಲ್ಲ. ಮೊದಮೊದಲು ಪೋಲೀಸರ ನಿಷ್ಕ್ರಿಯತೆಯೆಡೆಗೆ ಬೊಟ್ಟು ಮಾಡುತ್ತಾ ತಾವೇ ಈ ಪ್ರಕರಣಗಳ ತನಿಖೆ ಮಾಡಿದೆವೆಂಬಂತೆ ಫೋಜು ಕೊಟ್ಟರಾದರೂ ಕೊನೆಕೊನೆಗೆ ಗಾಸಿಪ್‌ಗಳನ್ನೇ ದೊಡ್ಡ ದೊಡ್ಡ ಸೆನ್ಸೇಷನಲ್ ನ್ಯೂಸ್ ಮಾಡಿ ಬಿತ್ತರಿಸಿದರು.

ಮಾಧ್ಯಮಗಳ ಬೇಜವಾಬ್ದಾರಿತನಕ್ಕೆ ಇಂತಹ ಲೆಕ್ಕವಿಲ್ಲದಷ್ಟು ಉದಾಹರಣೆಗಳನ್ನು ಕೊಡಬಹುದು. ಮಾಧ್ಯಮಗಳು ವರದಿಗಳ ಸತ್ಯಾಸತ್ಯತೆಯನ್ನು, ವಸ್ತುನಿಷ್ಠತೆಯನ್ನು ಅರಿಯುವುದಕ್ಕೆ ಒಂದಿಷ್ಟೂ ಶ್ರಮವಹಿಸುವುದಿಲ್ಲ ಎಂಬುದನ್ನು, ಅವು ಹೇಗೆ ಜನರ ಭಾವನೆಗಳೊಂದಿಗೆ ಚೆಲ್ಲಾಟವಾಡುವುದಕ್ಕೆ ಆಸೆ ಪಡುತ್ತವೆ ಎಂಬುದನ್ನು ಹಾಗೂ ಅವು ಎಷ್ಟರಮಟ್ಟಿಗೆ ಬೇಜವಾಬ್ದಾರಿಯಾಗಿ ವರ್ತಿಸುತ್ತಿವೆ ಎಂಬುದನ್ನು ಗೋವಾದ ಬ್ಲಾಗರ್‌ಗಳು ಚೆನ್ನಾಗಿಯೇ ತೋರಿಸಿಕೊಟ್ಟಿದ್ದಾರೆ.

...ಕೊನೆಗೆ. ಈ ಸುದ್ದಿಯನ್ನು ಹಬ್ಬಿಸಿದವರೇ ಇದು ...ನಾವು ಎಂದೂ. ಗೋವಾದ ಮಾಧ್ಯಮಗಳ ...ರ್ಸೂಕ್ಷ್ಮತೆಯನ್ನು ಬಯಲುಗೊಳಿಸುವುದಕ್ಕಾಗಿ ...ತಿದ್ದೆಂದೂ ಸ್ಪಷ್ಟಪಡಿಸಿ, ಕಾರ್ಯಾಚರಣೆಯ ...ನ್ನು ಬಹಿರಂಗಗೊಳಿಸಿದರು.

ನೆಲಕ್ಕೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ!

...ಮೊದಲೇ ಮಾಧ್ಯಮಗಳು ಇಂತಹದ್ದೊಂದು ಸೂಕ್ಷ್ಮ ...ಸಿಕ್ಕಾಗ ಅದರ ಯಥಾರ್ಥತೆಯನ್ನು, ವಸ್ತುನಿಷ್ಠತೆಯನ್ನು ...ಕೃತತೆಯನ್ನು ಅರಿಯಲು ಪ್ರಯತ್ನಿಸಬೇಕಿತ್ತು, ವಿವಿಧ ...ಮೂಲಗಳನ್ನು ಕೆದಕಬೇಕಿತ್ತು. ಹೋಗಲಿ ಬಿಡಿ, ...ಂತೂ ಮಾಡಲಿಲ್ಲ. ಅವುಗಳಿಗೆ ಪ್ರಾಮಾಣಿಕತೆ ...ದ್ದರೆ ಕೊನೆಗೆ ಸುಳ್ಳು ಸುದ್ದಿ ಹರಡಿದವರೇ ಅದನ್ನು ...ರಂಗ ಪಡಿಸಿದ ಮೇಲಾದರೂ ತಮ್ಮಿಂದಾದ ತಪ್ಪಿನ ...ಓದುಗರಲ್ಲಿ ಕ್ಷಮೆ ಕೋರಬೇಕಿತ್ತು. ಅದನ್ನೂ ...ಡಲಿಲ್ಲ. ಬದಲಿಗೆ ತಮ್ಮ ತಪ್ಪನ್ನು ಸಮರ್ಥಿಸಿಕೊಳ್ಳುವ ...ವನ್ನು ಪ್ರದರ್ಶಿಸಿದವು. ಇಲ್ಲವೇ ಅದನ್ನು ಇಗ್ನೋರ್ ...ಡಿ ಮುಚ್ಚಿಹಾಕಲು ಪ್ರಯತ್ನಿಸಿದವು.

...ಉದಾಹರಣೆ 'ಕನ್ನಡ ಪ್ರಭ' ದಿನಪತ್ರಿಕೆಯನ್ನೇ ನೋಡಿ. ...ೖ ಒಂದರಂದು ಅದರ ಸಂಪಾದಕ ಖಾನಾಪುರ ...ಸೂ ಗೋವಾದ ಕೆಲವು ಪೊಲೀಸ್ ಮೂಲಗಳು ...ಸುದ್ದಿಯನ್ನು ಸೋಮವಾರವೂ ನಿಜ ಎಂದು ...'-ದ-ರೆಕಾರ್ಡ್' ಹೇಳುತ್ತಿದ್ದಾರೆ. ದೆಹಲಿಯಲ್ಲಿರುವ ...ರ್ಮನ್ ರಾಯಭಾರಿ ಕಚೇರಿ ಈ ಸುದ್ದಿಯನ್ನು ...ತಪಡಿಸದಿದ್ದರೂ ಸುದ್ದಿ ಸುಳ್ಳು ಎಂದು ಈಗಲೇ ...ಲು ಸಾಧ್ಯವಿಲ್ಲ ಎಂದು ಪ್ರತಿಕ್ರಿಯಿಸಿದೆ. ಹಿಟ್ಲರ್ ...ಟನ ಬಂಧನದ 'ಸುದ್ದಿ' ನಮ್ಮ ಗೋವಾ ...ಮೂಲಗಳ ಮೂಲಕ ಶನಿವಾರ ಸಾಯಂಕಾಲ ...ಡಪ್ರಭ ಕಚೇರಿಯನ್ನು ತಲುಪಿದಾಗ, ಸುದ್ದಿ ಖಚಿತ ...ಸಿಕೊಳ್ಳಲು ನಾವು ಇನ್ನಿಲ್ಲದ ಪ್ರಯತ್ನ ಮಾಡಿದೆವು. ...ಟರ್‌ಪೋಲ್ ಹಾಗೂ ಜರ್ಮನ್ ರಾಷ್ಟ್ರೀಯ ...ಲೀಸ್‌ನ ಅಂತರ್ಜಾಲ ತಾಣವನ್ನು ಪರೀಕ್ಷಿಸಿದೆವು. ...ರ್ಮನ್ ಭಾಷೆಯಲ್ಲಿದ್ದ ತಾಣವನ್ನು ಗೂಗಲ್ ಟ್ರಾನ್ಸ್‌ಲೇಟ್ ...ಮೂಲಕ ಇಂಗ್ಲಿಷ್‌ಗೆ ತರ್ಜುಮೆ ಮಾಡಿಕೊಂಡು ...ಟೆಡ್' ವ್ಯಕ್ತಿಗಳಿಗಾಗಿ ಹುಡುಕಿದೆವು." "ಈ ನಡುವೆ, ...ವಾ ಪತ್ರಿಕೆಗಳಲ್ಲಿ ಈ ಸುದ್ದಿ ಪ್ರಕಟವಾಗಿ ಆಗಲೇ ...ು ದಿನವಾಗಿತ್ತು. ಆದರೆ, ಪೊಲೀಸರು ಇದನ್ನು ...ಕರಿಸಿರಲಿಲ್ಲ. ಈ ಹಿನ್ನೆಲೆಯಲ್ಲಿ 'ಕನ್ನಡಪ್ರಭ' ಹಿಟ್ಲರ್ ...ಜನ ಬಂಧನದ ಸುದ್ದಿಯನ್ನು ಮುದ್ರಿಸಿತು. ಆದರೆ, ...ಮವಾರದ ಬೆಳವಣಿಗೆಗಳ ಪ್ರಕಾರ ಗೋವಾದಲ್ಲಿ ...ರ್ ಬಂಟನ ಬಂಧನದ ಸುದ್ದಿ ನಿಜವಾಗಿರುವಂತೆ ...ರುತ್ತಿಲ್ಲ". ಎಂದು ಬರೆದುಕೊಂಡರು.

...ಪತ್ರಿಕಾ ಪ್ರಕಟಣೆಯಲ್ಲಿ ನಮೂದಿಸಿರುವ ಹೆಸರಿನ ...ಟ್ರೇಶನ್ ಕ್ಯಾಂಪ್ ಅಸಲಿಗೆ ಎಲ್ಲೂ ಅಸ್ತಿತ್ವದಲ್ಲೇ ...ಲ್ಲ ಎಂಬ ವಿಚಾರವನ್ನು ದೃಢಪಡಿಸಿಕೊಳ್ಳುವುದಕ್ಕೆ ...ರ್‌ನೆಟ್‌ನಲ್ಲಿ ಹತ್ತು ನಿಮಿಷ ಸಾಕು. ಎರಡನೇ ...ಹಾಯುದ್ಧದ ಸಮಯದಲ್ಲಿ ಪಶ್ಚಿಮ ಜರ್ಮನಿಯೇ ...ರಲಿಲ್ಲ ಎಂಬುದು ಇತಿಹಾಸದ ಕನಿಷ್ಠ ...ರುವವರಿಗೂ ಗೊತ್ತಿರುವ ವಿಚಾರ. 'ಕನ್ನಡ ಪ್ರಭ'ದ ...ದಿ ಇಷ್ಟೆಲ್ಲಾ ಪ್ರಯತ್ನಪಟ್ಟ ಮೇಲೂ ಆ ಘಟನೆ ...ವಾಗಿ ನಡೆದಿದೆ ಎಂಬುದು ಸ್ಪಷ್ಟವಾಗಿಲ್ಲ. ಆದರೂ ...ಶ್ರೀ ಶ್ರೀ ರಂಗನಾಥ್ ಅವರು ಈ ಸುದ್ದಿಯನ್ನು ...ಯ ಮುಖಪುಟದಲ್ಲಿ ಪ್ರಕಟಿಸಿಬಿಟ್ಟರು! ರೆಡಿಮೇಡ್ ...ಫುಡ್ ಸಿಕ್ಕರೆ ಯಾರು ತಾನೆ ಬೇಡ ಅಂತಾರೆ? ...ನ್ನು 'ವಿಜಯ ಕರ್ನಾಟಕ'ವೂ ಇದಕ್ಕೆ ಹೊರತಾಗಿಲ್ಲ. ...ಟ್ರೂಟ್‌ಲೈಟ್ ಪತ್ರಕರ್ತ ಸುದ್ದಿಯ ವಾಸ್ತವಾಂಶ ...ಲಿಗೆ ಬಂದ ಮೇಲೂ ಮತ್ತೊಂದು ವರದಿ ಪ್ರಕಟಿಸಿ ...ವಾದ ಪೊಲೀಸರು ಬಾಕ್‌ನನ್ನು ಮಾದಕ ದ್ರವ್ಯ ...ದಿದ ಅಪರಾಧದ ಮೇಲೆ ಬಂಧಿಸಿರುವುದನ್ನು ...ಪಡಿಸಿದ್ದಾರಾದರೂ ಆತ ಹಿಟ್ಲರ್‌ನ ಕರ್ನಲ್ ...ಎಂದು ಸಮಗೆ ತಿಳಿದಿಲ್ಲ ಎನ್ನುತ್ತಿದ್ದಾರೆ. ಅವರು ...ಹೇಳುವುದಕ್ಕೆ ಇಂಟರ್‌ಪೋಲ್‌ನ ಒತ್ತಡವೂ ...ಹುದು" "ಖಾನಾಪುರ ಅಂತಾರಾಷ್ಟ್ರೀಯ ...ರಾಧಿಗಳ ತಾಣವಾಗುತ್ತಿದೆ" "ಅರ್ಜೆಂಟೀನಾ, ...ವಿಯಾ, ಯಮನ್, ಕೀನ್ಯಾ ಮತ್ತಿತರ ಪ್ರದೇಶಗಳಲ್ಲಿ ...ಪಡೆದಿದ್ದ" ಎಂದು ಮತ್ತೊಮ್ಮೆ ಪುಂಗಿ ...ವುದರ ಜೊತೆಗೆ ಕಪೋಲಕಲ್ಪಿತ ಬಾಕ್ ಸಿಯಾನೋ ...ಅದನ್ನು ಮಾರಲು ಪ್ರಯತ್ನಿಸಿದ್ದು ಎಲ್ಲ ಕತೆಯನ್ನು ...ನ್ನು ಹರಿಕತೆಯಾಗಿ ಹೇಳಿಬಿಟ್ಟ.

...ನ್ನು ಇಂಗ್ಲಿಷ್ ಮಾಧ್ಯಮಗಳಂತೂ ಆದದ್ದು ...ತು, ಅದನ್ನು ಬಿಟ್ಟು ಬಿಡುವುದೇ ವಾಸಿ ಎಂಬಂತೆ ...ಹೇಳಿ ಓದುಗರನ್ನೂ ಮರೆಸಲು ಪ್ರಯತ್ನಿಸಿದವು. ...ತ್ಯದಲ್ಲಿ ಸುದ್ದಿಯ ಹುಡಿಯಿಂದ ಬೆಳೆಯುತ್ತಿರುವ ...ಯ ಮಾಧ್ಯಮಗಳು ಏನನ್ನು ಕೊಟ್ಟರೂ ತಿಂದು ...ತ್ತ ಎಂಬುದಂತೂ ಇದರಿಂದ ಸ್ಪಷ್ಟವಾದಂತಾಯಿತು.



ಮಗ ಅರಮನೆಗೆ ಹೆತ್ತವರು ಬೀದಿಗೆ

■ ರಾ. ಸೋಮನಾಥ್

ಧನಮದ, ಕೀರ್ತಿಮದ ಮತ್ತು ಜನಮದಗಳೆಲ್ಲ ಒಟ್ಟೊಟ್ಟಿಗೆ ನೆತ್ತಿಗೇರಿದರೆ ಇನ್ನೇನಾಗುತ್ತೆ?




ಕಾಮಿಡಿ ಗಣೇಶ್ ತನ್ನ ಹುಟ್ಟುಹಬ್ಬದ ದಿನ ಅಂಧ ಮಕ್ಕಳ ಜೊತೆ ನಿಂತು ಕ್ಯಾಮೆರಾಕ್ಕೆ ಪೋಜು ಕೊಡುತ್ತಿದ್ದರೆ ಮತ್ತೊಂದೆಡೆ ಆತನ ಹುಟ್ಟೂರು ಅಡಕಮಾರನಹಳ್ಳಿಯ ಜನ ಲಟಿಕೆ ಮುರಿದು ಶಾಪ ಹಾಕುತ್ತಿದ್ದಾರೆ. ಹೆತ್ತ ತಾಯಿ, ಜನ್ಮ ಕೊಟ್ಟ ತಂದೆ, ಒಡಹುಟ್ಟಿದ ತಮ್ಮಂದಿರ್ಯಾರೂ ಬಾಯಿಬಿಟ್ಟು ಹೇಳದೇ ಹೋದರೂ ಅವರ ಕಣ್ಣುಗಳೇ ಬೇಗುದಿಯನ್ನು ಸಾರಿ ಹೇಳುತ್ತಿವೆ. ಊರಿಗೆ ಉಪಕಾರಿಯಾದ ಗಣೇಶ್ ಮನೆಗೆ ಮಾರಿ!

ಗಣೇಶ್ ವಿರುದ್ಧ ಸದ್ಯ ಆತನ ಮನೆಯವರೇ ತಿರುಗಿಬಿದ್ದಿದ್ದಾರೆ!

ಅಷ್ಟೇ ಏಕೆ; ಆತನ ಗಾಡ್‌ಫಾದರ್, ಮುಂಗಾರು ಮಳೆಯ ನಿರ್ಮಾಪಕ ಅಡಕಮಾರನಹಳ್ಳಿ ಕೃಷ್ಣಪ್ಪ ಅದೆಷ್ಟು ಅಸಹ್ಯದಿಂದ ಗಣೇಶ್ ಗುಣಗಾನ ಮಾಡುತ್ತಿದ್ದಾರೆಂದರೆ–

"ಅವನೊಂದು ಮುಳ್ಳಿದ್ದಂತೆ. ಅವನನ್ನ ನಮ್ಮೂರಿನ ಹುಡುಗ ಅಂತ ವಿಶ್ವಾಸ ಇಟ್ಟು ಬೆಳೆಸಿದೆ. ಪ್ರೋತ್ಸಾಹ ಕೊಟ್ಟೆ. ನನ್ನ ಮೇಲೆ ಆತನಿಗೆ ಕೃತಜ್ಞತೆ ಇಲ್ಲದೇ ಹೋದರೆ ಹಾಳಾಗಲಿ, ಆದ್ರೆ ಹೆತ್ತ ತಂದೆ ತಾಯಿ ಮಾಡಿದ ತಪ್ಪಾದರೂ ಏನು? ಸ್ವಂತ ತಂದೇನ ಆತ ಏನಂಥ ಹೆದರಿಸಿದ್ದಾನೆ ಗೊತ್ತಾ? 'ನಾನು ಕರೆದೆ ಅಂದ್ರೆ ಮುಖ್ಯಮಂತ್ರಿ ಯಡಿಯೂರಪ್ಪನವರೇ ಓಡಿಬರ್ತಾರೆ. ಒಂದು ಮಾತು ಮುಖ್ಯಮಂತ್ರಿಗೆ ಹೇಳಿದೆ ಅಂದ್ರೆ ನಿನ್ನನ್ನ ಆರೆಸ್ಟ್ ಮಾಡಿಸಿ ಜೈಲಿಗೆ ಹಾಕ್ತಾರೆ' ಅಂತ ತನ್ನ ಅಪ್ಪನ್ನ ಹೆದರಿಸ್ತಾನಲ್ಲ; ಅವನು ಮನುಷ್ಯನಾ?"

ಇದು ಮುಂಗಾರು ಮಳೆ ನಿರ್ಮಾಪಕ, ಕಾಮಿಡಿ ಗಣೇಶ್‌ನ ಗಾಡ್‌ಫಾದರ್ ಅಡಕಮಾರನಹಳ್ಳಿ ಕೃಷ್ಣಪ್ಪನವರ ಬಾಯಿಂದ ಬಂದ ಮಾತು.



ತಮ್ಮಂದಿರು



ಅವನೇನಾದ್ರೂ ಮನೆಗೆ ಬಂದ ಅಂದ್ರೆ ಆತನ ತಂದೆತಾಯೀನೇ ಬೂಟಲ್ಲಿ ಹೊಡೀತಾರೆ ಎಂಬಷ್ಟರ ಮಟ್ಟಿಗೆ ಅಡಕಮಾರನಹಳ್ಳಿಯ ಜನ ಗಣೇಶ್ ವಿರುದ್ಧ ಕಿಡಿಕಾರುತ್ತಾರೆ. ಮುಂಗಾರು ಮಳೆ ಕೃಷ್ಣಪ್ಪ ಮುಂದುವರಿದು "ಬೇರೆ ಯಾರೇ ಆದರೂ ನನಗೆ ದ್ರೋಹ ಮಾಡಿದ್ದರೆ ಸಹಿಸಿಕೊಳ್ಳುತ್ತಿದ್ದೆ. ನಮ್ಮ ಊರು, ಗ್ರಾಮಸ್ಥರು ಮತ್ತು ಆತನ ಕುಟುಂಬದವರ್‍ಯಾರೂ ಆತ ನಮ್ಮೋನು ಅಂತ ಈಗ ಲೆಕ್ಕಕ್ಕಿಟ್ಟಿಲ್ಲ, ಆತನ ವರ್ತನೆಯೇ ಹಾಗಿದೆ. ಶಿಲ್ಪ ಎಂಬಾಕೆಯ ಜೊತೆ ಆತನ ಮದುವೆ ಯಾಗಿದ್ದೇ ಬಂತು, ತನ್ನ ಊರು, ಹೆತ್ತವರು, ಒಡಹುಟ್ಟಿದವರ ಬಗ್ಗೆಯೇ ಆತನಿಗೆ ಅಸಹ್ಯ ಶುರುವಾಗಿದೆ. ತಾನು ಮಾತ್ರ ಬೆಂಗಳೂರಿನಲ್ಲಿ ಐಷಾರಾಮಿಯಾಗಿದ್ದು ಹೆತ್ತವರನ್ನು ಬೀದಿಗೆ ಹಾಕಿದ್ದಾನೆ. ಒಬ್ಬ ಸ್ಟಾರ್‌ನ ತಂದೆ, ತಾಯಿ, ತಮ್ಮಂದಿರು ಇವತ್ತಿಗೂ ಎರಡು ಸಾವಿರ ರೂಪಾಯಿ ಬಾಡಿಗೆ ಮನೆಯಲ್ಲಿದ್ದಾರೆಂದರೆ ನಂಬುತ್ತೀರಾ?"

ಇದು ಅಡಕಮಾರನಹಳ್ಳಿ ಕೃಷ್ಣಪ್ಪನವರ ಅಸಹನೆಯಷ್ಟೇ ಅಲ್ಲ, ಆ ಊರಿನ ಯಾರೇ ಒಬ್ಬರನ್ನು ನಿಲ್ಲಿಸಿ ಕೇಳಿದರೂ ಗಣೇಶ್ ಬಗ್ಗೆ ಒಳ್ಳೆಯ ಮಾತಿಲ್ಲ. ಕಾಮಿಡಿ ಗಣೇಶ್ ಅರ್ಥಾತ್ ಗೋಲ್ಡನ್ ಸ್ಟಾರ್ ಗಣೇಶ್ ಸದ್ಯ ಕನ್ನಡದ ಜನಪ್ರಿಯ ತಾರೆ. ದುರಹಂಕಾರಕ್ಕೆ ಬಿದ್ದವನಲ್ಲ, ಯಾರೋ ಅನಾಥ ಬಾಲಕಿ ಹಾಸಿಗೆ ಹಿಡಿದಿದ್ದಾಳೆಂದು ಆಸ್ಪತ್ರೆಗೇ ಹೋಗಿ ಆಕೆಯನ್ನು ಮುದ್ದಾಡಿ ಸುದ್ದಿ ಮಾಡಿದವನಿಗೆ, ಇನ್ನಾರೋ ವಿಚ್ಛೇದಿತೆ ತನಗೆ ಲೈಫ್ ಕೊಡ್ತೀರಾ ಎಂದು ಕೇಳಿದ ಮಾತ್ರಕ್ಕೇ ಆಕೆಯನ್ನೇ ಮದುವೆಯಾಗಿ ಜನರನ್ನು ಗೆದ್ದವನಿಗೆ, ತನ್ನ ಹುಟ್ಟುಹಬ್ಬದ ದಿನ ಅಂಧಮಕ್ಕಳ ಜೊತೆ ನಿಂತು ಪೋಜು ಕೊಟ್ಟವನಿಗೆ ತನ್ನ ಹೆತ್ತ ತಂದೆ ತಾಯಂದಿರ ಕಣ್ಣೀರು ಮಾತ್ರ ಏಕೆ ಕಾಣಿಸುತ್ತಿಲ್ಲ? ಒಡಹುಟ್ಟಿದ ತಮ್ಮಂದಿರಿಬ್ಬರೂ ಇವತ್ತಿಗೂ ನಿರುದ್ಯೋಗಿಗಳಂತೆ ದಿಕ್ಕೆಟ್ಟು ಅಲೆಯುತ್ತಿದ್ದರೆ ಗಣೇಶ್ ಅಂಧಮಕ್ಕಳ ಜೊತೆ ನಿಂತು ಪೋಜು ಕೊಡುವುದಕ್ಕೆ ಏನಾದರೂ ಅರ್ಥವುಂಟೆ?



ತಂದೆ



ತಾಯಿ

ಇದು ಅಡಕಮಾರನಹಳ್ಳಿ ಗ್ರಾಮಸ್ಥರ ಪ್ರಶ್ನೆಯಷ್ಟೇ ಅಲ್ಲ ವಿಪರ್ಯಾಸ ಕೂಡ. ಬೆಂಗಳೂರು-ತುಮಕೂರು ರಸ್ತೆಯಲ್ಲಿ ಪೀಣ್ಯ-ದಾಸರಹಳ್ಳಿಯನ್ನು ದಾಟುತ್ತಿದ್ದಂತೆ ಎಡಕ್ಕಿರುವುದು ಅಡಕಮಾರನಹಳ್ಳಿ. ಮುಂಗಾರು ಮಳೆ ಕೃಷ್ಣಪ್ಪನವರನ್ನು ಈ ಊರಿನ ಜನ ಈಗಲೂ ಯಜಮಾನ್ರು ಅಂತಲೇ ಕರೆಯುತ್ತಾರೆ. ಶುರುವಿನಲ್ಲಿ ತಾನು ಅಡಕಮಾರನಹಳ್ಳಿ ಕೃಷ್ಣಪ್ಪನವರ ಮಗ ಅಂತಲೇ ಕೆಲವರ ಬಳಿ ಗಣೇಶ್ ಹೇಳಿಕೊಂಡಿದ್ದ. ವಾಸ್ತವವಾಗಿ ಗಣೇಶ್ ಈ ಊರಿನ ಗೂರ್ಖಾ ಕೃಷ್ಣಪ್ಪ ಬಹದೂರ್ ಎಂಬುವವರ ಮಗನೇ ಹೊರತು ಮುಂಗಾರು ಮಳೆ ಕೃಷ್ಣಪ್ಪ ಈತನ ತಂದೆಯಲ್ಲ.

ಇದ್ಯಾವುದಕ್ಕೂ ಕೃಷ್ಣಪ್ಪ ಬೇಸರ ಪಟ್ಟುಕೊಂಡವರಲ್ಲ. ಅಡಕಮಾರನಹಳ್ಳಿಯಲ್ಲಿ ಆ ಕಾಲದಿಂದಲೂ ನೆಲೆಗೊಂಡ ಸರಿಸುಮಾರು ಇಪ್ಪತ್ತು ನೇಪಾಳಿ ಕುಟುಂಬಗಳಿವೆ. ಈ ಪೈಕಿ ಕೃಷ್ಣ ಬಹದ್ದೂರ್ ಎಂಬ ಗೂರ್ಖಾನ ಮಗನೇ ಕಾಮಿಡಿ ಗಣೇಶ್. ಒಂದಾನೊಂದು ಕಾಲಕ್ಕೆ ಪಕ್ಕದ ಶ್ರೀನಿವಾಸ ಟೆಕ್ಸ್‌ಟೈಲ್ಸ್‌ಗೆ ಕಾವಲುಗಾರನಾಗಿ ನೇಪಾಳದಿಂದ ವಲಸೆ ಬಂದ ಕೃಷ್ಣ ಬಹದ್ದೂರ್ ಕಾಲಕ್ರಮೇಣ ಗೂರ್ಖಾ ಕೃಷ್ಣಪ್ಪನಾದ. ಅದೇ ಊರಿನಲ್ಲಿದ್ದ ಸುಲೋಚನಾರನ್ನು ಮದುವೆಯಾದ. ಕೃಷ್ಣ ಬಹದ್ದೂರ್‌ನ ಮೂವರು ಗಂಡುಮಕ್ಕಳ ಪೈಕಿ ದೊಡ್ಡವನೇ ಗಣೇಶ್. ಮಹೇಶ್ ಮತ್ತು ಉಮೇಶ್ ಎಂಬಿಬ್ಬರು ತಮ್ಮಂದಿರು.

ಯಾವತ್ತು ಮುಂಗಾರು ಮಳೆ ಹಿಟ್ಟಾಗಿ ಗಣೇಶ್ 'ಗೋಲ್ಡನ್ ಸ್ಟಾರ್' ಪಟ್ಟಕ್ಕೇರಿದನೋ ಅಡಕಮಾರನಹಳ್ಳಿಯಲ್ಲಿದ್ದ ಆತನ ಕುಟುಂಬವಿಡೀ ಉಬ್ಬಿಹೋಗಿತ್ತು. ಮೊದಲು ಚೆಲ್ಲಾಟ, ಅನಂತರ ಸೂಪರ್‌ಹಿಟ್ ಮುಂಗಾರುಮಳೆ, ಕ್ರಮೇಣ ತೆರೆಕಂಡ ಹುಡುಗಾಟ, ಚೆಲುವಿನ ಚಿತ್ತಾರ, ಕೃಷ್ಣ ಇತ್ಯಾದಿ ಚಿತ್ರಗಳೆಲ್ಲ ಒಂದರ ಮೇಲೊಂದಾಗಿ ಹಿಟ್ಟಾದವು. ಕಮ್ಮಿಯೆಂದರೂ ಒಂದು ಡಜನ್ ಕಾಲ್‌ಶೀಟುಗಳಿಗೆ ಸಹಿ ಹಾಕಿದ್ದ ಗಣೇಶ್ ಪ್ರತಿ ಚಿತ್ರಕ್ಕೂ ಎಂಭತ್ತು ಲಕ್ಷಕ್ಕೆ ಕಮ್ಮಿಯಿಲ್ಲದಂತೆ ಸಂಭಾವನೆ ಗಿಟ್ಟಿಸಿದ್ದ.

ಅದೇ ಜೋಷ್‌ನಲ್ಲಿ ಅಡಕಮಾರನಹಳ್ಳಿಗೆ ಬಂದವನು ಸೈಟೊಂದನ್ನು ಖರೀದಿಸಿ ತನ್ನ ಅಪ್ಪ ಅಮ್ಮಂದಿರಿಗೆ ಮೂರಂತಸ್ತಿನ ಮನೆ ಕಟ್ಟಿಸುತ್ತೇನೆಂದು ಡೈಲಾಗ್ ಹೊಡೆದ. ಆ ಕಾಲಕ್ಕೇ ಅಡಕಮಾರನಹಳ್ಳಿ ಕೃಷ್ಣಪ್ಪ ಕೊಟ್ಟಿದ್ದ ಉಚಿತ ನಿವೇಶನವೊಂದು ಅಪ್ಪನ ಹೆಸರಿಗಿತ್ತು. ಪಕ್ಕದಲ್ಲೇ ಮುರುಕಲು ಮನೆಯಲ್ಲಿ ವಾಸಿಸುತ್ತಿದ್ದ ತಂದೆ ತಾಯಂದಿರನ್ನು ಅದೇ ಊರಿನ ಹಿರೀಕ ವೀರಪ್ಪನವರ ಮನೆಗೆ ಬಾಡಿಗೆ ಮಾತಾಡಿ ಕರೆದೊಯ್ದ. ತನ್ನ ತಾಯಿಯ ವಿಧವಾ ತಂಗಿ ಲಕ್ಷ್ಮಿ ಎಂಬಾಕೆಯೂ ತೀರಿಕೊಂಡಿದ್ದರಿಂದ ಅನಾಥರಾಗಿದ್ದ ಆಕೆಯ ರಾಧ ಮತ್ತು ಗೀತ ಎಂಬ ಹೆಣ್ಣುಮಕ್ಕಳಿಬ್ಬರೂ ಗಣೇಶ್ ತಾಯಿಯ ಆಸರೆಯಲ್ಲೇ ಬೆಳೆದು ಗಾರ್ಮೆಂಟ್ ಕೆಲಸಕ್ಕೆ ಹೋಗುತ್ತಿದ್ದರು. ತಂಗಿಯರಿಬ್ಬರೂ ಗಾರ್ಮೆಂಟ್ ಕೆಲಸಕ್ಕೆ ಹೋಗುತ್ತಾರೆಂದರೆ ಅದು ತನಗೇ ಅವಮಾನ ಎಂದು ಅವರಿಬ್ಬರನ್ನೂ ಕೆಲಸ ಬಿಡಿಸಿದ. ತಮ್ಮ ಉಮೇಶ್‌ನನ್ನು ತಾನೇ ನಿಂತು ಬಿಬಿಎಂ ಓದಿಸುತ್ತೇನೆಂದು ಕರೆದೊಯ್ದು ತನ್ನ ನಾಗರಬಾವಿಯ ಮನೆಯಲ್ಲಿಟ್ಟುಕೊಂಡ.

ಅದ್ಯಾವ ಗಳಿಗೆಯಲ್ಲಿ ಶಿಲ್ಪಾ ಆತನ ಬದುಕಿಗೆ ಕಾಲಿಟ್ಟಳೋ, ಇಲ್ಲಿಗೆ ವರ್ಷದಿಂದ ಗಣೇಶ್ ವರ್ತನೆಯೇ ಬದಲಾಗತೊಡಗಿತು. ಅಡಕಮಾರನಹಳ್ಳಿಗೆ ಬರುವುದನ್ನೇ ನಿಲ್ಲಿಸಿಬಿಟ್ಟ. ಅಷ್ಟಕ್ಕೂ ತಂದೆ ತಾಯಂದಿರ ಬಗ್ಗೆ ಆತನ ಸಿಟ್ಟಿಗೆ ಕಾರಣ ಅವರು ಮದುವೆಯನ್ನು ವಿರೋಧಿಸಿದ್ದು. ಯಾವ ತಂದೆ ತಾಯಂದಿರಾದರೂ ಮೊದ ಮೊದಲು ವಿರೋಧಿಸಿ ಕ್ರಮೇಣ ಸರಿಹೋಗುವುದು ಸಾಮಾನ್ಯ. ಹಾಗಂಥ ಗಣೇಶ್ ತಂದೆ-ತಾಯಿ ಇದ್ಯಾವುದನ್ನು ಬಹಿರಂಗವಾಗಿ ವ್ಯಕ್ತಪಡಿಸಿಲ್ಲ. ತಾವೇ ನಿಂತು ಮದುವೆ ಮಾಡಿಕೊಟ್ಟಿದ್ದಾರೆ. ತಮ್ಮಂದಿರೂ ಅಷ್ಟೇ.

ಆದರೆ ಗಣೇಶ್‌ಗೆ ತನ್ನ ತಂದೆಯ ಬಗ್ಗೆಯೇ ಅಸಹ್ಯ. ಜನ ಎಲ್ಲಿ ಗೂರ್ಖಾ ಎಂದು ಗುರುತಿಸುತ್ತಾರೋ ಎಂಬ ಅಳುಕು. ಬರುಬರುತ್ತ ಪತ್ನಿ ಶಿಲ್ಪಾರ ಫ್ಲಾಟಿನಲ್ಲೇ ಹೆಚ್ಚು ಸಮಯ ಕಳೆಯಲಾರಂಭಿಸಿದ. ಮೊದಮೊದಲು ಮಗ ಚೆನ್ನಾಗಿರಲಿ ಎಂದೇ ಅಪ್ಪ ಅಮ್ಮ ಭಾವಿಸಿದ್ದರು. ಆದರೆ ತಾನೇ ಕರೆದೊಯ್ದು, ಓಡಾಡಲಿಕ್ಕೊಂದು ಕಾರ್ ಕೊಟ್ಟು, ಬಿಬಿಎಂ ಓದಿಸುತ್ತಿದ್ದ ತಮ್ಮ ಉಮೇಶ್‌ನನ್ನು ತನ್ನ ನಾಗರಬಾವಿಯ ಮನೆಯಿಂದ ಯಾವತ್ತು ಗಣೇಶ್ ಹೊರದಬ್ಬಿದನೋ ಇಡೀ ಅಡಕಮಾರನಹಳ್ಳಿಯೇ ಥರಗುಟ್ಟಿತು. ಗಣೇಶ್ ತಮ್ಮನ ಕಾರು ಕಿತ್ತುಕೊಂಡಿದ್ದಷ್ಟೇ ಅಲ್ಲ ಪ್ರತಿನಿತ್ಯ ಆತ ಊಟ ತಿಂಡಿ ಮಾಡಿಕೊಂಡಿದ್ದ ಹೋಟೆಲಿಗೆ ಪಾವತಿಸುತ್ತಿದ್ದ ದುಡ್ಡನ್ನೂ ನಿಲ್ಲಿಸಿಬಿಟ್ಟಿದ್ದ. ಕೆಲಸ ಬಿಡಿಸಿದ ತಂಗಿಯರಿಬ್ಬರು ತಂಗಿಯರಿಗೆ ಖರ್ಚಿಗೆ ಕೊಡುತ್ತಿದ್ದದ್ದನ್ನೂ ನಿಲ್ಲಿಸಿದ. ತಂದೆ ತಾಯಂದಿರಿಗೆ ಫೋನ್ ಮಾಡುವುದನ್ನೇ ಬಿಟ್ಟುಬಿಟ್ಟ. ಒಂದು ವರ್ಷವಾದರೂ ಅಡಕಮಾರನಹಳ್ಳಿಯತ್ತ ತಲೆ ಹಾಕಲೇ ಇಲ್ಲ. ಕನಿಷ್ಠ ತನ್ನ ಗಾಡ್‌ಫಾದರ್ ಅಡಕಮಾರನಹಳ್ಳಿ ಕೃಷ್ಣಪ್ಪನವರಿಗಾದರೂ ವಾರಕ್ಕೊಮ್ಮೆ ಫೋನ್ ಮಾಡುತ್ತಿದ್ದ.

▶▶▶



ಗಣೇಶ್ ವಾಸವಾಗಿದ್ದ ಗುಡಿಸಲು




ಈಗ ತಂದೆ-ತಾಯಿ ಬಾಡಿಗೆಗೆ ಇರುವ ಮನೆ



ಅರ್ಧಕ್ಕೆ ನಿಂತಿರುವ ಬಂಗಲೆ

ಬೆಳಗಾವಿಯಲ್ಲಿ ಬಿಜೆಪಿ ಶಾಸಕನೇ ಶಿಂತ್ರೆಯಾದ

ಗೂಂಡಾ ಅಭಯ ಪಾಟೀಲ್!



ಭಾರತ ಬಂದ್ ಸಮಯದಲ್ಲಿ ಬೆಳಗಾವಿಯಲ್ಲಿ ಅಭಯ ಪಾಟೀಲ ಬೆಂಬಲಿಗರು ಹೊತ್ತಿಸಿದ ಬೆಂಕಿ.



ಒಂದು ಸಲ ಒದ್ದ ಬಳಿಕ ನಿಧಾನವಾಗಿ ಬಂದು ಅಭಯ ಪಾಟೀಲನನ್ನು ತಡೆಯುತ್ತಿರುವ ಎಸ್ಪಿ ನಿಂಬಾಳಕರ.



ಖನಗಾವಿ ಅವರು ಹೊಡೆಸಿಕೊಂಡರೂ ತಮ್ಮ ಕ್ಷಮೆ ಕೇಳಬೇಕು ಎಂದು ಧರಣಿ ನಿರತರಾದ ಅಭಯ ಹಾಗೂ ಅವರ ಬೆಂಬಲಿಗರನ್ನು ಗದರಿಸಿ, ಲಾಠಿ ರುಚಿ ತೋರಿಸಿ ಹೊರಗಟ್ಟುವುದನ್ನು ಬಿಟ್ಟು ಅಭಯನ ಎದುರು ನಗುತ್ತ ನಿಂತಿರುವ ಎಸ್ಪಿ.



ಖನಗಾವಿ ಅವರು ಮೇಲೆ ಹಲ್ಲೆ ಮಾಡಿದ ಶಾಸಕ ಅಭಯ ಪಾಟೀಲ ಹಾಗೂ ಆತನ ಬೆಂಬಲಿಗರಾದ ರಾಜು ಪಾಟೀಲ (ಬಲಬದಿ) ಹಾಗೂ ದೀಪಕ ಜಮಖಂಡಿ (ಎಡಬದಿ).

ಬೇಲಿಯೇ ಎದ್ದು ಹೊಲ ಮೇಯ್ದಂತೆ ಜನರಿಂದ ಆಯ್ಕೆಯಾದ ಶಾಸಕನೇ ಗೂಂಡಾ ಆಗಿ ಪರಿವರ್ತನೆಯಾದರೆ ಕ್ಷೇತ್ರದ ಅಮಾಯಕ ಜನರನ್ನು ಕಾಪಾಡುವವರ್ಯಾರು? ಇಂತಹದ್ದೊಂದು ಪ್ರಶ್ನೆ ಇಡೀ ದೇಶದ ಜನರಿಗಲ್ಲದಿದ್ದರೂ ಬೆಳಗಾವಿಯ ಜನರಿಗಂತೂ ಪ್ರಸ್ತುತವಾಗಿಬಿಟ್ಟಿದೆ. ಅಲ್ಲಿನ ಜನಪ್ರತಿನಿಧಿ ಬಿಜೆಪಿಯ ಶಾಸಕ ಅಭಯ್ ಪಾಟೀಲ್‌ನ ವರ್ತನೆಯನ್ನು ಮೊನ್ನೆ ಭಾರತ್ ಬಂದ್ ಸಂದರ್ಭದಲ್ಲಿ ನೋಡಿದವರಿಗಂತೂ ಇಂತಹದ್ದೊಂದು ಭಯ ಸಹಜವಾಗಿಯೇ ಹುಟ್ಟುತ್ತದೆ.

ಅಮರನಾಥ ದೇವಾಲಯ ಸಮಿತಿಗೆ ನೀಡಿದ ಸುಮಾರು ನೂರು ಎಕರೆ ಜಮೀನನ್ನು ವಾಪಸ್ಸು ಪಡೆದ ಜಮ್ಮು ಮತ್ತು ಕಾಶ್ಮೀರ ಸರ್ಕಾರದ ಕ್ರಮವನ್ನು ಖಂಡಿಸಿ ವಿಶ್ವ ಹಿಂದೂ ಪರಿಷತ್ತು ಮತ್ತಿತರ ಚೆಡ್ಡಿ ಸಂಘಟನೆಗಳು ನಡೆಸಿದ 'ಭಾರತ ಬಂದ್' ಇಡೀ ರಾಜ್ಯದಲ್ಲಿ ನಡೆದುದಕ್ಕಿಂತ ಭಿನ್ನವಾದ ಸ್ವರೂಪವನ್ನು ಬೆಳಗಾವಿಯಲ್ಲಿ ಪಡೆದುಕೊಂಡಿತ್ತು. ಪರಿಣಾಮವಾಗಿ ಬಂದ್ ಮುಗಿದು ಇಡೀ ರಾಜ್ಯವೇ ಶಾಂತವಾಗಿದ್ದರೂ ಬೆಳಗಾವಿಯಲ್ಲಿ ಮಾತ್ರ ಅದರ ಬೆಂಕಿ ಉರಿಯುತ್ತಲೇ ಇದೆ. ಈ ಬಂದ್ ನೆಪದಲ್ಲಿಯೇ ಬಿಜೆಪಿಯ ಶಾಸಕ ಅಭಯ ಪಾಟೀಲ ಅಪ್ಪಟ ಗೂಂಡಾನಂತೆ ವರ್ತಿಸಿ ತನ್ನ ರಾಜಕೀಯ ವೈಷಮ್ಯವನ್ನು ತೀರಿಸಿಕೊಂಡಿದ್ದಾನೆ. ಈತ ನೀರಾವರಿ ನಿಗಮದ ಉತ್ತರ ವಲಯ ಮುಖ್ಯ ಅಭಿಯಂತರ ಎಸ್.ಎಸ್. ಖನಗಾವಿ ಅವರನ್ನು ಹಿಗ್ಗಾಮುಗ್ಗಾ ಥಳಿಸಿ, ಹೊಟ್ಟೆಗೆ ಬೂಟುಗಾಲಿನಿಂದ ಒದ್ದಿದ್ದಾನೆ. ಅದೂ ಪೊಲೀಸರ ಸಮ್ಮುಖದಲ್ಲಿಯೇ! ಒದೆ ತಿಂದ ಖನಗಾವಿ ಅವರು ಅಭಯ ಪಾಟೀಲ ಹಾಗೂ ಅವರ ಬೆಂಬಲಿಗರ ವಿರುದ್ಧ ಎಪಿಎಂಸಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದು (ಭಾರತೀಯ ದಂಡ ಸಂಹಿತೆ 143, 147, 323, 353 ಹಾಗೂ ಸಹ ಕಲಂ 149ರ ಪ್ರಕಾರ) ಶಾಸಕ ಅಭಯ ಪಾಟೀಲ ಹಾಗೂ ಅವರ ಬೆಂಬಲಿಗರಾದ ದೀಪಕ ಜಮಖಂಡಿ, ರಾಜು ಪಾಟೀಲ, ರಾಜು ಪವಾರ ಹಾಗೂ ಸಂಜಯ ಪಾಟೀಲ ಅವರುಗಳು ಬಂಧನಕ್ಕೊಳಗಾಗಿ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದಾರೆ.

ಖನಗಾವಿಯನ್ನು ಟಾರ್ಗೆಟ್ ಮಾಡಿದ್ದು ಏಕೆ?

ಅಭಯ ಪಾಟೀಲ ಖನಗಾವಿಯನ್ನು ಟಾರ್ಗೆಟ್ ಮಾಡುವುದಕ್ಕೆ ಒಂದು ನಿರ್ದಿಷ್ಟ ಕಾರಣವಿದೆ. ಈ ಹಿಂದೆ ಬಳ್ಳಾರಿ ನಾಲಾ ಹೂಳೆತ್ತುವ ಹಾಗೂ ಕಿಣಯೇ ಡ್ಯಾಮ್ ಪುನರ್‌ನಿರ್ಮಾಣದ ಗುತ್ತಿಗೆಯನ್ನು ಅಭಯ್ ಪಾಟೀಲ್ ಶಿಫಾರಸ್ಸು ಮಾಡಿದವರಿಗೆ ಖನಗಾವಿ ಕೊಟ್ಟಿರಲಿಲ್ಲ. ಇದರಿಂದಾಗಿ ಈ ಗುತ್ತಿಗೆಯಿಂದ ಪಾಟೀಲನಿಗೆ ಸಿಗಬೇಕಾಗಿದ್ದ ಕಮೀಷನ್ ಕೈತಪ್ಪಿ ಹೋಗಿತ್ತು. ಅಂದಿನಿಂದಲೇ ಈತ ಖನಗಾವಿಯ ಮೇಲೆ ಸೇಡು ತೀರಿಸಿಕೊಳ್ಳಲು ಹವಣಿಸುತ್ತಿದ್ದ. ಯಾವಾಗ ವಿಎಚ್‌ಪಿ ಭಾರತ್ ಬಂದ್‌ಗೆ ಕರೆ ಕೊಟ್ಟಿತೋ ಅವತ್ತೇ ಖನಗಾವಿಗೆ ಗೂಸಾ ನೀಡಲು ಅಭಯ್ ಸ್ಕೆಚ್ ಹಾಕಿದ್ದ.

ಭಾರತ ಬಂದ್ ಸಮಯದಲ್ಲಿ ಬೆಳಗಾವಿ ನಗರದ ಮುಗ್ಧ ಹಿಂದೂ ಯುವಕರ ಕಿವಿ ಊದಿ ಅವರನ್ನು ತನ್ನೊಂದಿಗೆ ಕಟ್ಟಿಕೊಂಡ ಅಭಯ್ ಪಾಟೀಲ್ ಖನಗಾವಿ ಅವರ ಮೇಲೆ ಹಲ್ಲೆ ಮಾಡಿದ್ದಾನೆ.

ತನ್ನ ಗೂಂಡಾಗಿರಿಯನ್ನು ಸಮರ್ಥಿಸಿಕೊಳ್ಳುವುದಕ್ಕಾಗಿ ಅಭಯ್ ಪಾಟೀಲ್ "ಭಾರತ ಬಂದ್ ಇರುವುದರಿಂದ ಖನಗಾವಿ ಅವರನ್ನು ಕಚೇರಿ ಬಂದ್ ಮಾಡುವಂತೆ ಕೇಳಿದೆವು. ಆಗ ಖನಗಾವಿ ಅವರು ಹಿಂದೂ ಧರ್ಮದ ಬಗ್ಗೆ ಅಸಭ್ಯವಾಗಿ ಮಾತನಾಡಿದರು. ಇದರಿಂದ ಆಕ್ರೋಶಿತಗೊಂಡ ಕಾರ್ಯಕರ್ತರು ಖನಗಾವಿ ಮೇಲೆ ಹಲ್ಲೆ ಮಾಡಿದ್ದಾರೆ" ಎಂದು ಪುಂಗಿ ಊದುತ್ತಿದ್ದಾನೆ. ಅಷ್ಟೇ ಅಲ್ಲ, ತಾನು ಹಿಂದೂ ಧರ್ಮದ ಹೋರಾಟಕ್ಕಾಗಿ ಇಂತಹ ನೂರು ಪ್ರಕರಣಗಳನ್ನು ಎದುರಿಸಲು ಸಿದ್ಧ ಎಂದು ಹೀರೋನಂತೆ ಪೋಸು ಬೇರೆ ಕೊಡುತ್ತಿದ್ದಾನೆ. ಇವನಿಗೆ ತಾಕತ್ತಿದ್ದರೆ ಅವತ್ತು ಬಂದ್ ಕರೆದಿದ್ದ ಸಂದರ್ಭದಲ್ಲಿ ತೆರೆದಿದ್ದ ಜಿಲ್ಲಾಧಿಕಾರಿ ಕಚೇರಿ, ಸರ್ಕಾರಿ ಹಾಗೂ ಕೆಲ ಖಾಸಗಿ ಬ್ಯಾಂಕ್‌ಗಳು, ಮಹಾನಗರ ಪಾಲಿಕೆ ಸೇರಿದಂತೆ ಇತರೆ ಕಚೇರಿಗಳನ್ನು ಏಕೆ ಬಂದ್ ಮಾಡಿಸಲಿಲ್ಲ? ಮೆರವಣಿಗೆಯ ಮಾರ್ಗವನ್ನೇ ಬದಲಾಯಿಸಿ ಬೇಕಂತಲೇ ಕ್ಲಬ್ ರಸ್ತೆಯಲ್ಲಿರುವ ಈ ಕಚೇರಿಗೆ ನುಗ್ಗಿದ್ದು ಯಾಕೆ? ಅದು ಹಿಂದೂತ್ವದ ರಕ್ಷಣೆ ಮಾಡುವ ಕಾರಣಕ್ಕಾಗಿ ಅಲ್ಲ, ತನ್ನ ಜೇಬನ್ನು ಬಟ್ಟೆ ದುಡ್ಡಿನಿಂದ ತುಂಬಿಸಿಕೊಳ್ಳುವುದಕ್ಕೆ ಖನಗಾವಿ ಅಡ್ಡ ಬಂದ ಎಂಬ ಕಾರಣಕ್ಕಾಗಿ! ಸಾಮಾನ್ಯವಾಗಿ ಇಂತಹ ಖೊಟ್ಟಿ ವಿಷಯಗಳನ್ನು ಈಡೇರಿಸಿಕೊಳ್ಳಲೆಂದೇ ಚೆಡ್ಡಿಗಳು ಹಿಂದೂ ಧರ್ಮದ ರಕ್ಷಣೆ ಎಂದು ಅರಚಿಕೊಳ್ಳುವುದು ಈಗ ಬಹಳಷ್ಟು ಜನರಿಗೆ ಅರ್ಥವಾಗಿದೆ. ಅದು ಈಗ ಬೆಳಗಾವಿ ಜನರಿಗೂ ಗೊತ್ತಾಗುತ್ತಿದೆ.

ಎಸ್ಪಿ ನಿಂಬಾಳ್ಕರ್ ಬಿಸ್ಕೆಟ್ ತಿನ್ನುತ್ತಿದ್ದನೆ?

ಖನಗಾವಿ ಅವರ ಮೇಲೆ ಹಲ್ಲೆ ನಡೆದಾಗ ಎಸ್ಪಿ ಹೇಮಂತ ನಿಂಬಾಳಕರ ಸ್ಥಳದಲ್ಲಿಯೇ ಇದ್ದರು. ಬಂದ್ ಮಾಡಿಸುವುದಕ್ಕೆ ಗೂಂಡಾ ಶಾಸಕನೊಂದಿಗೆ ಬಂದಿದ್ದ ಪುಢಾರಿಗಳಿಗಿಂತ ದುಪ್ಪಟ್ಟು ಜನ ಪೊಲೀಸರು ಇದ್ದರು. ಆದರೆ ಅಭಯ ಪಾಟೀಲ ಹಾಕುವ ಬಿಸ್ಕೆಟ್‌ಗೆ ಕಾಯುತ್ತ ಕುಳಿತುಕೊಳ್ಳುವ ನಿಂಬಾಳಕರ ಖನಗಾವಿಯ ಮೇಲೆ ಹಲ್ಲೆಯಾಗುವುದನ್ನು ನೋಡುತ್ತಾ ಮಜಾ ತೆಗೆದುಕೊಳ್ಳುತ್ತಿದ್ದ. ಅದೂಅಲ್ಲದೇ ಒದೆ ತಿಂದ ಖನಗಾವಿಯೇ ಅಭಯ ಪಾಟೀಲ್ ಮತ್ತವನ ಬೆಂಬಲಿಗರ ಕ್ಷಮೆ ಕೇಳುವಂತೆ ಮಾಡಿದ. ಇಂತಹ ಹತ್ತು ಜನ ಎಸ್ಪಿಗಳಿದ್ದರೆ ಸಾಕು ಕರ್ನಾಟಕ ಮೂರೇ ತಿಂಗಳಲ್ಲಿ ಗೂಂಡಾರಾಜ್ಯವಾಗಿ ಪರಿವರ್ತನೆಯಾಗುವುದರಲ್ಲಿ ಯಾವುದೇ ಅನುಮಾನ ವಿಲ್ಲ.

ಅಭಯ ಪಾಟೀಲನ ಈ ದುಂಡಾವರ್ತನೆ ಇದು ಮೊದಲನೆಯದೇನಲ್ಲ. ಈ ಹಿಂದೆ ನೂರಾರು ಮಹಿಳೆಯರಿಗೆ ಹಳದಿ ರೇಷನ್ ಕಾರ್ಡ್ ಕೊಡಿಸುವುದಾಗಿ ಹೇಳಿ ಅವರಿಂದ ಜಿಲ್ಲಾಧಿಕಾರಿ ಕಚೇರಿ ಒಳಗೆ ಮು[illegible] ಹಾಕಿಸಿದ್ದ. ಆ ಸಂದರ್ಭದಲ್ಲಿ ಕಚೇರಿಯ ಎಷ್ಟ[illegible] ಸಿಬ್ಬಂದಿ ಭಯದಿಂದ ಓಡಿದ್ದು ಉಂಟು. ಅಲ್ಲದೇ [illegible] ಚೇಂಬರ್‌ಗೆ ಬೀಗ ಹಾಕಲು ಪ್ರಯತ್ನಿಸಿದಾಗಲೂ ಎಸ್ಪಿ ಏನೂ ಮಾಡಿರಲಿಲ್ಲ, ಒಂದೇ ಒಂದು [illegible] ಎತ್ತಲು ಸಹ ಪೇದೆಗಳಿಗೆ ಹೇಳಲಿಲ್ಲ. ಘಟನೆ ನ[illegible] ಅರ್ಧ ಗಂಟೆಯಲ್ಲಿಯೇ ಕಂತೆ-ಕಂತೆ ನೋಟನೊಂ[illegible] ಅಭಯ ಪಾಟೀಲ ಎಸ್ಪಿ ಆಫೀಸಿನಲ್ಲಿ ಪ್ರತ್ಯಕ್ಷನಾಗಿ[illegible]

ಇದೇರೀತಿ ವಡಗಾವಿ ಹಾಗೂ ಪೀರನವಾಡಿ[illegible] ಮಹಿಳೆಯರನ್ನು ಕರೆತಂದು ಟಿಳಕವಾಡಿಯ ಗೋ[illegible] ಮನ್ನ ಲೂಟ ಮಾಡಿದಾಗಲೂ ಕೂಡ ಈ [illegible] ತುಟಿಪಿಟಕ್ ಅನ್ನಲಿಲ್ಲ.

ಸುರೇಶ ಅಂಗಡಿಗೂ ಕಿವಿಗೊಡದ ಅಭಯ


ಅಭಯ ಪಾಟೀಲ ಯಾವ ರೀತಿಯ ರೌಡಿ ಎಂ[illegible] ಈತ ರಾಜಕಾರಣದಲ್ಲಿರುವುಕ್ಕಿಂತ ಬೆಳಗಾವಿಯಲ್ಲಿ ಖ[illegible] ಬದ್ದಿರುವ ಸುಪಾರಿ ಕಿಲ್ಲರ್ ಪ್ರವೀಣ ಶಿಂತ್ರೆ ಸ್ಥಾನವ[illegible] ತುಂಬುತ್ತಾನೋ ಎಂಬ ಅನುಮಾನ ಬರುತ್ತದೆ. "ನಾ[illegible] ಆರ್‌ಎಸ್‌ಎಸ್ ಸಂಘ ನಿಷ್ಠೆಯಿರುವವನು" ಎನ[illegible] ಈತ, ತನ್ನದೇ ಪಕ್ಷದ ಸಂಸದ ಸುರೇಶ ಅಂ[illegible] ಅವರ ಮಾತಿಗೂ ಕಿವಿಗೊಡುವುದಿಲ್ಲ.

ಬಂದ್ ಸಂದರ್ಭದಲ್ಲಿ ಸಂಸದ ಅಂಗಡಿ "ರಾಜ್ಯ[illegible] ನಮ್ಮದೇ ಸರ್ಕಾರವಿದೆ. ಹೆಚ್ಚು ದಾಂಧಲೆ ಮಾಡಬೇ[illegible] ಏನಾದರೂ ಹೆಚ್ಚುಕಮ್ಮಿ ಆದರೆ ಅದನ್ನೆಲ್ಲ ಯ[illegible] ಯೂರಪ್ಪ ಹೊರಬೇಕಾಗುತ್ತದೆ" ಎಂದು ಕಿವಿಮಾ[illegible] ಹೇಳಿದ್ದರು. ಆದರೆ ಬೀದಿ ಜಗಳದಲ್ಲಿ ನಿಸ್ಸೀಮನಾಗಿ[illegible] ಅಭಯ ಪಾಟೀಲ "ನಮಗೆ ನಿನ್ನ ಭಾಷಣ ಬೇಕಾ[illegible] ಏನಾದರೂ ಕೃತಿ ಆಗಬೇಕು" ಎಂದು ಎದುರು[illegible] ನೀಡಿ ಕ್ಲಬ್ ರಸ್ತೆಗೆ ತೆರಳಿ ಈ ಕೃತ್ಯ ಮಾಡಿದ್ದಾನೆ[illegible]

ಒಟ್ಟಿನಲ್ಲಿ ಓರ್ವ ಜನಪ್ರತಿನಿಧಿಯಾದ ಅಭ[illegible] ಪಾಟೀಲ ತನ್ನ ಗೂಂಡಾವರ್ತನೆಯಿಂದ ಜನರಲ್ಲಿ ಭ[illegible] ಹುಟ್ಟಿಸುತ್ತಿದ್ದಾನೆ. ಇಂತಹ ಒಬ್ಬ ಗೂಂಡಾನನ್ನು [illegible] ವಿಧಾನಸೌಧ ಹತ್ತಿಸಿದ ತಪ್ಪಿಗಾಗಿ ಇಲ್ಲಿನ [illegible] ಪರಿತಪಿಸುತ್ತಿರುವುದಂತೂ ಸತ್ಯ. ಎಲ್ಲಾ ಇಲಾಖೆಗಳ[illegible] ತನಗೆ ಸೇರಬೇಕಾದ ಕಮೀಷನ್ನಿಗಾಗಿ ಈತ ದಾಂ[illegible] ಮಾಡುತ್ತಲೇ ಇದ್ದಾನೆ. ಇಷ್ಟು ದಿನ ಸುಮ್ಮನೆ ಕುಳಿ[illegible] ನೌಕರರು ಈಗ ಅಭಯ ಪಾಟೀಲ ವಿರುದ್ಧ ಬೀದಿ[illegible] ದಿದ್ದಾರೆ.

■ ವರದಿಗಾ[illegible]

ಖನಗಾವಿ ದಕ್ಷ ಅಧಿಕಾರಿ



ಕೆಂಪ್ರಿ ಬುದ್ಧಿಯ ರಾಜಕಾರಣಿಗಳ ಮುಂದೆ ಇಂದು ದಕ್ಷ ಅಧಿಕಾರಿಗಳ ಆಟ ನಡೆಯದಂತಾಗಿದೆ. ಅದಕ್ಕೆ ಉತ್ತಮ ನಿದರ್ಶನ ಓರ್ವ ಶಾಸಕನಿಂದ ಹಲ್ಲೆಗೊಳಗಾದ ಎಸ್.ಎಸ್. ಖನಗಾವಿ.

ಈಗ ಸದ್ಯ ನೀರಾವರಿ ನಿಗಮದ ಉತ್ತರ ವಲಯದ ಮುಖ್ಯ ಅಭಿಯಂತರರಾಗಿರುವ ಖನಗಾವಿ ಅವರು, ಈ ಹಿಂದೆ ಎಷ್ಟೋ ಕಡೇ ದಕ್ಷತೆಯಿಂದ ಕಾರ್ಯನಿರ್ವಹಿಸಿದ್ದಾರೆ. ಇವರು ಹಿಂದೆ ಯಾವುದೋ ಇಲಾಖೆಯಲ್ಲಿದ್ದಾಗ ಲೋಕಲ್ ಪತ್ರಿಕೆ ವರದಿಗಾರನೊಬ್ಬ ತನಗೆ ಹಣ ಕೊಡುವಂತೆ ಖನಗಾವಿಯವರನ್ನು ಪೀಡಿಸಿದ್ದ. ಅದಕ್ಕೆ ಜಗ್ಗದ ಅವರು ನಯಾಪೈಸೆಯನ್ನು ಕೊಟ್ಟಿರಲಿಲ್ಲ. ಆಗ ಆತ ತನ್ನ ಪತ್ರಿಕೆಯಲ್ಲಿ ಇವರ ಬ[illegible] ಬಾಯಿಗೆ ಬಂದದ್ದನ್ನು ಬರೆದು ತಾನೇ ಪತ್ರಿಕೆಯ ಪ್ರತಿಯನ್ನು ಖನಗಾವಿಗೆ ಕೊಡಲು ಬಂದಾಗಲೂ ಇವರ[illegible] ಆತನೊಂದಿಗೆ ಜಗಳಕ್ಕಿಳಿದಿರಲಿಲ್ಲ. ಬದಲಾಗಿ ಆತನಿಗೆ ಕಾಫಿ ಕೊಟ್ಟು, ತಮ್ಮ ಬಗ್ಗೆ ಬರೆದಿದ್ದ ವರದಿಯನ್ನ[illegible] ವರದಿಗಾರನ ಮುಂದೆಯೇ ಸಮಗ್ರವಾಗಿ ಓದಿ "ಚನ್ನಾಗಿ ಬರೆದಿದ್ದೀರಾ, ನೀವು ಮೊದಲೇ ಹಣ ಕೇಳಿದಾ[illegible] ನಾನು ಕೊಡಲಿಲ್ಲ, ಆದರೀಗ ಕೊಡುತ್ತೇನೆ ತೆಗೆದುಕೊಳ್ಳಿ. ನನಗೆ ಇನ್ನೂ ಚೆನ್ನಾಗಿ ಬಯ್ಯು ಇನ್ನೊಂದು ವರ[illegible] ಬರೆಯಿರಿ. ಆದರೆ, ಈಗಿನಂತೆ ಬ್ಲ್ಯಾಕ್ ಅಂಡ್ ವೈಟ್‌ನಲ್ಲಿ ಬೇಡ ಅದನ್ನು ಕಲರ್‌ನಲ್ಲಿ ಮುದ್ರಿಸಿ" ಎಂದಾಗ [illegible] ವರದಿಗಾರ ಕಕ್ಕಾಬಿಕ್ಕಿಯಾಗಿದ್ದ. ಇದು ಎಸ್.ಎಸ್. ಖನಗಾವಿ ಅವರ ದೊಡ್ಡತನ.

ಮಗ ಅರಮನೆಗೆ ಹೆತ್ತವರು ಬೀದಿಗೆ

▶▶▶

ಅದನ್ನೂ ನಿಲ್ಲಿಸಿದ್ದ, ಕನಿಷ್ಠ ತನ್ನ ಹುಟ್ಟಿದ ಹಬ್ಬಕ್ಕಾದರೂ ಗಣೇಶ್ ಆಡಕಮಾರನಹಳ್ಳಿಗೆ ಬರುತ್ತಾನೆಂಬ ನಿರೀಕ್ಷೆಯಿತ್ತು, ಗಣೇಶ್ ಅದನ್ನೂ ಹುಸಿಗೊಳಿಸಿದ್ದ.

ಬಹುಶಃ ತನ್ನ ತಂದೆ ಓರ್ವ ಗೂರ್ಖಾ ಎಂಬುದು ಎಲ್ಲಿ ಬಯಲಾಗುತ್ತೋ ಎಂಬ ಅಳುಕಿನಲ್ಲಿ ಗಣೇಶ್ ಈ ರೀತಿ ಮಾಡುತ್ತಿರಬಹುದೆ?

ಹಾಗಿದ್ದರೆ ಗಣೇಶ್ ತನ್ನ ತಂದೆ ತಾಯಂದಿರಿಗೆ ಕನಿಷ್ಠ ಫೋನ್ ಆದರೂ ಮಾಡುತ್ತಿದ್ದ, ತಮ್ಮನ್ನನ್ನು ತನ್ನ ಮನೆಯಿಂದ ಹೊರದಬ್ಬುತ್ತಿರಲಿಲ್ಲ, ಯಾವ ತಂದೆತಾಯಿಗೆಂದು ಆಡಕಮಾರನಹಳ್ಳಿಯಲ್ಲಿ ಮೂರಂತಸ್ತಿನ ಮನೆ ಕಟ್ಟುತ್ತಿದ್ದನೋ ವಿಶಾಲವಾದ ಮನೆ ಕಟ್ಟುವುದನ್ನೇ ನಿಲ್ಲಿಸಿ ಅಲ್ಲಿದ್ದ ಕೆಲಸಗಾರರನ್ನು ಓಡಿಸುತ್ತಿರಲಿಲ್ಲ.

ಇದು ದುರ್ಬುದ್ಧಿಯಲ್ಲದೇ ಮತ್ತೇನಲ್ಲ. ಹೆತ್ತು ಹೊತ್ತು ಬೆಳೆಸಿದ ತಂದೆತಾಯಿ ಮಾಡಿದ ತಪ್ಪಾದರೂ ಏನು? ಅಷ್ಟಕ್ಕೂ ಗಣೇಶ್ ಓದಿ ಬೆಳೆಯಲು ನೆರವಾಗಿದ್ದು ತಮ್ಮ ಮಹೇಶ್. ಆತ ಹಗಲಿರುಳೂ ದುಡಿದು ಮನೆಯ ಖರ್ಚು ನಿಭಾಯಿಸದೇ ಹೋಗಿದ್ದರೆ ಗಣೇಶ್ ಇವತ್ತು ಎಲ್ಲಿರುತ್ತಿದ್ದ? ಅಣ್ಣ ಗೋಲ್ಡನ್ ಸ್ಟಾರ್ ಆದ ಮೇಲೂ ತಮ್ಮ ಮಹೇಶ್ ನಯಾಪೈಸೆಗೆ ಕೈಚಾಚಿಲ್ಲ. ಇವತ್ತಿಗೂ ಎಂಟಿಆರ್ ತಿಂಡಿಗಳನ್ನು ಮಾರಿಕೊಂಡೇ ಹೊಟ್ಟೆ ಹೊರೆಯುವ ತಮ್ಮ, ಅಣ್ಣನನ್ನು ನಂಬಿ ಬಿಬಿಎಂ ಓದಲು ಹೋಗಿ ಈಗ ಬೀದಿಗೆ ಬಿದ್ದ ಇನ್ನೊಬ್ಬ ತಮ್ಮ, ಅಣ್ಣನ ಪ್ರತಿಷ್ಠೆಗೆ ಬಿದ್ದು ಇದ್ದ ಗಾರ್ಮೆಂಟ್ ಕೆಲಸವನ್ನು ತೊರೆದು ಅಂತರ ಪಿಶಾಚಿಗಳಂತಾದ ತಂಗಿಯರು, ಕಣ್ಣೀರಿಡುವ ಹೆತ್ತ ತಾಯಿ; ಹೀಗೆ ಗಣೇಶ್ ಕುಟುಂಬದ ಪ್ರತಿಯೊಬ್ಬರೂ ಆತನ ಖ್ಯಾತಿಯ ಬಲಿಪಶುಗಳೆ.

ಈ ಪೈಕಿ ತಂಗಿಯರಾದ ಗೀತಾ ಮತ್ತು ರಾಧರ ಪಾಡು ಹೇಳತೀರದು. ಮನೆಯಿಂದ ಹೊರಬಿದ್ದರೆ ಸಾಕು ಜನ ಗಣೇಶ್‌ನ ತಂಗಿಯರೆಂದು ಬೆರಗಾಗುತ್ತಾರೆ. ಕೆಲಸಕ್ಕೆ ಹೋಗುವಂತಿಲ್ಲ; ಇದ್ದು ಅನುಭವಿಸುವಂತಿಲ್ಲ. ಅವರಿಬ್ಬರನ್ನೂ ತಾನೇ ನಿಂತು ಮದುವೆ ಮಾಡುತ್ತೇನೆಂದ ಗಣೇಶ್‌ನಿಗೆ ಇಲ್ಲಿಗೆ ವಾರದ ಹಿಂದಷ್ಟೇ ತಂದೆ ಕೃಷ್ಣ ಫೋನ್ ಮಾಡಿ ರೇಗಿದ್ದಕ್ಕೆ 'ನಾನು ಕರೆದರೆ ಮುಖ್ಯಮಂ[illegible] ಯಡಿಯೂರಪ್ಪನೇ ಓಡಿ ಬರ್ತಾನೆ, ಸಿಎಂಗೆ ಹೇ[illegible] ನಿನ್ನನ್ನು ಲಾಕಪ್ಪಿಗೆ ಹಾಕಿಸೋದು ಎಷ್ಟು ಹೊತ್ತು' ಎಂದು ಗಣೇಶ್ ಧಮಕಿ ಕೊಟ್ಟನಂತೆ.

ಓಕೆ; ಕಾಮಿಡಿ ಗಣೇಶ್ ಹೇಳಿದ ಮಾತ[illegible] ಮುಖ್ಯಮಂತ್ರಿ ಯಡಿಯೂರಪ್ಪ ಓಡಿ ಬರುತ್ತಾರೆ ಎಂ[illegible] ಇಟ್ಟುಕೊಳ್ಳೋಣ. ಹಾಗಂಥ ಗಣೇಶ್ ಮಾತನ್ನು ನಂ[illegible] ಅವರಪ್ಪನನ್ನು ಲಾಕಪ್ಪಿಗೆ ಹಾಕಲು ಸಾಧ್ಯವಾ? ಬು[illegible] ಹೇಳಿದ ತಪ್ಪಿಗೆ ಯಾರಾದರೂ ಅಪ್ಪನನ್ನು ಲಾಕ[illegible] ಹಾಕಿಸುತ್ತಾರಾ?


ಊರಿಗೆ ಅರಸನಾದರೂ ತಾಯಿಗೆ ಮಗನೇ ಎಂ[illegible] ನಾಣ್ನುಡಿಯನ್ನು ಕೀರ್ತಿಯ ಪಿತ್ಥ ನೆತ್ತಿಗೇರಿಸಿಕೊಂ[illegible] ಗಣೇಶ್‌ಗೆ ನೆನಪಿಸುವವರ್ಯಾರು?

ಸರಕಾರದ ಯೋಜನೆಗಳನ್ನು ಜನಪ್ರತಿನಿಧಿಗಳೆಂಬ [illegible] ಹಾಗೂ ಅವರ ಹಿಂಬಾಲಕರೆಂಬ ಗಡವಗಳು [illegible]ಗ ಮುಗುಚಿ ಮುಂದಾದೋಚುತ್ತಾರೆ ಎಂಬುದಕ್ಕೆ [illegible] ಹಲವಾರು ನಿದರ್ಶನಗಳು ದೊರಕುತ್ತವೆ. [illegible] ಹೈದ್ರಾಬಾದ ಕರ್ನಾಟಕದ ಊರುಗಳಲ್ಲಿ ಮಾತ್ರವಲ್ಲ [illegible]ರುಗಳಲ್ಲಿ ಮಾತ್ರವಲ್ಲ, ಪ್ರತಿ ಗಲ್ಲಿ ಗಲ್ಲಿಗಳಲ್ಲೂ [illegible] ಹಲವಾರು ಉದಾಹರಣೆಗಳನ್ನು ನೋಡಬಹುದು. [illegible]ಗರಣಗಳನ್ನು ನೋಡಲು ನೀವೇನು ವಿಶೇಷ ರೀತಿಯ [illegible]ಯಿಂದೇನೂ ಹೋಗಬೇಕಾಗಿಲ್ಲ. ಸುಖಾಸುಮ್ಮನೆ [illegible]ಯುತ್ತ ಹೊರಹೊರಟರೆ ಸಾಕು ಇವು ತಂತಾನೆ ಕಣ್ಣಿಗೆ [illegible]ಳುತ್ತವೆ. ಅವುಗಳೆಲ್ಲ ತಮ್ಮ ಕರಾಳಕತೆಯನ್ನು [illegible]ತೊಡಗುತ್ತವೆ.

ಕಳೆದ ವಾರ ಅನಾಯಾಸವಾಗಿ ಗುಲಬರ್ಗಾ ಪಟ್ಟಣದ [illegible]ಲವಾರು ವಾರ್ಡುಗಳನ್ನು ಸುತ್ತಬೇಕಾದ ಪ್ರಸಂಗವೊಂದು [illegible]ದಾಯಿತು. ಯಾವ ವಾರ್ಡಿಗೆ ಹೋಗಿ ನಿಂತರೂ [illegible]ಬರ್ಗಿ ನಗರಪಾಲಿಕೆ ಸದಸ್ಯರು ಹಾಡುಹಗಲೆ ದರೋಡೆ ಕಡೆಯಾದರೆ, "ಎತ್ತು ಏರಿಗೆ ಕೋಣ ನೀರಿಗೆ" ಎಂಬಂತಹ ತುಘಲಕ್ ನಿರ್ಧಾರಗಳು ಇನ್ನೊಂದು ಕಡೆ ಕಣ್ಣಿಗೆ ರಾಚತೊಡಗಿದವು.

ಉದಾಹರಣೆಗೆ ಗುಲ್ಬರ್ಗಾದ 'ಕರ್ನಾಟಕ ಸಂಗೀತ ಸಮಿತಿ' ಕೋರಿಕೆಯಂತೆ ಕಮ್ಯೂನಿಟಿ ಹಾಲ್‌ನ ಕಟ್ಟಡಕ್ಕಾಗಿ ನಾಲ್ಕು ಲಕ್ಷ ರೂಪಾಯಿಗಳು ಬಿಡುಗಡೆಯಾಗಿದೆ. ತಮಾಷೆ ಎಂಥದೆಂದರೆ ಇಲ್ಲಿ ಕಟ್ಟಡದ ಕಾಮಗಾರಿಯೆ ಇನ್ನೂ ಪೂರ್ಣಗೊಂಡಿಲ್ಲ. ಈ ಬಗ್ಗೆ ಲೋಕೋಪಯೋಗಿ ಇಲಾಖೆಯ ಕಡತಗಳು ಮಾತ್ರ ಈಗಾಗಲೆ ಕಟ್ಟಡ ಕಾರ್ಯವೆಲ್ಲ ಪೂರ್ಣಗೊಂಡು ''ಛತ್ತು ಹಾಕುವುದೊಂದೆ ಬಾಕಿ ಇದೆ'' ಎಂದು ಹೇಳುತ್ತಾರೆ. ಆದರೆ ಜಿಲ್ಲಾಧಿಕಾರಿಗಳ ಕಚೇರಿಯ ಕಡತ ಮಾತ್ರ ''ಕಾಮಗಾರಿ ಚಾಲ್ತಿಯಲ್ಲಿ ಹಾಗೂ ಪ್ರಗತಿಯಲ್ಲಿದೆ'' ಎಂದು ಹೇಳುತ್ತದೆ.

ಗುಲಬರ್ಗಾದ ನಲವತ್ತಮೂರನೆ ವಾರ್ಡ್ ಅಂದರೆ ಗೊಲ್ಲರಗಲ್ಲಿಯಲ್ಲಿ ಹೊರಟರಂತೂ ಕೋಳಿ, ಹಂದಿ, ನಾಯಿಗಳೆ ನಿಮ್ಮನ್ನು ಎದುರುಗೊಳ್ಳುತ್ತವೆ. ಇಂಥ ಕೊಳಚೆ ವಾರ್ಡನಲ್ಲೂ ಗ್ರಂಥಾಲಯಕ್ಕೊಂದು ಕಟ್ಟಡ! ಇದಕ್ಕಾಗಿಯೆ 2.50 ಲಕ್ಷ ರೂಪಾಯಿ ಈಗಾಗಲೆ ಬಿಡುಗಡೆಯಾಗಿದೆ. ಈ ಹಣವನ್ನು ಸಮರ್ಥ ರೀತಿಯಲ್ಲಿ ನುಂಗಿಹಾಕಿದ ಕೀರ್ತಿ ಮಾತ್ರ ಇಲ್ಲಿನ ನಗರಪಾಲಿಕೆ ಸದಸ್ಯಳಾಗಿರುವ ಬಸಲಿಂಗಮ್ಮನಿಗೆ ಸಲ್ಲಬೇಕು. ಪಾಪ ಇದನ್ನು ಈಕೆ ಯಾವ ನಾಚಿಕೆಯೂ ಇಲ್ಲದೆ ನುಂಗಿಕುಂತಿದ್ದಾಳೆ.



ಕೋಟನೂರ ಡಿ.ಗ್ರಾಮದಲ್ಲಿಯ ಗ್ರಂಥಾಲಯದ ಕಟ್ಟಡಕ್ಕಾಗಿ 2 ಲಕ್ಷ, ಗುಲಬರ್ಗಾ ವಿಶ್ವವಿದ್ಯಾಲಯದ ಆವರಣದಲ್ಲಿ ಗ್ರಂಥಾಲಯ ಕಟ್ಟಡಕ್ಕಾಗಿಯೆ 3 ಲಕ್ಷ, ವಿಜಯನಗರದ ಕಮ್ಯುನಿಟಿ ಹಾಲ್‌ಗೆ ಮೂರು ಲಕ್ಷ, ಕೇಂದ್ರ ಬಸ್ ನಿಲ್ದಾಣದ ಹಿಂದೆ ಡಾ.ಅಂಬೇಡ್ಕರ್ ಕಮ್ಯೂನಿಟಿ ಹಾಲ್ ಕಟ್ಟಲು 2 ಲಕ್ಷ, ಮಾಣಿಕೇಶ್ವರಿ ನಗರದಲ್ಲಿ ಕಮ್ಯುನಿಟಿ ಹಾಲ್ ಕಟ್ಟಡಕ್ಕೆ 2 ಲಕ್ಷ, ಯೋಗೇಶ್ವರ ದೇವಾಲಯದ ಸಮೀಪ ಗ್ರಂಥಾಲಯ ಕಟ್ಟಡಕ್ಕಾಗಿ 3 ಲಕ್ಷ, ಇನ್ನೂ ಬಬಲಾದ ಮಠದ ಹತ್ತಿರದ ಗ್ರಂಥಾಲಯ ಕಟ್ಟಡಕ್ಕೆ 3 ಲಕ್ಷ ರೂಪಾಯಿಗಳು... ಹೀಗೆ ಜಿಲ್ಲಾಧಿಕಾರಿಗಳ ಕಚೇರಿಯಿಂದ ಹಣವೇನೋ ಲಕ್ಷಗಟ್ಟಲೆ ಬಿಡುಗಡೆಯಾಗಿದೆ.

ಗೊಲ್ಲರಗಲ್ಲಿಯಲ್ಲಿರುವ ಮೈಲಾರಲಿಂಗೇಶ್ವರ ದೇವಸ್ಥಾನದ ಮೈಲಾರಲಿಂಗೇಶ್ವರನೆ ನಾಚಿ ನಿರಾಗುವಂತೆ ಗ್ರಂಥಾಲಯ ಹಾಗೂ ಕಮ್ಯೂನಿಟಿ ಹಾಲ್‌ಗಳ ಕೆಲಸ ಭರದಿಂದ ನಡೆದಿದೆ!? ಗ್ರಂಥಾಲಯ ಕಟ್ಟಡಕ್ಕೆ 2 ಲಕ್ಷ, ಹಾಗೂ ಕಮ್ಯೂನಿಟಿ ಹಾಲ್‌ಗೆ 4 ಲಕ್ಷದಂತೆ ಈಗಾಗಲೆ ಬಿಡುಗಡೆಗೊಂಡಿದೆ. ಆದರೆ ಕೆಲಸ ಮಾತ್ರ ಕಡತಗಳಲ್ಲಿ ಪ್ರಗತಿ ಕಂಡಷ್ಟು ವಾಸ್ತವದಲ್ಲಿ ಕಂಡಿಲ್ಲ. ವಾರ್ಡ್ ನಂ 28 ಶ್ರೀ ಬಸವೇಶ್ವರ ನಗರದಲ್ಲಿ ಹೊಕ್ಕು ನೋಡಿದರೂ ಇದೇ ಹಣೆಬರಹ ಎದ್ದು ಕಾಣುತ್ತದೆ. ಸದರಿ ವಾರ್ಡನಲ್ಲಿ ಗ್ರಂಥಾಲಯ ಕಟ್ಟಡ ನಿರ್ಮಿಸಲು ಜಿಲ್ಲಾಧಿಕಾರಿಗಳು ಒಟ್ಟು 7.60 ಲಕ್ಷರೂಪಾಯಿಗಳನ್ನು ಕಂತು ಕಂತಿನಲ್ಲಿ ಬಿಡುಗಡೆ ಮಾಡಿದ್ದಾರೆ. ಬಹುಶಃ ಈ ಕಂತುಕಂತಿನ ಹಣವನ್ನು ಕಳ್ಳ - ಮಳ್ಳರೆಲ್ಲ ಸೇರಿ ತಮ್ಮ ಅಂಡಿನ ಕೆಳಗೆ ಇಟ್ಟುಕೊಂಡಿದ್ದಾರೆನಿಸುತ್ತದೆ. ಏಕೆಂದರೆ ಇಲ್ಲಿ ದುರ್ಬೀನು ಹಾಕಿ ಹುಡುಕಿದರೂ ಅರ್ಧ-ಮರ್ಧ ಕಟ್ಟಡಗಳಿರಲಿ, ಇದಕ್ಕೆ ಗೊತ್ತುಪಡಿಸಲಾದ ನಿವೇಶನವೂ ಪತ್ತೆ ಆಗುವುದೆ ಇಲ್ಲ.

ಹೀಗೆ ಇಡೀ ಗುಲಬರ್ಗಾ ನಗರದಲ್ಲಿ ತಲೆ ಎತ್ತಬೇಕಾಗಿದ್ದ ಕಮ್ಯೂನಿಟಿ ಹಾಲ್ ಹಾಗೂ ಗ್ರಂಥಾಲಯ ಕಟ್ಟಡಗಳನ್ನು ಲೋಕೋಪಯೋಗಿ ಇಲಾಖೆಯ ಭ್ರಷ್ಟ ಇಂಜನಿಯರುಗಳು, ಜಿಲ್ಲಾಧಿಕಾರಿಗಳ ಕಚೇರಿಯ ನೌಕರರು, ಬಿಳಿ ಬಟ್ಟೆ ತೊಟ್ಟು ಸಾಮಾಜಿಕ ಸೇವೆಯ ಸೋಗು ಹಾಕುವ ಪುಢಾರಿಗಳು ಮುಂತಾದವರು ಯಾವ ನಾಚಿಕೆಯೂ ಇಲ್ಲದೆ ತಿಂದು ಢರ್ ಎಂದು ಢೇಗಿ ಬಿಟ್ಟಿದ್ದಾರೆ. ''ಹಾಲಿಲ್ಲ ಬಟ್ಟಲಿಲ್ಲ ಗುಟಕ್ ಅಂದರು'' ಅಂತ ಹೇಳುತ್ತಾರಲ್ಲ ಇದಕ್ಕೆ ಇರಬೇಕೇನೋ!

■ ವರದಿಗಾರ

ಗುಲಬರ್ಗಾ: ಗ್ರಂಥಾಲಯ ಕಟ್ಟಡಗಳ ಅಮೇಧ್ಯ ತಿಂದ ಹಂದಿಗಳು

[illegible]ದಿ ಕಾಮಗಾರಿಗಳ ಹೆಸರಿನ ಮೇಲೆ ಖೊಟ್ಟಿಬಿಲ್ ಎತ್ತಿ [illegible]ದು ತೇಗಿದ್ದು ಕಂಡುಬಂತು. ನಗರದ ಯಾವ ಮೂಲೆಗೆ [illegible]ಗಿ ನಿಂತರೂ ದುರ್ವಾಸನಾರಹಿತವಾದ ಒಂದೇ ಒಂದು [illegible]ರ್ಡು ಸಿಕ್ಕದೆ ಇರುವುದು ಮಹಾನಗರಪಾಲಿಕೆ [illegible]ಸ್ಯರುಗಳ ಲಂಚಬಡಕತನಕ್ಕೆ ಸಾಕ್ಷಿ ಎಂಬಂತೆ ಕಾಣುತ್ತಿತ್ತು. [illegible]ರುವ ಗಟಾರ, ಸಿಮೆಂಟ್ ರಸ್ತೆ ಹೆಸರಿನ ಕೊರಕಲು [illegible], ಲೈಟುಗಳೆ ಇಲ್ಲದ ಕಂಬಗಳೆಲ್ಲ ಮೂಕಸಾಕ್ಷಿಯಾಗಿ [illegible]ನ್ನು ದಮನೀಯ ಕತೆ ಹೇಳುತ್ತಿದ್ದವು.

ಆಶ್ಚರ್ಯವೆನ್ನುವಂತೆ ನಗರದ ಬಹುತೇಕ ಕಡೆ ಅರ್ಧ-[illegible]ರ್ಧ ಕಾಮಗಾರಿಯಾದ ಕೆಲವು ಕಟ್ಟಡಗಳೂ [illegible]ತೊಡಗಿದವು. ನನ್ನ ಕುತೂಹಲ ಇವುಗಳ ಕಡೆ [illegible]ಯಿತು. ಕಳೆದ ವರ್ಷ ಕರ್ನಾಟಕ ಸರಕಾರದಿಂದ ಶಾಸಕರ [illegible]ದಾನದಲ್ಲಿ ನಗರದ ಹಲವೆಡೆ ಗ್ರಂಥಾಲಯ ಹಾಗೂ [illegible]ನಿಟಿ ಹಾಲ್‌ಗಳಿಗಾಗಿ ಕೋಟ್ಯಂತರ ಹಣವನ್ನು [illegible]ಜೂರಿ ಮಾಡಿಸಿಕೊಂಡದ್ದು ನೆನಪಾಯಿತು. ಪ್ರತಿ [illegible]ರ್ಡುಗಳಲ್ಲಿ ಗ್ರಂಥಾಲಯ ತೆರೆಯಲ್ಪಟ್ಟರೆ ಅಲ್ಲಿ [illegible]ಶಿಕೆಯನ್ನು ಹೊಡೆದೋಡಿಸಿದಂತಾಗುತ್ತದೆ ಎಂಬ [illegible]ಭಾಗದ ಬುದ್ಧಿಜೀವಿಗಳು ಹೋರಾಟಕ್ಕೆ ಇಳಿದದ್ದೂ [illegible]ಪಾಯಿತು. ತಕ್ಷಣವೆ ಜಿಲ್ಲಾಧಿಕಾರಿಗಳ ಕಚೇರಿಯನ್ನು [illegible] ಲೋಕೋಪಯೋಗಿ ಇಲಾಖೆಯ ಕಡತಗಳನ್ನು ಕಲೆ [illegible]

ಹೊರಗೆ ಬಸಪ್ಪ ಒಳಗೆ ವಿಷಪ್ಪ

ಬರಿದು ಪತ್ರ

ಕಾಂಗ್ರೆಸ್‌ನ ಬುದ್ಧಿಗೇಡಿತನ, ಬಿಎಸ್‌ಪಿಯ ಮನೆಹಾಳತನ ಹಾಗೂ ಜೆಡಿಎಸ್‌ನ ಮೂರ್ಖತನಗಳ ಲಾಭಪಡೆದು ಬಿಜೆಪಿ ಇದೀಗ ಅಧಿಕಾರವನ್ನು ಗಿಟ್ಟಿಸಿಕೊಂಡಿದೆ. ಚುನಾವಣಾ ಪ್ರಚಾರದಲ್ಲಿ ಬಿಜೆಪಿ ತಾನು ಮೋಸಕ್ಕೊಳಗಾದ ಜೆಡಿಎಸ್‌ನ ವಚನಭ್ರಷ್ಟತೆಯ ವಿಷಯವನ್ನೇ ಪ್ರಮುಖವಾಗಿ ಬಿಂಬಿಸಿತ್ತು, ಇದೇ ಕಾರಣಕ್ಕಾಗಿ ಪಕ್ಷದ ಕಾರ್ಯಕರ್ತರು ಹಿಂದೊಮ್ಮೆ ಪ್ರಧಾನಿ ದೇವೇಗೌಡರ ಚಿತ್ರಕ್ಕೆ ಚಪ್ಪಲಿ ಹಾರಹಾಕಿ ಪ್ರತಿಭಟಿಸಿದ ಘಟನೆಗಳೂ ಇದ್ದವು. ಆದರೆ ಸಿಎಂ ಗಾದಿಗೇರಿದ ಮೇಲೆ ಯಡಿಯೂರಪ್ಪನವರು ಇದನ್ನೆಲ್ಲ ಮರೆತವರಂತೆ "ನಾವು ದ್ವೇಷದ ರಾಜಕಾರಣ ಮಾಡುವುದಿಲ್ಲ" ಎಂದು ಸಾರಿದ್ದರು. ಇದು ಎಷ್ಟರಮಟ್ಟಿಗೆ ಸತ್ಯವೋ ತಿಳಿಯದಾದರೂ ಪಕ್ಷದ ರಾಜ್ಯಾಧ್ಯಕ್ಷ ಸದಾನಂದಗೌಡರ ಊರಲ್ಲಿ ಮಾತ್ರ ಇದೀಗ ದ್ವೇಷದ ರಾಜಕಾರಣ ರಾಜಾರೋಷದಿಂದ ನಡೆಯುತ್ತಿರುವುದಂತೂ ಹೌದು. ತಮಾಷೆಯೆಂದರೆ, ಇಂತಹ ರಾಜಕಾರಣ ತನ್ನ ವಿರುದ್ಧ ಪಾರ್ಟಿಯಾಗಿರುವ ಕಾಂಗ್ರೆಸ್ ಯಾ ಜೆಡಿಎಸ್ ವಿರುದ್ಧದ ಬದಲು ತನ್ನ ಪಕ್ಷೀಯರ ವಿರುದ್ಧವೇ ಅಥವಾ ಯಾವ ಪಕ್ಷಕ್ಕೂ ಸಂಬಂಧಿಸದವರ ವಿರುದ್ಧ ನಡೆಯುತ್ತಲಿರುವುದು ಹೇಸಿಗೆ ತರುವ ಸಂಗತಿಯಾಗಿದೆ. ಅದು ಬಂಡಾಯ ಅಭ್ಯರ್ಥಿ ಶಕುಂತಲಾ ಶೆಟ್ಟಿಯ ಬೆಂಬಲಕ್ಕೆ ನಿಂತವರೆಂಬ ಕಾರಣಕ್ಕೆ ಬಿಜೆಪಿಗಾಗಿ ಹಗಲಿರುಳೂ ದುಡಿದಿದ್ದ ಬನಾರಿ ಗೋಪಾಲಕೃಷ್ಣಭಟ್ಟರನ್ನು ಎಪಿಎಂಸಿ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಸಿದ ಸಂಗತಿಯಾಗಿರಬಹುದು ಅಥವಾ ಈ ಮೊದಲು ಸದಾನಂದಗೌಡನ ಮಾತನ್ನು ಕ್ಯಾರೇ ಎನ್ನದ ಜನಾನುರಾಗಿ ಎಸಿ ವಸಂತಕುಮಾರರನ್ನು ಯಾವುದೇ ಸ್ಥಳವನ್ನು ಸೂಚಿಸದೇ ಪುತ್ತೂರಿನಿಂದ ದಿಢೀರ್ ವರ್ಗಾವಣೆ ಮಾಡಿದ ಸಂಗತಿ ಇರಬಹುದು. ಇಂತಹ ಹಲವಾರು ಉದಾಹರಣೆಗಳು ಸಿಗುತ್ತವೆ.

ಯಾವುದೋ ಹಲ್ಲುಪುಡಿಯ ಜಾಹೀರಾತಿನ ರೂಪದರ್ಶಿಯಂತೆ ತೋರುವ ಬಾಜಪದ ರಾಜ್ಯಾಧ್ಯಕ್ಷರು ಹೆಸರಿಗೆ ತಕ್ಕಂತೆ ಸದಾ ಆನಂದದ ಪೋಸ್ ನೀಡುತ್ತಿರುವವರಾದರೂ ತನಗೆ ಈಗ ಸಿಕ್ಕ ಅಧಿಕಾರವನ್ನು ಬೇಕಾಬಿಟ್ಟಿ ದುರುಪಯೋಗಪಡಿಸಿಕೊಂಡು ತನ್ನ ವೈಯಕ್ತಿಕ ದ್ವೇಷ ಸಾಧನೆಗೆ ಹೊರಟಿರುವುದು ಖೇದದ ಸಂಗತಿಯಾಗಿದೆ.

ಪುತ್ತೂರಿಗೆ ಮಂಜೂರಾದ ಮಿನಿವಿಧಾನಸೌಧವನ್ನು ತಾನು ಬಯಸಿದ್ದ ಜಾಗದಲ್ಲಿ ಕಟ್ಟುವುದಕ್ಕೆ ಪೂರಕವಾಗಿ ಸ್ಪಂದಿಸದೇ ಇದ್ದದ್ದು, ರಸ್ತೆ ಅಗಲೀಕರಣ ವಿಷಯದಲ್ಲಿ ತನ್ನ ಚೇಲಾಗಳನ್ನು ಕೂಡಾ ಕ್ಯಾರೇ ಎನ್ನದೇ ಕ್ರಮ ಜರುಗಿಸಿದ್ದು ಇತ್ಯಾದಿಗಳೆಲ್ಲ ಎಸಿ ವಸಂತಕುಮಾರ್ ಮೇಲೆ ಗೌಡರ ಕೋಪ ಏರಲು ಕಾರಣವಾಗಿದ್ದವು. ಒಂದು ಸಂದರ್ಭದಲ್ಲಂತೂ ರೌಡಿಗಳು ಹಾಕುವ ಬೆದರಿಕೆಯಂತೆ ಸಾರ್ವಜನಿಕವಾಗಿ "ನಿಮ್ಮ ಹೆಸರನ್ನು ಡೈರಿಯಲ್ಲಿ ಬರೆದಿಟ್ಟುಕೊಂಡಿದ್ದೇನೆ, ಮುಂದೆ ನೋಡಿಕೊಳ್ಳುವೆ" ಎಂಬಂತೆ ಥ್ರೆಟ್‌ನ್ನೂ ಕೂಡಾ ಗೌಡರು ಹಾಕಿದರು. ಇದೀಗ ಸರ್ಕಾರವೇ ತಮ್ಮದಾಗಿರುವ ಕಾರಣ ಆ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಜನರ ಅಭಿಪ್ರಾಯಕ್ಕೆ ವಿರುದ್ಧವಾಗಿ ಏಕಾಏಕಿ ಎಸಿಯನ್ನು ಯಾವುದೇ ಸ್ಥಳವನ್ನು ತೋರಿಸದೆ ಎತ್ತಂಗಡಿ ಮಾಡಲಾಗಿದೆ. ಚುನಾವಣೆ ನಡೆದು ಬಹುಮತ ದೊರೆತು ಸರ್ಕಾರ ರಚಿಸುವ ಮುನ್ನವೇ ತನ್ನ ಕ್ಷೇತ್ರಕ್ಕೆ ಬಂದಿದ್ದ ಗೌಡರು ಆ ಸಂದರ್ಭದಲ್ಲಿ ಹೇಳಿದ್ದ ಮಾತೆಂದರೆ "ಕಂದಾಯ ಇಲಾಖೆಗೆ ಸರ್ಜರಿ ಮಾಡಬೇಕಿದೆ"ಎಂದು. ನಂತರ ಜಿಲ್ಲಾ ಉಸ್ತವಾರಿ ಸಚಿವ ಪಾಲೇಮಾರ್ ಚಿಕೂನ್ ಗುನ್ಯಾ ವಿಷಯದಲ್ಲಿ ಪುತ್ತೂರಿಗೆ ಬಂದಿದ್ದಾಗ ಎಸಿ ಇಲ್ಲದ್ದನ್ನು ನೋಡಿ "ಅವರನ್ನು ಮನೆಗೆ ಕಳುಹಿಸುತ್ತೇನೆ" ಎಂದು ಗುಡುಗಿದ್ದರು. ಬಳಿಕ ಜಿಲ್ಲಾಧಿಕಾರಿ ತಾನೇ ಪ್ರಕೃತಿ ವಿಕೋಪಕ್ಕೆ ಸಂಬಂಧಿಸಿದ ಕಾರ್ಯಾಗಾರದಲ್ಲಿ ಭಾಗವಹಿಸಲು ಎಸಿಯವರನ್ನು ಬೆಂಗಳೂರಿಗೆ ಕಳುಹಿಸಿದ್ದೇನೆ ಎಂಬ ಸಮಜಾಯಿಷಿಯನ್ನು ಸಚಿವರಿಗೆ ನೀಡಬೇಕಾಗಿ ಬಂತು.

ಒಟ್ಟಾರೆ ತನ್ನ ಮಾತನ್ನ ಧಿಕ್ಕರಿಸಿದ ಎಸಿಯನ್ನು ಜನರ ಪ್ರತಿಭಟನೆಯ ನಡುವೆಯೇ ವರ್ಗಾವಣೆ ಮಾಡಿ ಗೌಡರು ತಮ್ಮ ಸೇಡನ್ನು ತೀರಿಸಿಕೊಂಡರು. ಇನ್ನುಳಿದ ದ್ವೇಷದ ಸೇಡಿನ ರಾಜಕಾರಣಕ್ಕೆ ಬಾಕಿ ಉಳಿದವರೆಂದರೆ ಶಕುಂತಲಾ ಶೆಟ್ಟಿ ಹಾಗೂ ಅರುಣ್‌ಕುಮಾರ್ ಪುತ್ತಿಲ ಎಂದು ಪುತ್ತೂರಿಗರೀಗ ಆಡಿಕೊಳ್ಳುತ್ತಿದ್ದಾರೆ. ಹೊರಗೆ ಬಸಪ್ಪ-ಒಳಗೆ ವಿಷಪ್ಪನಾಗಿ ಡಬ್ಬಲ್ ಆ್ಯಕ್ಟ್ ಮಾಡುತ್ತಿರುವ ಗೌಡರ ದ್ವೇಷದ ರಾಜಕೀಯಕ್ಕೆ ಕಡಿವಾಣ ಹಾಕುವವರ್‍ಯಾರು?

-ಶಶಿ. ಪುತ್ತೂರು

■ ಚಪ್ಪಲಿ ಚಿಕಿತ್ಸೆ: ಅವರಲ್ಲ, ಇವರು


[illegible] ರಿಗೆ ಗೊತ್ತೇ ಆಗು[illegible] ಶಿವಮೂರ್ತಿ ಶರಣರು ಪಾದರಕ್ಷೆಗಳನ್ನು ಕುರಿತು ನೀ[illegible] ಹೇಳಿಕೆಯನ್ನೇ ತೆಗೆದುಕೊಳ್ಳಿ. ಅವರು ಅಂತಹದ್ದೊಂದು ವಿಚಾರ ಮಂಡಿಸಿದ್ದಾರೆ ಎಂದು ಗೊತ್ತಾಗಿದ್ದೇ [illegible] ಕುರಿತು 'ಪ್ರಜಾವಾಣಿ'ಯಲ್ಲಿ ವಾಚಕರ ಪತ್ರಗಳು [illegible] ಗೊಳ್ಳಲಾರಂಭಿಸಿದಾಗ.

ಅಂತಹದ್ದೊಂದು ಪುಟ್ಟ ಪತ್ರವನ್ನು ಆಧರಿಸಿಯೇ ನಮ್ಮ ಎಚ್.ಎಲ್. ಕೇಶವಮೂರ್ತಿಯವರು ಕಳೆದ ವಾರ ತಮ್ಮ 'ಅಣಕ' ಕಾಲಂನಲ್ಲಿ 'ಚಪ್ಪಲಿ ಸೇವೆ' ಎಂಬ ವಿಡಂಬನೆಯನ್ನು ಬರೆದಿದ್ದರು. ಆದರೆ ಅದರಲ್ಲಿ ಪಾದರಕ್ಷೆಯನ್ನು ಕುರಿತ ಹೇಳಿಕೆಯನ್ನು ನೀಡಿದವರು ಸಿರಿಗೆರೆ ಮಠದ ಶಿವಕುಮಾರ ಶರಣರು ಎಂದು ಬರೆದಿದ್ದರು.

ಇಲ್ಲಿ ಸ್ಪಷ್ಟಪಡಿಸಲು ಇಚ್ಛಿಸುವುದೇನೆಂದರೆ ಆ ಹೇಳಿಕೆಯನ್ನು ನೀಡಿದ್ದು ಸಿರಿಗೆರೆ ಸ್ವಾಮಿಗಳಲ್ಲ, ಬದಲಾಗಿ ಚಿತ್ರದುರ್ಗದ ಮುರುಘಾಮಠದ ಶಿವ ಮೂರ್ತಿ ಶರಣರು ಎಂಬುದನ್ನು.



■ ಗೌರಿ ಲಂಕೇಶ್



ಬಾಬಾಬುಡನ್‌ಗಿರಿ ಗುಹೆ ಕುಸಿಯಲು ಯಾರು ಕಾರಣ?

ಚಿಕ್ಕಮಗಳೂರು ಸಮೀಪದ ಬಾಬಾಬುಡನ್‌ಗಿರಿಯ ಚಾರಿತ್ರಿಕ ಗುಹೆ ದಿಢೀರ್ ಎಂದು ಕುಸಿದುಬೀಳುವ ಮೂಲಕ ಮತ್ತೆ ಸುದ್ದಿ ಮಾಡಿದೆ. ಒಂದು ಮಗ್ಗುಲಲ್ಲಿ ಸೂಫಿ ಸಂತರ ಸಮಾಧಿ ಹಾಗೂ ಇನ್ನೊಂದು ಮಗ್ಗುಲಲ್ಲಿ ದತ್ತಾತ್ರೇಯನ ಪಾದುಕೆಗಳಿದ್ದ ಈ ಗುಹೆ ಶತಶತಮಾನಗಳಿಂದ ಧರ್ಮನಿರಪೇಕ್ಷತೆಯನ್ನು ಸಾರುತ್ತಾ ಬಂದಿತ್ತು. ನಮ್ಮ ಸಂವಿಧಾನದಲ್ಲಿ ಸೆಕ್ಯೂಲರ್ ಎಂಬ ಪದವನ್ನು ಆಶಯವನ್ನಾಗಿ ಅಳವಡಿಸುವ ಅದೆಷ್ಟೋ ಶತಮಾನಗಳ ಮೊದಲೇ



ನಾಡಿನ ಜನ ತಮ್ಮ ಆಚರಣೆಯಲ್ಲಿ ಸೆಕ್ಯೂಲರಿಸಂ ಅನ್ನು ಪರಿಪಾಲಿಸಿಕೊಂಡು ಬಂದಿದ್ದರು ಎಂಬುದಕ್ಕೆ ಈ ಸೂಫಿ-ದತ್ತ ಪರಂಪರೆಯ ಗುಹೆ ಸಾಕ್ಷಿಯಾಗಿ ನಿಂತಿತ್ತು. ಅನಾದಿಕಾಲದಿಂದ ಧಾರಾಕಾರವಾಗಿ ಸುರಿಯುವ ಮಳೆ ಮತ್ತು ಬಿರುಗಾಳಿಯ ಹೊಡೆತಕ್ಕೆ ಸಿಕ್ಕಿಯೂ ಭದ್ರವಾಗಿ ನಿಂತಿದ್ದ ಈ ಗುಹೆ ಮೊನ್ನೆ ಕುಸಿದು ಬಿದ್ದಿದೆ. ಗುಹೆ ಕುಸಿಯಲು ಏನು ಕಾರಣ ಎಂಬ ಪ್ರಶ್ನೆಗೆ ಉತ್ತರವಾಗಿ 'ಧಾರಾಕಾರವಾಗಿ ಸುರಿದ ಮಳೆ' ಎಂದು ಚಿಕ್ಕಮಗಳೂರು ಜಿಲ್ಲಾಡಳಿತ ಹೇಳಿ ತನ್ನ ಹುಳುಕನ್ನೂ, ಬೇಜವಾಬ್ದಾರಿತನವನ್ನೂ ಪ್ರದರ್ಶಿಸಿದೆ. ಆದರೆ ಅಸಲಿಯತ್ತೇ ಬೇರೆಯಿದೆ.

ಹಿಂದೂ-ಮುಸ್ಲಿಮ್ ಸಮುದಾಯಗಳ ಭಾವೈಕ್ಯತೆಯ ಕೇಂದ್ರವಾಗಿದ್ದ ಬಾಬಾಬುಡನ್‌ಗಿರಿಗೆ ಸಂಘಪರಿವಾರದ ಶನಿಗಳು ಗಂಟುಬಿದ್ದಂದಿನಿಂದಲೇ ಗುಹೆಯು ಕಳೆಗುಂದಲಾರಂಭಿಸಿತ್ತು. ಅಯೋಧ್ಯೆಯ ಬಾಬರಿ ಮಸೀದಿಯನ್ನು ಕೆಡವಿ ಉತ್ತರ ಭಾರತದಲ್ಲಿ ತನ್ನ ಭದ್ರನೆಲೆಯನ್ನು ಸ್ಥಾಪಿಸಿಕೊಂಡ ಮಾದರಿಯಲ್ಲಿಯೇ ದಕ್ಷಿಣ ಭಾರತದಲ್ಲಿ ಸಂಘಪರಿವಾರಿಗಳು ಬಾಬಾಬುಡನ್‌ಗಿರಿಯನ್ನು ಆಯ್ಕೆ ಮಾಡಿಕೊಂಡರು. "ಇದು ಹಿಂದೂಗಳ ದತ್ತ ಪೀಠ, ಅದನ್ನು ಮುಸ್ಲಿಮರು ಅತಿಕ್ರಮಣ ಮಾಡಿದ್ದಾರೆ, ಅದನ್ನು ನಾವೀಗ ವಿಮೋಚನೆ ಮಾಡಬೇಕು" ಎಂದು ಬಹುಸಂಖ್ಯಾತ ಹಿಂದೂಗಳ ಭಾವನೆಗಳನ್ನು ಕೆರಳಿಸಿ ಅದನ್ನೊಂದು ವಿವಾದಗ್ರಸ್ತ ಪ್ರದೇಶವನ್ನಾಗಿ



ಮಾಡಿಬಿಟ್ಟರು. ಹಿಂದೂ ಧರ್ಮದ ವೈದಿಕ ಕಂದಾಚಾರಗಳನ್ನು ಧಿಕ್ಕರಿಸಿದ್ದ ದತ್ತಾತ್ರೇಯನ ಹೆಸರಿನಲ್ಲಿಯೇ ಮತ್ತದೇ ಕಂದಾಚಾರಗಳನ್ನು ಶುರುಮಾಡಲು ಮುಂದಾದರು. 'ಬಾಬಾಬುಡನ್‌ಗಿರಿ ವಿಮೋಚನೆ'ಯನ್ನೇ ಬಂಡವಾಳ ಮಾಡಿಕೊಂಡು ಸಿಟಿ ರವಿ, ಸುನೀಲ್ ಕುಮಾರ್, ಡಿ.ಎನ್.ಜೀವರಾಜ್‌ರಂಥ ಕೆಲವು ಬಿಜೆಪಿ ರಾಜಕಾರಣಿಗಳು ತಮ್ಮ ರಾಜಕೀಯ ಬೇಳೆ ಬೇಯಿಸಿಕೊಂಡರು.

ಮಣ್ಣಿನಿಂದ ಆವೃತವಾದ ಈ ಬಾಬಾಬುಡನ್‌ಗಿರಿ ಗುಹೆಯಲ್ಲಿ ಈಗ್ಗೆ ಎರಡೂವರೆ ದಶಕಗಳ ಹಿಂದೆಯೇ ಚಿಕ್ಕದೊಂದು ಬಿರುಕು ಕಾಣಿಸಿಕೊಂಡಿತ್ತು. 2004ರ ವೇಳೆಗೆ ಅದು ಇನ್ನಷ್ಟು ವಿಸ್ತಾರಗೊಂಡು ಅಪಾಯದ ಮುನ್ಸೂಚನೆ ನೀಡಿತ್ತು. ಜಿಲ್ಲಾಡಳಿತ ಆಗಲೇ ಎಚ್ಚೆತ್ತುಕೊಂಡು ಅದನ್ನು ರಿಪೇರಿ ಮಾಡಬಹುದಿತ್ತು. ಆದರೆ ಅದನ್ನದು ಮಾಡಲಿಲ್ಲ.

2004ರಲ್ಲಿ ಜಿಲ್ಲಾಧಿಕಾರಿಯಾಗಿದ್ದ ರಾಜೇಂದ್ರ ಸಿಂಗ್ ಕಠಾರಿಯ ಗುಹೆಯ ಅಭಿವೃದ್ಧಿಗೆ ಒಂದಿಷ್ಟು ಶ್ರಮಿಸಿದ್ದನ್ನು ಬಿಟ್ಟರೆ ಬೇರಾವ ಜಿಲ್ಲಾಧಿಕಾರಿಯೂ ಅದರ ಬಗ್ಗೆ ಕಾಳಜಿ ವಹಿಸಲಿಲ್ಲ. ಗುಹೆಯು ಶಿಥಿಲಾವಸ್ಥೆಯನ್ನು ತಲುಪುತ್ತಿರುವ ಮಾಹಿತಿ ಪಡೆದ ಕಠಾರಿಯ ಮೂವತ್ತೆರಡು ಲಕ್ಷ ರೂ.ಗಳ ದುರಸ್ತಿ ಯೋಜನೆಯೊಂದನ್ನು ರೂಪಿಸಿದ್ದರು. ಅಷ್ಟು ಹೊತ್ತಿಗಾಗಲೇ ಸಂಘಪರಿವಾರದ ಚೆಡ್ಡಿಗಳು ಇದನ್ನು ದಕ್ಷಿಣ ಭಾರತದ ಅಯೋಧ್ಯ ಮಾಡುವ ಭರದಲ್ಲಿ ಅದನ್ನೊಂದು 'ವಿವಾದಗ್ರಸ್ತ ಪ್ರದೇಶ'ವನ್ನಾಗಿ ಮಾಡಿಬಿಟ್ಟಿದ್ದರು. ನ್ಯಾಯಾಲಯ ಕೂಡ ಬಾಬಾಬುಡನ್‌ಗಿರಿಯಲ್ಲಿ ಯಥಾಸ್ಥಿತಿ ಕಾಪಾಡಿಕೊಂಡು ಬರುವಂತೆ ಆದೇಶಿಸಿದ್ದರಿಂದ ಯೋಜನೆ ಹಾಗೇ ಉಳಿಯಿತು. ಪರಿಣಾಮವಾಗಿ ಗುಹೆಯ ಯಥಾಸ್ಥಿತಿಯೂ ಉಳಿಯಲಿಲ್ಲ.

ನ್ಯಾಯಾಲಯದ ಆದೇಶ, ಜನರ ಸೌಹಾರ್ದ ಭಾವನೆ, ಬಾಬಾಬುಡನ್‌ಗಿರಿಯ ಸಂಪ್ರದಾಯ – ಯಾವುದಕ್ಕೂ ಧಕ್ಕೆ ಬಾರದಂತೆ ಮೊದಲಿನ ಸ್ಥಿತಿಯಲ್ಲಿಯೇ ಸರ್ಕಾರ ಗುಹೆಯನ್ನು ಪುನರ್‌ನಿರ್ಮಾಣ ಮಾಡುತ್ತದೆಯೋ ಅಥವಾ ಚೆಡ್ಡಿಗಳ ಒತ್ತಡಕ್ಕೆ ಮಣಿದು ಅದನ್ನೊಂದು ಹಿಂದೂತ್ವದ ಕೇಂದ್ರವನ್ನಾಗಿ ಪರಿವರ್ತಿಸುತ್ತದೆಯೋ ಎಂಬುದನ್ನು ಕಾದುನೋಡಬೇಕಿದೆ.

■ ಅಜೀಜ್ ಕಿರಗುಂದ

ಹುಬ್ಬಳ್ಳಿ-ಧಾರವಾಡ ಮೇಯರ್ ರಾಧಕ್ಕನ ಫಾರಿನ್ ಟೂರ್!



ರಾಧಾ ಬಾಯಿ

ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಮೇಯರ್ ರಾಧಕ್ಕ ತಮ್ಮ ಪಟಾಲಂ ಕಟ್ಟಿಕೊಂಡು ಸುಮಾರು 25 ಲಕ್ಷ ರೂ.ಗಳನ್ನು ಖರ್ಚು ಮಾಡಿ ಥೈಲ್ಯಾಂಡ್, ನ್ಯೂಜಿಲ್ಯಾಂಡ್ ಹಾಗೂ ಆಸ್ಟ್ರೇಲಿಯಕ್ಕೆ ಟೂರ್ ಹೊರಟಿದ್ದಾರೆ. ಈ ಟೂರ್‌ಗಾಗಿಯೇ ಅವರು ಹೊಸದಾಗಿ ರೇಶ್ಮೆ ಸೀರೆಗಳನ್ನೂ ಖರೀದಿಸಿದ್ದಾರೆ. ಹುಬ್ಬಳ್ಳಿ-ಧಾರವಾಡ ಅವಳಿ ನಗರಗಳ ಜನತೆ ಕುಡಿಯುವ ನೀರು ಸಿಗದೇ ಪರದಾಡುತ್ತಿರುವಾಗ ಮೇಯರ್ ಮೇಡಮ್ ಫಾರಿನ್‌ನಲ್ಲಿ ಮಜಾ ಮಾಡಲು ಜನರ ದುಡ್ಡನ್ನು ದುರ್ಬಳಕೆ ಮಾಡಲು ಹೊರಟಿರುವುದು ಜನರ ಆಕ್ರೋಶಕ್ಕೆ ಕಾರಣವಾಗಿದೆ.

ಈ ವಿದೇಶಿ ಪ್ರವಾಸದಲ್ಲಿ ಮೇಯರ್ ಮೇಡಮ್ ಜೊತೆ ಇನ್ನೂ ನಾಲ್ಕೈದು ಜನ ಇದ್ದಾರೆ. ಮೊನ್ನೆ ಜೂನ್ 27ರಂದು ಈ ಪ್ರವಾಸ ಕುರಿತಂತೆ ನಿರ್ಣಯ ಮಾಡುವಾಗ ಯಾವ ಸದಸ್ಯನೂ – ಕನಿಷ್ಠ ವಿರೋಧ ಪಕ್ಷದ ಸದಸ್ಯರೂ – ತುಟಿಪಿಟಿಕ್ ಎನ್ನದೇ ಎಲ್ಲರೂ ಕೈ ಎತ್ತಿ ತಮ್ಮ ಬೆಂಬಲ ಸೂಚಿಸಿದ್ದಾರೆ! ವಿರೋಧ ಪಕ್ಷಗಳ ಇಂತಹ 'ಭಾಯಿ ಬೆಹನ್' ವರ್ತನೆಗೆ ಕಾರಣ ಇಲ್ಲದಿಲ್ಲ. ಈ ಪ್ರವಾಸಕ್ಕೆ ಅವರನ್ನೂ ಕರೆದುಕೊಂಡು ಹೋಗುವ ತಂತ್ರಗಾರಿಕೆಯನ್ನು ರಾಧಕ್ಕ ಮಾಡಿದ್ದಾರೆ. ಯಾರ್‍ಯಾರು ಪ್ರವಾಸ ಹೋಗಬೇಕು ಎಂಬ ಪಟ್ಟಿ ಇನ್ನೂ ಸಿದ್ಧವಾಗಿಲ್ಲವಾದರೂ ಪ್ರತಿಪಕ್ಷದ ನಾಯಕ ಪ್ರಫುಲ್‌ಚಂದ್ರ ರಾಯನಗೌಡ್ರ, ಸಭಾನಾಯಕ ಅಶೋಕ ಜಾಧವ್, ಡಾ. ಪಾಂಡುಗಂಗ ಪಾಟೀಲ್, ಜೆಡಿಎಸ್‌ನ ರಾಜಣ್ಣ ಕೊರವಿಯವರು ಸಂಭವನೀಯ ವ್ಯಕ್ತಿಗಳ ಪಟ್ಟಿಯಲ್ಲಿದ್ದಾರೆ. ಈ ಕಾರಣಕ್ಕಾಗಿಯೇ ಅವರೆಲ್ಲರೂ ತಮ್ಮ ಬೆಂಬಲ ವ್ಯಕ್ತಪಡಿಸಿದ್ದಾರೆ.





ರಾಜಣ್ಣ ಕೊರವಿ



ಪ್ರ. ರಾಯನಗೌಡ

ಯಾಕೆ ಈ ಫಾರಿನ್ ಟೂರ್? ಎಂದು ನೀವು ರಾಧಕ್ಕನನ್ನು ಪ್ರಶ್ನಿಸಬೇಕು. "ನಾನು ಫಾರಿನ್ ಟೂರ್ ಹೋಗ್ತಿರೋದು ಮಜಾ ಮಾಡಾಕಲ್ಲ, ಅವಳಿ ನಗರಗಳ ಸರ್ವಾಂಗೀಣ ಪ್ರಗತಿಗೆ ವಿದೇಶಿ ಬಂಡವಾಳ, ಅನುದಾನ ಆಕರ್ಷಿಸೋದಕ್ಕೆ" ಅಂತ ಡಂಗೂರ ಹೊಡೀತಾಳೆ. ಈ ಹಿಂದೆ ಈಕೆಯೇ ವಿರೋಧ ಪಕ್ಷದಲ್ಲಿದ್ದಾಗ ಮೇಯರ್ ಅವರ ವಿದೇಶಿ ಪ್ರವಾಸದ ವಿರುದ್ಧ ಗಂಟಲು ಹರಿಯುವಂತೆ ಕೂಗಾಡಿದ್ದಳು; ವಿದೇ[ಶಿ] ಪ್ರವಾಸದಿಂದ ಅವಳಿನಗರಗಳ ಅಭಿವೃದ್ಧಿ ಆಗೋ[...] ಅಂತ ಅರಚಾಡಿದ್ದಳು. ಈಗ ಅದನ್ನೆಲ್ಲಾ ಗಾಳಿಗೆ ತೂ[...] ಥೈಲ್ಯಾಂಡ್, ನ್ಯೂಜಿಲ್ಯಾಂಡ್ ಮತ್ತು ಆಸ್ಟ್ರೇಲಿಯಾಗಳ[...] ಆಗಸ್ಟ್ 2ರಿಂದ 13ರವರೆಗೆ ನಡೆಯಲಿರುವ ತರಬೇ[ತಿ] ಕಾರ್ಯಾಗಾರದಲ್ಲಿ ಭಾಗವಹಿಸಲು ಹೊಸ ರೇಶ[್ಮೆ] ಸೀರೆಯುಟ್ಟು ರೆಡಿಯಾಗಿ ನಿಂತಿದ್ದಾಳೆ. ಈ ಕಾರ್ಯಾ[...]ಗಾರದ ಪ್ರವೇಶ ಶುಲ್ಕವೇ ಒಬ್ಬೊಬ್ಬರಿಗೆ ಎರಡೂವ[ರೆ] ಲಕ್ಷ ಆಗುತ್ತದೆ. ಅದಲ್ಲದೇ ಒಟ್ಟು ಖರ್ಚು ಇಪ್ಪತ್ತೈದು ಲಕ್ಷ ದಾಟುತ್ತದೆ. ಅವಳಿ ನಗರಗಳ ಜನ ತೆರಿಗ[ೆ] ರೂಪದಲ್ಲಿ ಕಟ್ಟಿದ ಹಣವನ್ನು ಈಕೆ ಈ ರೀತಿ ಮಜ[ಾ] ಮಾಡುವುದಕ್ಕೆ ಉಪಯೋಗಿಸುತ್ತಿದ್ದಾಳೆ ಎಂದರೆ ಜನ ಇವಳಿಗೆ ಯಾವುದರಿಂದ ಹೊಡೆಯಬೇಕು?

ರಾಧಕ್ಕ ಹೇಳುವಂತೆ ಅಲ್ಲಿಗೆ ಹೋದಾಕ್ಷಣ ಅನುದಾನ, ವಿದೇಶಿ ಬಂಡವಾಳವೇನೂ ಹುಬ್ಬಳ್ಳಿ-ಧಾರವಾಡ ನಗರಗಳಿಗೆ ಹರಿದುಬರುವುದಿಲ್ಲ. ವಿಶ್ವಬ್ಯಾಂಕ್ ಅಥವಾ ಏಶಿಯನ್ ಡೆವಲಪ್‌ಮೆಂಟ್ ಬ್ಯಾಂಕ್ (ಎಡಿಬಿ) ಮೂಲಕವೇ ರಾಜ್ಯಕ್ಕೆ ಅನುದಾನ, ಸಾಲ ಹರಿದು ಬರಬೇಕು. ಅದಕ್ಕೆ ರಾಜ[್ಯ] ಸರ್ಕಾರ ಗ್ಯಾರಂಟಿ ನೀಡಬೇಕಾಗುತ್ತದೆ. ಹುಬ್ಬಳ್ಳಿ-ಧಾರವಾಡದಿಂದ ಮೇಯರ್ ಮ್ಯಾಡಮ್ ಬಂದಿದ್ದಾರೆ ಅಂತ ಇವಳಿಗೆ ಕರೆದು ದುಡ್ಡು ಕೊಡೋರು ಅಲ್ಲಿ ಯಾರೂ ಇರುವುದಿಲ್ಲ.

ಇಲ್ಲಿ ಮಾಡೋದಕ್ಕೆ ಬೇಕಾದಷ್ಟು ಕೆಲಸ[...]ಗಳಿದ್ದರೂ ಅವನ್ನೆಲ್ಲಾ ಬಿಟ್ಟು ನಗರಗಳ ಅಭಿವೃದ್ಧಿಯ ಹೆಸರಿನಲ್ಲಿ ಟೂರ್ ಮಾಡೋದು ಎಷ್ಟು ಸರಿ? ಮೂರು ದಿನಕ್ಕೊಮ್ಮೆ ಕುಡಿಯುವ ನೀರು ಕೊಡ್ತೀನಿ ಎಂದು ಹೇಳಿದ ರಾಧಕ್ಕ ಈಗ ಜನರಿಗೆ ನೀರು ಕುಡಿಸುತ್ತಿದ್ದಾಳೆ. ಮಲಪ್ರಭಾ ಮೂರನೇ ಹಂತದ ಯೋಜನೆಗೆ 136 ಕೋಟಿ ರೂ.ಗಳನ್ನು ಯಡ್ಡಿಯಿಂದ ಇಸ್ಕೊಂಡು ಬರ್‍ತೀನಿ ಅಂತ ಹೇಳಿ ಈಗ ಡೈರೆಕ್ಟಾಗಿ ಫಾರಿನ್‌ಗೆ ಹಾರಲು ರೆಡಿಯಾಗಿದ್ದಾಳೆ. ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಚರಿತ್ರೆಯಲ್ಲಿ 1992-93ರಲ್ಲಿ ಐ.ಎಂ.ಜವಳಿ ಎಂಬುವವರು ಜಪಾನ್‌ಗೆ ಹೋಗಿದ್ದು ಬಿಟ್ಟರೆ ಇನ್ಯಾರೂ ವಿದೇಶಿ ಪ್ರವಾಸ ಮಾಡಿಲ್ಲ. ವಿದೇಶಿ ಪ್ರವಾಸದ ಪ್ರಸ್ತಾವ ಬಂದಾಗ ಅದನ್ನು ವಿರೋಧಿಸಿದ, ತಡೆಯಾಜ್ಞೆ ತಂದ ಪ್ರಕರಣಗಳೂ ನಡೆದಿವೆ. ಹಾಗಾಗಿ ಈ ಬಾರಿ ಅಂತಹ ವಿರೋಧಗಳು ವ್ಯಕ್ತವಾಗದಂತೆ ಬಹು ಚಾಣಾಕ್ಷತನದಿಂದ ವಿರೋಧ ಪಕ್ಷದವರನ್ನೂ ತನ್ನ ಜೊತೆ ಸೇರಿಸಿಕೊಂಡಿದ್ದಾಳೆ ರಾಧಕ್ಕ. ಅವಳಿ ನಗರಗಳ ಜನತೆ ಮಾತ್ರ ಮೇಯರ್ ರಾಧಕ್ಕನ ದಂಡಯಾತ್ರೆಯನ್ನು ಸುತಾರಾಂ ಒಪ್ಪುತ್ತಿಲ್ಲ.

■ ಹುಬ್ಬಳ್ಳಿಯಾಂವ

ಕಾರ್ಮಿಕರು ಸೌಲಭ್ಯ ಕೇಳಿದರೆ ಕೆಲಸದಿಂದ ಔಟ್

ಬಣ್ಣದ ಬದುಕಿನ ಸಿನಿಮಾದೊಂದಿಗೆ ತಳುಕು ಹಾಕಿಕೊಂಡಿರುವ ಚಿತ್ರಮಂದಿರಗಳ ಬಡ ಕಾರ್ಮಿಕರ ಗೋಳಿಗೆ ಕೊನೆ ಇಲ್ಲದಂತಾಗಿದೆ. ದಿನಕ್ಕೆ ಎಂಟು ತಾಸು ದುಡಿಮೆ, ರಜೆ ಇಲ್ಲದೆ ಸತತ ಶ್ರಮ, ಮಧ್ಯರಾತ್ರಿಯವರೆಗೂ ಕೆಲಸ. ಆದರೆ ಸೌಲಭ್ಯ ಮಾತ್ರ ಶೂನ್ಯ! ಇಷ್ಟಾದರೂ ತಿಂಗಳ ಸಂಬಳ 1,000ದಿಂದ 1,500. ಇದು ಬಹುತೇಕ ಚಲನಚಿತ್ರ ಮಂದಿರಗಳಲ್ಲಿ ದುಡಿಯುವ ಕೆಲಸಗಾರರ ಬವಣೆ.



ಅಕಸ್ಮಾತ್ ಇವರೇನಾದರೂ ಸ್ವಲ್ಪ ಸೌಲಭ್ಯಗಳನ್ನು ನೀಡಿ ಎಂದು ಕೇಳಿದರೆ ಅವರಿಗೆ ಸಿಗುವುದೇನು ಗೊತ್ತೇ? ಕೆಲಸದಿಂದಲೇ ಗೇಟ್ ಪಾಸ್!

ಮೊನ್ನೆ ಕೊಪ್ಪಳದ ಲಕ್ಷ್ಮಿ ಮತ್ತು ಶಿವ ಟಾಕೀಸ್‌ಗಳ ಮಾಲೀಕರಿಂದ ಕೆಲ ಸೌಲಭ್ಯಗಳನ್ನು ಕೇಳಿದ್ದ 'ತಪ್ಪಿಗೆ' ಒಂಬತ್ತು ಜನ ಕೆಲಸಗಾರರು ಬೀದಿಪಾಲಾಗಿದ್ದಾರೆ.

ಅರ್ಧ ಕೋಟಿಗಿಂತಲೂ ಹೆಚ್ಚು ಬಂಡವಾಳ ಹಾಕಿ ಟಾಕೀಸ್ ಕಟ್ಟಿಸಿರುವ ಈ ಜನ, ಇತ್ತ ಸರ್ಕಾರಕ್ಕೂ ಟ್ಯಾಕ್ಸ್ ಮುಂಡಾಮೋಚುವ, ಅತ್ತ ಪ್ರೇಕ್ಷಕರೂ ಕೊಟ್ಟ ಹಣಕ್ಕೆ ಮೋಸ ಮಾಡುವವರು. ಇಂತಹ ಟಾಕೀಸ್‌ಗಳ ಕೆಲ ಮಾಲೀಕರ ವರ್ತನೆಯಿಂದಾಗಿ ಇವತ್ತು ಬಹಳಷ್ಟು ಜನ ಟಾಕೀಸ್‌ಗಳತ್ತ ತಲೆ ಹಾಕಿಯೂ ಮಲಗುತ್ತಿಲ್ಲ.

ಕೊಪ್ಪಳ ಜೆಡಿಎಸ್ ಮುಖಂಡ ಮಹಾಂತಯ್ಯನ ಮಠರ ಹಠಮಾರಿತನದಿಂದ ಒಂಬತ್ತು ಕೆಲಸಗಾರರು ಕೆಲಸ ಕಳೆದುಕೊಂಡು ಈಗ ಕಾರ್ಮಿಕ ಇಲಾಖೆಗೆ ದೂರು ನೀಡಿದ್ದಾರೆ. ಆದರೆ ಆ ಇಲಾಖೆ ಮಾತ್ರ ಮಾಲೀಕರ ಪರವೆ ನಿಂತಿದೆ. ಸರ್ಕಾರದ ಎಲ್ಲಾ ನಿಯಮಗಳನ್ನು ಸಾರಾಸಗಟಾಗಿ ಕಾಲಕಸ ಮಾಡಿಕೊಂಡು ಕನಿಷ್ಠ ವೇತನವನ್ನೂ ನೀಡದೇ ಕಾರ್ಮಿಕರನ್ನು ತಮ್ಮ ಜೀತದಾಳುಗಳಂತೆ ದುಡಿಸಿಕೊಳ್ಳುತ್ತಿದೆ.

ಮುಂಜಾನೆ ಮಾರ್ನಿಂಗ್ ಷೋನಿಂದ ಪ್ರಾರಂಭವಾಗುವ ಕೆಲಸ ಮಧ್ಯರಾತ್ರಿ (12.30ಕ್ಕೆ) ಕೊನೆಗೊಳ್ಳುವ ಸೆಕೆಂಡ್ ಷೋವರೆಗೂ ಸಾಗುತ್ತದೆ. ಈ ಮಧ್ಯೆ ಊಟಕ್ಕೂ ಸಮಯವಿಲ್ಲ, ನೀರು ಕುಡಿಯುವುದಕ್ಕೂ ಬಿಡುವಿಲ್ಲದಂತಹ ಪರಿಸ್ಥಿತಿ. ಇಂತಹ ಪರಿಸ್ಥಿತಿಯಲ್ಲೂ ಕಳೆದ ಹತ್ತಾರು ವರ್ಷಗಳಿಂದ ದುಡಿಯುತ್ತಲೇ ಬಂದಿರುವ ಸೋಮಶೇಖರಯ್ಯ, ಈಶಯ್ಯ, ಪರಮೇಶಿ, ಉಮೇಶಯ್ಯ, ಮೆಹಬೂಬ, ಶರಣಪ್ಪ, ಪರಶುರಾಂ ಎಂಬುವವರು ಕನಿಷ್ಠ ವೇತನ, ಬೋನಸ್ಸು, ಭವಿಷ್ಯ ನಿಧಿ ಮುಂತಾದ ಸವಲತ್ತುಗಳನ್ನು ಕೊನೆಗೂ

ಸರ್ಕಾರಕ್ಕೆ ಪ್ರೇಕ್ಷಕರಿಗೆ ವಂಚನೆ!

ಕೊಪ್ಪಳದಲ್ಲಿ ಕನಕಾಚಲ ಚಿತ್ರಮಂದಿರ ಪೂರ್ತಿ ಅಲ್ಲದಿದ್ದರೂ ತಕ್ಕಮಟ್ಟಿಗೆ ಉತ್ತಮ. ಅದನ್ನು ಬಿಟ್ಟ[ರೆ] ಉಳಿದ ಐದು ಟಾಕೀಸುಗಳೂ ಅವ್ಯವಸ್ಥೆಯ ಆಗರಗಳಾಗಿವೆ. ತಮ್ಮಿಷ್ಟಕ್ಕೆ ತಾವೇ ಬೇಕಾಬಿಟ್ಟಿ ಟಿಕೆಟ್ ದ[ರ] ಏರಿಸುವ ಮಾಲೀಕರು, ಟಿಕೇಟ್ ಹರಿದ ಬಗ್ಗೆ ಡೈಲಿ ಕಲೆಕ್ಷನ್ ರಿಪೋರ್ಟ್‌ಅನ್ನೂ ಸರಿಯಾಗಿ ಸರ್ಕಾರ[ಕ್ಕೆ] ಕೊಡುವುದಿಲ್ಲ.

ಟಾಕೀಸ್‌ಗಳಿಗೆ ಬರುವ ಪ್ರೇಕ್ಷಕರಿಗೆ ಸರಿಯಾಗಿ ಮೂತ್ರಾಲಯಗಳಿಲ್ಲ. ಮಹಿಳಾ ಪ್ರೇಕ್ಷಕರಂತೂ ಇವ[ರ] ದೃಷ್ಟಿಯಲ್ಲಿ ಮನುಷ್ಯರೇ ಅಲ್ಲ. ಸರಿಯಾಗಿ ಕಾರ್ಬನ್ ಉಪಯೋಗಿಸದೇ ಇರುವುದರಿಂದ ಎಂತಹದ್ದೇ ಬ[...] ಬಣ್ಣದ ಚಿತ್ರ ಇವುಗಳಲ್ಲಿ ಪ್ರದರ್ಶನಗೊಂಡರೂ ಅವರು ಮಸುಕಾಗಿ ಕಾಣಿಸುವುದು ಇಲ್ಲಿ ಕಾಮನ್. ಟಾಕೀಸ್‌ಗಳ ತುಂಬ ಕಬ್ಬಿಣದ ಚೇರುಗಳೇ. ಆಕಸ್ಮಿಕ ವಿದ್ಯುತ್ ಅಪಾಯವಾಗಿ ಚೇರುಗಳಿಗೆ ಕರೆಂಟ್ ತಗುಲಿದರೆ ಟಾಕೀಸ್‌ನಲ್ಲಿ ಕುಳಿತವರು ಕುಳಿತಲ್ಲೇ ಹರಹರಾ...

ಅಗ್ನಿ ಆಕಸ್ಮಿಕ ಸಂಭವಿಸಿದರೆ ಬೆಂಕಿ ಆರಿಸಲು ಮರಳು ಕೂಡಾ ಸಾಕಷ್ಟು ಇರುವುದಿಲ್ಲ. ಇನ[್ನು] ಅಗ್ನಿಶಾಮಕದಳ ವಾಹನ ಬರಲು ಸ್ಟಾರ್ ಟಾಕೀಸ್‌ಗೆ ದಾರಿಯೇ ಇಲ್ಲ.

ಇದನ್ನೆಲ್ಲ ವಿಚಾರಿಸಬೇಕಾದ ಅಧಿಕಾರಿಗಳು ಥಮ್ಸ್ ಅಪ್ ಕುಡಿದು, ಮಾಮೂಲು ತಗೊಂಡು ರೈಟ್ ಅಂದುಬಿಡುತ್ತಾರೆ.



"ಗಂಡ, ಇತ್ತೀಚೆಗೆ ಎರಡನೆ ಬಾರಿ ಶಾಸಕನಾಗಿದ್ದರು. ...ಉ ಭವಿಷ್ಯವಿತ್ತು ದುಡ್ಡಿತ್ತು ಬಂಗ್ಲೆಯಂತಹ ಮನೆ ...ತು ಮಕ್ಕಳಿದ್ದರು. ಅವಳಿಗೆ ಏನು ಕಡಿಮೆ ಆಗಿತ್ತು?"- ...ತ್ತೀಚೆಗೆ ಅಕಾಲಮರಣ ಹೊಂದಿದ ಉಡುಪಿಯ ...ಶಾಸಕರ ಪತ್ನಿಯ ಬಗ್ಗೆ ಇಲ್ಲಿನ 'ಸುಶಿಕ್ಷಿತ' ಜನ (ಅವರಲ್ಲಿ ...ಗಸರೂ ಇದ್ದಾರೆ) ಕೇಳುತ್ತಿರುವ ಪ್ರಶ್ನೆ ಇದು. ಕೆಲವು ...ಗಳ ಹಿಂದೆ, ಇಲ್ಲಿನ ಮೇಲುಜಾತಿಗಳವರ ಮನೆಗಳಲ್ಲಿ ...ಣ್ಣುಮಕ್ಕಳನ್ನು ಮದುವೆ ಮಾಡಿಕೊಡುವ ಮೊದಲು ...ತ್ತವರು ಕೇಳುತ್ತಿದ್ದುದು ಒಂದೇ ಪ್ರಶ್ನೆಯನ್ನು- "ಗಂಡಿನ ...ನೆಯಲ್ಲಿ ಉಣ್ಣಲಿಕ್ಕೆ ತಿನ್ನಲಿಕ್ಕೆ ಇದೆಯಾ?" ಹೊಟ್ಟೆಬಟ್ಟೆ ...ಟ್ಟರ ಹೆಣ್ಣಿಗೆ ಬೇರೆ ನಿರೀಕ್ಷೆಗಳು, ಅಪೇಕ್ಷೆಗಳು, ...ಹತ್ವಾಕಾಂಕ್ಷೆಗಳು ಇಲ್ಲವೆಂದೇ ಜನ ಭಾವಿಸುತ್ತಿದ್ದ ಕಾಲ ...ದು. ಪದ್ಮಪ್ರಿಯಾ ಅವರ ಬಗ್ಗೆ ಈಗ ಕೇಳಲಾಗು...

"ಪದ್ಮಪ್ರಿಯಾಗೆ ಏನು ಕಡಿಮೆ ಆಗಿತ್ತು?"

...ತ್ತಿರುವ ಪ್ರಶ್ನೆ ಅದೇ ಪ್ರಶ್ನೆಯ ಇನ್ನೊಂದು ರೂಪ. ಕರಾವಳಿಯ ...ಉಡುಪಿಯಂತಹ ಊರುಗಳ ಸುಶಿಕ್ಷಿತ ಜನ ಮಾನವೀಯ ...ಸಂವೇದನೆಗಳನ್ನೇ ಕಳೆದುಕೊಂಡು ದಿನೇದಿನೇ ಒರಟರಾಗುತ್ತಿರುವುದಕ್ಕೆ ...ಇದು ಕೇವಲ ಒಂದು ಉದಾಹರಣೆಯಷ್ಟೇ.

"ಪದ್ಮಪ್ರಿಯಾಳಿಗೆ ಏನು ಕಡಿಮೆ ಆಗಿತ್ತು?"- ಇದೇ ಶಬ್ದಗಳಲ್ಲಿ ...ಲ್ಲವಾದರೂ ಹೆಚ್ಚುಕಡಿಮೆ ಇದೇ ಪ್ರಶ್ನೆಯನ್ನು, ಮೊನ್ನೆ ಈ ಪ್ರಕರಣದ ...ಬಗ್ಗೆ ಉದಯ ಟಿವಿಯಲ್ಲಿ ಬಿತ್ತರಿಸಲಾದ ಕ್ರೈಮ್ ಸ್ಟೋರಿಯ ಕಂತಿನಲ್ಲಿ ...ಬಾಲಕೃಷ್ಣ ಕಾಕತ್ಕರ್ ಕೂಡ ಕೇಳಿದ್ದಾರೆ. ಹಾಗೆ ಕೇಳುವ ಮುಖಾಂತರ ...ಹೆಣ್ಣಿನ ಬಗ್ಗೆ ಮತ್ತು 'ಭಾರತೀಯ ನಾರಿ'ಯ ಬಗ್ಗೆ ಮಧ್ಯಮ ವರ್ಗದ ...ಎಲ್ಲ ಮೂರ್ಖ ಪೂರ್ವಗ್ರಹಗಳಿಗೂ ಅಭಿವ್ಯಕ್ತಿ ನೀಡಿದ್ದಾರೆ. ಸೋಗಲಾಡಿ ...ತನ, ನೈತಿಕ ಅಹಮಿಕೆ ಮತ್ತು ಆತ್ಮವಿಶ್ವಾಸಗಳಲ್ಲಿ ಘೋರ್ಗರೆಯುವ ...ಎಂಬು ಕಂಠದ ತನ್ನ ಮಾತುಗಳಿಂದ ಈ ಎಲ್ಲ ಪೂರ್ವಗ್ರಹಗಳನ್ನೂ ...ಇನ್ನಷ್ಟು ಗಟ್ಟಿಗೊಳಿಸಿದ್ದಾರೆ. ಉದಯ ಟಿವಿ ಮಾತ್ರವಲ್ಲ, ಎಲ್ಲ ಮಾಧ್ಯಮ ...ಗಳೂ (ಒಂದೆರಡು ಅಪವಾದಗಳನ್ನು ಹೊರತುಪಡಿಸಿ) ಪದ್ಮಪ್ರಿಯಾ ...ಅವರೇ ಈ ಪ್ರಕರಣದಲ್ಲಿ ಒಂದೋ ಅಪರಾಧಿ ಅಥವಾ ಬಲಿಪಶು ...ಎಂಬಂತೆ ಚಿತ್ರಿಸುತ್ತಿವೆ. ತನ್ನ ಮನೆ ಸಂಸಾರಗಳನ್ನು ಬಿಟ್ಟು ಹೊರನಡೆಯಲು ...ಪದ್ಮಪ್ರಿಯ, ಪೂರ್ಣ ಅರಿವು ಮತ್ತು ಜವಾಬ್ದಾರಿಯಲ್ಲಿ ನಿರ್ಧರಿಸಿರ ...ಬಹುದು ಎಂಬ ಸಾಧ್ಯತೆಯನ್ನೇ ಈ ಮಾಧ್ಯಮಗಳು ಉದ್ದೇಶಪೂರ್ವಕವಾಗಿ ...ಮುಚ್ಚಿಹಾಕುತ್ತಿವೆ.

ಮದುವೆ, ಸಂಸಾರ, ಸಾಮಾಜಿಕ ಸ್ಥಾನಮಾನ, ಸಂಪತ್ತು ಮುಂತಾದವುಗಳನ್ನೆಲ್ಲ ತೊರೆದು ಪದ್ಮಪ್ರಿಯ 'ಸ್ವತಂತ್ರ' ರಾಗಿ ಬದುಕಲು ಬಯಸಿದ್ದರು. ಆದರೆ ಮೇಲೆ ಹೇಳಿದ ಉದಯ ಟಿವಿಯ ಕ್ರೈಮ್ ಸ್ಟೋರಿಯ ಅದೇ ಕಂತಿನಲ್ಲಿ ಉಡುಪಿಯ ಶಾಸಕರು, "ಮೊದ ಮೊದಲು ತನಗೆ ವಶೀಕರಣ ಮುಂತಾದ್ದರಲ್ಲಿ ನಂಬಿಕೆ ಇರಲಿಲ್ಲ; ಆದರೆ ಈಗ ಆ ನಂಬಿಕೆ ಬರುತ್ತಿದೆ. ತನ್ನ ಪತ್ನಿ ಖಂಡಿತ ವಶೀಕರಣಕ್ಕೆ ಒಳಗಾಗಿದ್ದಾಳೆ" ಎಂದು ಹೇಳಿದರು. ಆ ಮಾತುಗಳ ಹಿಂದೆ ಇರುವ ಅವರ ಮಾನಸಿಕ ಒತ್ತಡಗಳನ್ನು ನಾವು ಅರ್ಥ ಮಾಡಿಕೊಳ್ಳ ಬಹುದು. ಆದರೆ ಉದಯ ಟಿವಿಯ ಕಾರ್ಯಕ್ರಮ ನಿರ್ವಾಹಕರು, ತಮ್ಮದು ಮಹಾಸಂಭಾವಿತ ಚಾನೆಲ್ ಎಂಬಂತೆ ಉಳಿದ ಚಾನೆಲ್ಲುಗಳನ್ನು 'ಟ್ಯಾಬ್ಲಾಯಿಡ್ ಚಾನೆಲ್ಲು'ಗಳು ಎಂದು ಕರೆದದ್ದು ಹಾಸ್ಯಾಸ್ಪದವಾಗಿತ್ತು. ಇಷ್ಟಕ್ಕೂ ಈ ಪ್ರಕರಣದ ಬಗ್ಗೆ ಮತ್ತು ಇನ್ನೂ ಹಲವು ವಿಷಯಗಳ ಬಗ್ಗೆ ಇವತ್ತು ಕೇಳಬೇಕಾದ ಪ್ರಶ್ನೆಗಳನ್ನು ಕೇಳುತ್ತಿರುವುದು ಕಾಕತ್ಕರ್‌ರ ಮೂದಲಿಕೆಗೆ ಒಳಗಾಗಿರುವ ಈ ಟ್ಯಾಬ್ಲಾಯಿಡ್ ಪತ್ರಿಕೆಗಳೇ.

ಕನ್ನಡದ ಪ್ರತಿಷ್ಠಿತ ದಿನಪತ್ರಿಕೆಗಳೆಲ್ಲ ಮೊದಲೇ ಬಿಜೆಪಿಯ ತುತ್ತೂರಿಗಳಾಗಿ ಮಾರ್ಪಟ್ಟಿದ್ದವು. ಈಗಂತೂ ಹೊಸ ಸರ್ಕಾರ ದಿನವೊಂದರ ಹಾಗೆ ಕೊಡುತ್ತಿರುವ ಜಾಹೀರಾತಿನ ಸುಲಭ ಸಂಪಾದನೆಯ ಆಮಿಷ ಬೇರೆ. ಈ ಪತ್ರಿಕೆಗಳಿಂದ ನಾವು ವೃತ್ತಿಧರ್ಮವನ್ನಾಗಲೀ, ಮಾನವಂತ ನಡವಳಿಕೆಯನ್ನಾಗಲೀ ಇನ್ನು ಮುಂದೆ ನಿರೀಕ್ಷಿಸಲು ಸಾಧ್ಯವೇ? ಈ ಸತ್ಯ ಕಾಕತ್ಕರ್ ಅವರಿಗೆ ಗೊತ್ತಿಲ್ಲವೆ? ಪದ್ಮಪ್ರಿಯಾ ಅವರು ತಮ್ಮ ಮನೆ ಬಿಟ್ಟು ಹೋದದ್ದು ಟೀವಿ 9 ನ ಪ್ರೇರಣೆಯಿಂದಲೂ ಅಲ್ಲ; 'ಟ್ಯಾಬ್ಲಾಯಡ್ ಪತ್ರಿಕೆ'ಗಳ ಒತ್ತಾಸೆಯಿಂದಲೂ ಅಲ್ಲ. ಈ ಘಟನೆ ಉಡುಪಿಯ ಜನಪ್ರತಿನಿಧಿಯ ಮನೆಯ ಬದಲು ಸಾಮಾನ್ಯ ಗೃಹಸ್ಥನೊಬ್ಬನ ಮನೆಯಲ್ಲಿ ನಡೆದಿದ್ದರೆ, ಯಾವ ಟ್ಯಾಬ್ಲಾಯಡ್ ಪತ್ರಿಕೆಯೂ ಈ ಬಗ್ಗೆ ಇಷ್ಟು ತಲೆ ಕೆಡಿಸಿಕೊಳ್ಳು ತ್ತಿರಲಿಲ್ಲ.



ಪದ್ಮಪ್ರಿಯಾ ಅವರ ಅಕಾಲಮರಣ ಕೊಲೆಯೊ? ಆತ್ಮಹತ್ಯೆಯೋ? ಈ ಬಗ್ಗೆ ಮರಣೋತ್ತರ ವೈದ್ಯಕೀಯ ವರದಿ ಮತ್ತು ದೆಹಲಿ ಪೊಲೀಸರ ತನಿಖಾ ವರದಿಗಳು ಬರುವ ಮೊದಲೇ ಉಡುಪಿಯ ಪೊಲೀಸ್ ವರಿಷ್ಠಾಧಿಕಾರಿಗಳು ಅದೊಂದು ಆತ್ಮಹತ್ಯೆ ಎಂದು ಘೋಷಿಸಿದ್ದರು. [illegible] ಮೇಲೆ ಯಾರ ಒತ್ತಡವಿತ್ತು ಎಂದು [illegible]. ಅದು ಏನೇ ಇರಲಿ. ಪದ್ಮಪ್ರಿಯ ಅವರ ಸಾವು [illegible] ಎಂಬುದಷ್ಟೇ ಪ್ರಶ್ನೆ ಆಗಿದ್ದರೆ ಅದು ಒಂದು ತಾಂತ್ರಿಕ ಪ್ರಶ್ನೆ. [illegible] ಅದನ್ನು ಬಗೆಹರಿಸಬೇಕಾದದ್ದು ಪೊಲೀಸ್ ಇಲಾಖೆ ಮತ್ತು ಕೋರ್ಟ್‌ಗಳು; ಜನರ ವಿಶ್ವಾಸವನ್ನು ಸಂಪೂರ್ಣವಾಗಿ ಕಳೆದುಕೊಂಡಿರುವ ಸಂಸ್ಥೆಗಳು ಅವು. ಅವುಗಳ ಜೊತೆಗೆ ಟೀವಿ ಚಾನೆಲ್ಲುಗಳು ಮತ್ತು ಕನ್ನಡ ಪತ್ರಿಕೆಗಳು ಕೂಡಾ ಘಟನೆಯ ಬಗ್ಗೆ ಪೊಲೀಸ್ FIR ಗಳನ್ನು ವರದಿಯ ಹಾಗೆ ಪ್ರಕಟಿಸತೊಡಗಿದರೆ, ನಮ್ಮ ಭಾಷೆ ನೈತಿಕ ಪ್ರಜ್ಞೆಯನ್ನು ಸಂಪೂರ್ಣವಾಗಿ ಕಳೆದುಕೊಂಡಿದೆ ಎಂದೇ ಅರ್ಥ.

ಇತ್ತೀಚೆಗೆ ಉಡುಪಿಯ ಒಂದು ಸಭೆಯಲ್ಲಿ ಮಾತನಾಡುತ್ತಾ ಗೆಳೆಯ ಪಟ್ಟಾಭಿರಾಮ ಸೋಮಯಾಜಿ, "ರೈತರ ಆತ್ಮಹತ್ಯೆ, ಪದ್ಮಪ್ರಿಯ ಅವರ ಆತ್ಮಹತ್ಯೆ-ಇಂತಹ ಮಾತುಗಳನ್ನು ನಾವು ಹೇಳುವುದರ ಜೊತೆಗೆ ಅದನ್ನು ಅಕ್ಷರಶಃ ನಂಬುವುದೂ ಆದರೆ ನಮ್ಮ ಸಂವೇದನೆ ಸತ್ತುಹೋಗಿದೆ ಎಂದೇ ಅರ್ಥ. ಮಾತನ್ನು ಹಾಗೆ ಬಳಸುವುದು ಅಶ್ಲೀಲ, ಅನೈತಿಕ" ಎಂದರು. ಆತ್ಮಹತ್ಯೆ ಸ್ವಯಂ ನಿರ್ಧಾರದ ಕೃತ್ಯ; ಸಂಪೂರ್ಣ ಸ್ವಾತಂತ್ರ್ಯದಲ್ಲಿ ಎಸಗುವಂತಹದ್ದು. ಪರೀಕ್ಷೆ ಫೇಲಾದ ಹುಡುಗರು ಅಥವಾ ವಿಫಲ ಪ್ರೇಮಿಗಳು ಪ್ರಾಣ ತೆಗೆದುಕೊಳ್ಳುವುದು ಆತ್ಮಹತ್ಯೆ. ನಡುವಯಸ್ಸು ಅಥವಾ ಇಳಿವಯಸ್ಸಿನ ಸಂಸಾರವಂದಿಗ ರೈತರು ವರ್ಷಗಟ್ಟಲೆ ಅಸಹನೀಯ ಆತಂಕವನ್ನು ಅನುಭವಿಸಿ ಹತಾಶರಾಗಿ ಜೀವ ತೆಗೆದುಕೊಳ್ಳುವುದು, ಖಂಡಿತ ಸ್ವಇಚ್ಛೆಯ ಕೃತ್ಯವಲ್ಲ; ಅದು ಕೊಲೆ ಈ ವ್ಯವಸ್ಥೆ, ಈ ಸರ್ಕಾರ ಒಟ್ಟಾಗಿ ನಡೆಸಿದ ಕೊಲೆ. ಅಥವಾ ಆ ಕೃತ್ಯಕ್ಕೆ ನಾವು ಬೇರೊಂದು ಶಬ್ದವನ್ನು ಸೃಷ್ಟಿಸಿಕೊಳ್ಳಬೇಕು. ನಮ್ಮ ಭಾಷೆಯ ಮಿತಿ ನಮ್ಮ ಜಗತ್ತಿನ ಮಿತಿ ಎಂದು ತತ್ವಶಾಸ್ತ್ರಜ್ಞ ವಿಟ್‌ಗೆನ್‌ಸ್ಟೀನ್ ಹೇಳಿದ. ನಮ್ಮ ಭಾಷೆಯ ಮಿತಿ ನಮ್ಮ ನೈತಿಕ ಸಂವೇದನೆಯ ಮಿತಿಯೂ ಹೌದು. ಪದ್ಮಪ್ರಿಯ ಅವರ ಸಾವು ಅವರ ಸ್ವಂತದ ನಿರ್ಧಾರವಲ್ಲ, ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಅವರು ದೆಹಲಿಯವರೆಗೆ ಹೋಗಬೇಕಾಗಿರಲಿಲ್ಲ; ಅಲ್ಲಿ ಉದ್ಯೋಗ ಅರಸಬೇಕಾಗಿರಲಿಲ್ಲ. ರಾಜ್ಯದ ಪೊಲೀಸ್ ಇಲಾಖೆಗೆ ಈ ಸೂಕ್ಷ್ಮಗಳು ಬೇಕಾಗಿಲ್ಲ, ರಾಜ್ಯದ ನೂತನ ಗೃಹಮಂತ್ರಿ ಎಂದೂ ಸೂಕ್ಷ್ಮಜ್ಞತೆಗೆ ಹೆಸರು ಮಾಡಿದವರಲ್ಲ, ನಮ್ಮ ಭಾಷೆ ಕೂಡ ಈ ಸೂಕ್ಷ್ಮತೆಗಳನ್ನು ಕಳೆದುಕೊಂಡು ಒರಟಾದರೆ ಯಾವ ಶಾಸ್ತ್ರೀಯ ಇತ್ಯಾದಿ ಸ್ಥಾನಮಾನವೂ ಇದನ್ನು ಉದ್ಧರಿಸಲಾರದು.

■ ಜಿ. ರಾಜಶೇಖರ

...ಳಿದ್ದಕ್ಕೆ ಅವರೆಲ್ಲರ ಕೆಲಸ ಕಟ್ ಆಗಿದೆ. ಹೇಳಿ ಕೇಳಿ ...ಬಂಚೆಯಿಂದಲೂ ಈ ಟಾಕೀಸ್‌ಗಳಲ್ಲಿ ಪುಸ್ತಕ ...ನಾಕೆ, ಚೀಟಿ, ರಜೆ ಕಾರ್ಡು ಯಾವುದನ್ನೂ ...ರ್ವಹಿಸಿಲ್ಲ.

ಹತ್ತಾರು ವರ್ಷಗಳಿಂದ ಹೀಗೆ ಜೀತದಾಳುಗಳಂತೆ ...ದುಡಿಸಿಕೊಂಡಿದ್ದೂ ಅಲ್ಲದೆ ಈಗ ಅವರನ್ನೆಲ್ಲ ಬೀದಿಗೆ ...ಟ್ಟಿದ್ದನ್ನು ನೋಡಿ ಎಐಟಿಯುಸಿ ಸಂಯೋಜನೆಯಲ್ಲಿ ...ವರೆಲ್ಲ ಕರ್ನಾಟಕ ರಾಜ್ಯ ಚಲನಚಿತ್ರ ಮಂದಿರಗಳ ...ನೌಕರರ ಫೆಡರೇಷನ್ ಎಂಬ ಸಂಘಟನೆಯನ್ನು ...ಕಟ್ಟಿಕೊಂಡಿದ್ದಾರೆ. ಅದನ್ನು ನೋಡಿ ಮಾಲೀಕ ...ಮಹಾಂತಯ್ಯನ ಮಠ "ಈ ಸಂಘ ಬಿಟ್ಟು ಬನ್ನಿ, ...ಕೆಲಸ ಕೊಡುತ್ತೇವೆ" ಅಂತ ಒಡೆದಾಳುವ ನೀತಿ ...ಅನುಸರಿಸುತ್ತಿದ್ದಾರೆ. ಏಕೆಂದರೆ ಇದೇ ಚಲನಚಿತ್ರ ...ಟಾಕೀಸುಗಳ ಮಾಲೀಕರ ಪರ ಬಾಲ ಬಡಿಯಲು ...ಈಗಾಗಲೇ ಒಂದು ನೆಪ ಮಾತ್ರ ಚಿತ್ರಮಂದಿರಗಳ ...ಕಾರ್ಮಿಕರ ಸಂಘ ಒಂದಿದೆ.

ಆದರೆ ಟಾಕೀಸ್ ಕಾರ್ಮಿಕರ ಬವಣೆ ...ನೋಡಿಯೇ ಸಂಘವು ಹತ್ತಾರು ವರ್ಷದ ರಜಾ ...ಬಾಕಿ, ಬೋನಸ್, ಕನಿಷ್ಠ ವೇತನ, ವ್ಯತ್ಯಾಸ ಬಾಕಿ ...ಸೇರಿದಂತೆ ಎಲ್ಲ ಕಾರ್ಮಿಕರಿಗೆ ಒಟ್ಟು 44 ಲಕ್ಷ ...ರೂ. ಪರಿಹಾರ ಕೊಡಿಸುವಂತೆ ಕಾರ್ಮಿಕ ...ಇಲಾಖೆಗೊಂದು ದೊಡ್ಡ ಗೂಟವನ್ನೇ ಇಟ್ಟಿದ್ದಾರೆ.

ಆದರೆ ಕಾರ್ಮಿಕ ಇಲಾಖೆ ಅಧಿಕಾರಿ ...ಬವಿಯಪ್ಪ ಮತ್ತು ನಿರೀಕ್ಷಕ ಶಾಂತಯ್ಯ, ಅಂಗಡಿ ...ಸೀಬು ತಿಂದಿದ್ದಾರೋ ಗೊತ್ತಿಲ್ಲ, ಈ ದೂರಿನ ...ವಿಚಾರಣೆಯನ್ನೇ ವಿಳಂಬ ಮಾಡುತ್ತಿದ್ದಾರೆ. ಈ ...ವಿಳಂಬದ ಹಿಂದೆ ಕಾರ್ಮಿಕರನ್ನು ಬಗ್ಗಿಸುವ ಹುನ್ನಾರ ...ಇರುವುದು ಸ್ಪಷ್ಟ.

'ಲಕ್ಷ್ಮೀ' ಚಿತ್ರಮಂದಿರದಲ್ಲಿ ದುಡಿದು ...ಪಕ್ಕದಲ್ಲೇ ಇರುವ, 'ಶಿವ' ಚಿತ್ರಮಂದಿರದಲ್ಲಿ ...ದುಡಿದು ಶಿವ ಶಿವ ಎನ್ನುತ್ತಿರುವ ಕಾರ್ಮಿಕರತ್ತ ...ನೋಡದ ಕಾರ್ಮಿಕ ಅಧಿಕಾರಿಗಳು ಮಾತ್ರ ಬರೀ ...ಹೋಟೆಲ್, ರೆಸ್ಟೋರೆಂಟ್‌ಗಳ ಮೇಲೆ ದಾಳಿ ಮಾಡಿ ...ಷ್ಟು ಜೇಬು ತಾವೇ ಚಪ್ಪರಿಸಿಕೊಳ್ಳುತ್ತಿದ್ದಾರೆ.

ಅದಕ್ಕೆ, ಕಾರ್ಮಿಕ ಇಲಾಖೆ ಎಂಬ ಹೆಸರನ್ನು ...ಬದಲು 'ಕೈಗಾರಿಕಾ ಮಾಲೀಕರ ಇಲಾಖೆ' ಅಂತ ...ಬದಲಾಯಿಸಿಬಿಡುವುದು ಒಳ್ಳೆಯದಲ್ಲವೇ?

■ ವರದಿಗಾರ



ನಮ್ರಾ 'ಸೌಮ್ಯ' ಆದದ್ದು

ಪ್ರತಿ ಬೆಳಗ್ಗೆ ಶಾಲೆಗೆ ಹೋಗುವ ಮುನ್ನ ನನ್ನ ಪುಟ್ಟ ಮಗಳು ಇಶಾ ಕಕ್ಕಾಗೆಂದು ಟಾಯ್ಲೆಟ್ ಸೀಟಿನ ಮೇಲೆ ಕೂತಿರುವಾಗ ಅಂದಿನ ದಿನಪತ್ರಿಕೆಗಳಲ್ಲಿನ ಹಲವು ವರದಿಗಳನ್ನು ಆಕೆಗೆ ಓದಿ ಹೇಳುತ್ತೇನೆ. ಆಹಾರಕ್ಕೆಂದು ಎಲ್ಲೋ ರೈತರ ಬೆಳೆಗಳ ಮೇಲೆ ದಾಳಿ ಮಾಡಿರುವ ಆನೆಗಳ ಬಗ್ಗೆ ಇನ್ನೆಲ್ಲೋ ಸಾಗರದ ಅಂಚಿನಲ್ಲಿ ಸಿಕ್ಕಿಬಿದ್ದಿರುವ ತಿಮಿಂಗಿಲದ ಬಗ್ಗೆ, ಮತ್ತಿನ್ನೆಲ್ಲೋ ಓದಲು ಕುಳಿತಿರುವ ಚಿಂಪಾಂಜಿಗಳ ಬಗ್ಗೆ.... ಇಂತಹ ಕೌತುಕದ ವಿಷಯಗಳ ಬಗ್ಗೆ ನಾಲ್ಕು ವರ್ಷ ವಯಸ್ಸಿನ ಇಶಾಳಿಗೆ ಹೇಳುತ್ತೇನೆ.

ಆದರೆ ಮೊನ್ನೆ ಇಂತಹ ಸುದ್ದಿಗಳಿಗಾಗಿ ಅಂದಿನ ಪತ್ರಿಕೆಯನ್ನು ಓದುತ್ತಿದ್ದಾಗ ನನಗೆ ಅರಿವಿಲ್ಲದಂತೆ ನನ್ನ ಕಣ್ಣಿಂದ ನೀರು ಹರಿಯಲಾರಂಭಿಸಿತು. ಯಾವುದೋ ಪ್ರಾಣಿಯನ್ನು ಕುರಿತ ರೋಮಾಂಚಕ ಕತೆಯ ನಿರೀಕ್ಷೆಯಲ್ಲಿದ್ದ ಇಶಾಳಿಗೆ ನನ್ನ ಕಣ್ಣೀರು ನೋಡಿ ದಿಗಿಲಾಗಿ "ಯಾಕಮ್ಮ ಅಳುತ್ತಿದ್ದೀಯಾ?" ಎಂದು ಕೇಳಿದಳು.

ಆಕೆಗೆ ಏನೆಂದು ಉತ್ತರಿಸಬೇಕೆಂದು ನನಗೆ ತೋಚಲಿಲ್ಲ. ಯಾಕೆಂದರೆ ನನ್ನ ಕಣ್ಣೀರಿಗೆ ಕಾರಣವಾಗಿದ್ದು ನಮ್ರಾ ಎಂಬ ಪುಟ್ಟ ಬಾಲಕಿ ದೊಡ್ಡವರ ದಡ್ಡತನದಿಂದ 'ಸೌಮ್ಯ' ಎಂದಾಗಿದ್ದರ ಬಗ್ಗೆ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ವರದಿ. ಎರಡು ದಿನಗಳ ಹಿಂದೆ ಬೆಂಗಳೂರಿನ ಕಬ್ಬನ್ ಪಾರ್ಕ್ ಆವರಣದಲ್ಲಿ ಸಂಭವಿಸಿದ ಅಪಘಾತದಲ್ಲಿ ನಮ್ರಾಳ ತಾಯಿ ಆಯಿಷಾ ನಿಧನ ಹೊಂದಿದ್ದಳು. ಆಗ ತಾನೇ ತಾಯಿಯನ್ನು ಕಳೆದುಕೊಂಡಿದ್ದ, ತಂದೆ ಇಲ್ಲದಿದ್ದ, ಒಂದೇ ಒಂದು ಪರಿಚಿತ ಮುಖವೂ ತನ್ನ ಸುತ್ತಲು ಕಾಣದಿದ್ದರಿಂದ ಸಹಜವಾಗಿಯೇ ಎರಡು ವರ್ಷ ವಯಸ್ಸಿನ ನಮ್ರಾ ಕಂಗಾಲಾಗಿದ್ದಳು. "ಅಮ್ಮಿ ಬೇಕು" ಎಂದು ನಿರಂತರವಾಗಿ ಅಳುತ್ತಿದ್ದಳು. ಆ ಪುಟ್ಟ ಹುಡುಗಿಗೆ ಪ್ರಾಯಶಃ ಪರಿಚಿತವಾಗಿದ್ದ ಒಂದೇ ಒಂದು ಪದ ತನ್ನ ಹೆಸರು ಮಾತ್ರ. ಮಗು ಅಂತಹ ಸೂಕ್ಷ್ಮ ಪರಿಸ್ಥಿತಿಯಲ್ಲಿದ್ದರೂ, ಆಕೆ ದುಗುಡಗೊಂಡಿದ್ದರೂ ಆಕೆಯನ್ನು ಇರಿಸಲಾಗಿದ್ದ ಅನಾಥಶ್ರಮದಲ್ಲಿನ ಶಾಲಿನಿ ಎಂಬ ಮಹಿಳೆ ಆ ಕೂಸಿನ ಹೆಸರನ್ನೇ 'ಸೌಮ್ಯ' ಎಂದು ಬದಲಾಯಿಸಿದ್ದಳು.

ಲಿಂಗ, ಜಾತಿ, ಧರ್ಮ ಎಂಬಂತಹ ಭೇದಭಾವಗಳ ಅರಿವೂ ಇಲ್ಲದಂತಹ ಅಮಾಯಕ ನಮ್ರಾಳ ಹೆಸರನ್ನು ಬದಲಿಸುವ ಹಕ್ಕನ್ನು ಆ ಶಾಲಿನಿಗೆ ಕೊಟ್ಟವರ್ಯಾರು? ಆ ಹುಡುಗಿಯನ್ನು ನಮ್ರಾ ಎಂದೇ ಕರೆದಿದ್ದರೆ ಅನಾಥಾಶ್ರಮದ ಇತರೆ ಅಮಾಯಕ ಮಕ್ಕಳಿಗೆ ಆಕೆಯ ಬಗ್ಗೆ ಭೇದಭಾವವೇನೂ ಅನ್ನಿಸುತ್ತಿರಲಿಲ್ಲ. ಆದರೆ ಶಾಲಿನಿ ಎಂಬ ಧರ್ಮಾಂಧ ಮಹಿಳೆಗೆ ತನ್ನ ಉಸ್ತುವಾರಿಯಲ್ಲಿ ಮುಸಲ್ಮಾನ ಮಗು-ಅದು ಎಷ್ಟೇ ಅಮಾಯಕವಾಗಿದ್ದರೂ-ಇದೆ ಎಂಬುದು ಸಹಿಸಿಕೊಳ್ಳದಷ್ಟು ಕಷ್ಟವಾಯಿತೇನೋ. ಅದಕ್ಕೆ ಆಕೆ ಆ ಮಗುವಿನ ಒಂದೇ ಒಂದು ಸ್ವತ್ತಾಗಿದ್ದ ನಮ್ರಾ ಎಂಬ ಹೆಸರನ್ನೂ ಕಸಿದುಕೊಂಡು 'ಸೌಮ್ಯ' ಎಂದು ಯಾರನ್ನೂ ಕೇಳದೆ ಮರುನಾಮಕರಣ ಮಾಡುವಷ್ಟು ಹುಂಬತನವನ್ನು ತೋರಿಸಿದ್ದಾಳೆ. ಇಂತಹ ಮಹಿಳೆಯರ ಉಸ್ತುವಾರಿಯಲ್ಲಿ ಅಮಾಯಕ ಮಕ್ಕಳನ್ನು ಇಟ್ಟರೆ ಅವರೆಲ್ಲ ಎಂತಹ ವ್ಯಕ್ತಿಗಳಾಗಿ ಬೆಳೆಯುತ್ತಾರೆ ಎಂದು ಯೋಚಿಸಿದರೆ ಆಘಾತವಾಗುತ್ತದೆ.

ಈ ಜಾತಿ, ಧರ್ಮ ಎಂಬ ಭೇದಗಳು ನಮ್ಮ ಜನಜೀವನದಲ್ಲಿ ಎಷ್ಟು ಹಾಸುಹೊಕ್ಕಾಗಿದೆ ಎಂದರೆ ಅದನ್ನು ಮೊನ್ನೆ ನೋಡಿದ 'ಅಮೀರ್' ಎಂಬ ಸಿನಿಮಾದಲ್ಲಿ ಚೆನ್ನಾಗಿ ಸೆರೆ ಹಿಡಿದಿದ್ದಾರೆ: ಆ ಚಿತ್ರದ ಕಥಾನಾಯಕ ದೇಶ, ಧರ್ಮ, ಪ್ರಾಂತ್ಯ ಎಂಬ ಗಡಿಗಳನ್ನು ಮಿರಿ, ಗ್ಲೋಬಲ್ ಸಿಟಿಜನ್ ಆಗಿರುವ, ಎಲ್ಲಕ್ಕಿಂತ ಮಾನವೀಯತೆಯೇ ಮುಖ್ಯ ಎಂದು ನಂಬುವ ಅಮೀರ್ ಎಂಬ ಎನ್‌ಆರ್‌ಐ. ಈತ ಭಾರತಕ್ಕೆ ಹಾರಿ ಬಂದಾಗಲೇ ಆತನ ಸಮಸ್ಯೆಗಳು ಪ್ರಾರಂಭವಾಗುತ್ತವೆ. ಆತ ಯಾರು, ಎಲ್ಲಿಂದ ಯಾಕೆ ಭಾರತಕ್ಕೆ ಬಂದಿದ್ದಾನೆಂದು ವಿಮಾನ ನಿಲ್ದಾಣದಲ್ಲೇ ನೂರೆಂಟು ಪ್ರಶ್ನೆಗಳನ್ನು ಅಧಿಕಾರಿಗಳು ಕೇಳುತ್ತಾರೆ. ಅದೆಲ್ಲದರಿಂದ ರೋಸತ್ತು "ನನ್ನ ಹೆಸರು ಅಮೀರ್ ಬದಲಾಗಿ ಅಮರ್ ಆಗಿದಿದ್ದರೆ ನೀವಿಷ್ಟು ಪ್ರಶ್ನೆಗಳನ್ನು ಕೇಳುತ್ತಿದ್ದೀರಾ?" ಎಂದು ಅಧಿಕಾರಿಗಳನ್ನು ಪ್ರಶ್ನಿಸುತ್ತಾನೆ.

ಚಿತ್ರದುದ್ದಕ್ಕೂ ಆತ ಈ ಧರ್ಮ ಎಂಬುದರಿಂದ ತಪ್ಪಿಸಿಕೊಳ್ಳಲು ಎಷ್ಟೇ ಪ್ರಯತ್ನಿಸಿದರೂ ಅದು ಅವನನ್ನು ತನ್ನ ತೆಕ್ಕೆಯಲ್ಲಿ ಇರಿಸಿಕೊಳ್ಳುತ್ತದಲ್ಲದೆ, ಮುಸ್ಲಿಂ ಮೂಲಭೂತವಾದಿಗಳು ಅವನನ್ನು ತಮ್ಮ ಅಸ್ತ್ರವಾಗಿ ಬಳಸಿಕೊಳ್ಳಲು ಮುಂದಾಗುತ್ತಾರೆ. ಚಿತ್ರದ ಕ್ಲೈಮ್ಯಾಕ್ಸ್‌ನಲ್ಲಿ ಆತನಿಗೆ ಬಾಂಬ್ ಇರುವ ಬ್ಯಾಗ್ ಒಂದನ್ನು ಕೊಟ್ಟು ಮಕ್ಕಳಿರುವ ಬಸ್‌ನಲ್ಲಿ ಕೂರಿಸಲಾಗುತ್ತದೆ. ಬಾಂಬ್ ಸ್ಫೋಟಗೊಂಡರೆ ಮಕ್ಕಳ ಸಾವಿಗೆ ತಾನು ಕಾರಣನಾಗುತ್ತೇನೆಂದು ಕೊನೆಕ್ಷಣದಲ್ಲಿ ಅಮೀರ್ ಬಸ್‌ನಿಂದ ಎಗರುತ್ತಾನೆ. ಬಾಂಬ್ ಸ್ಫೋಟಗೊಂಡು ಆತ ಹತನಾಗುತ್ತಾನೆ. ಅಮೀರ್ ಓರ್ವ ಭಯೋತ್ಪಾದಕನಾಗಿದ್ದ, ಧರ್ಮಾಂಧನಾಗಿದ್ದ ಎಂದೆಲ್ಲ ಊಹಾಪೋಹಗಳು ಮಾಧ್ಯಮಗಳಲ್ಲಿ ಚರ್ಚಿಸಲ್ಪಡುತ್ತದೆ.

ಇದು ಕೇವಲ 'ಅಮೀರ್' ಚಿತ್ರಕ್ಕೆ ಸೀಮಿತವಾಗಿರುವ ಕತೆಯಲ್ಲ, ಬದಲಾಗಿ ಇವತ್ತು ನಮ್ಮ ಸುತ್ತಲಿರುವ ಸಾಮಾಜಿಕ ಮನೋಸ್ಥಿತಿ ಇದು ಎಂದು ಹೇಳಬಹುದು. ಇದಕ್ಕೆ ನಮ್ರಾಳ ಹೆಸರನ್ನು 'ಸೌಮ್ಯ' ಎಂದು ಬದಲಾಯಿಸಿದ ಶಾಲಿನಿ ಎಂಬ ಮಹಿಳೆಯ ಪೂರ್ವಗ್ರಹ ಮತ್ತು ಮನಃಸ್ಥಿತಿ ಒಂದು ಉದಾಹರಣೆ ಅಷ್ಟೇ. ಇಂತಹ ವ್ಯವಸ್ಥೆಯಲ್ಲಿ ಶಾಲಿನಿ ತರಹದ ಮಹಿಳೆಯರ ಸುಪರ್ದಿನಲ್ಲಿ ನಮ್ರಾಳಂತಹ ಮಕ್ಕಳು ಬೆಳೆದರೆ ನಾಳೆ ಆಕೆ ನಮ್ರಾಳಾಗಿಯೂ ಇರುವುದಿಲ್ಲ, ಸೌಮ್ಯಳಾಗಿಯೂ ಬೆಳೆಯುವುದಿಲ್ಲ.

ಕಣ್ಣೀರನ್ನು ಒರೆಸಿಕೊಂಡು ಇಶಾಳತ್ತ ನೋಡಿದೆ. ಆಕೆ ಉತ್ತರಕ್ಕಾಗಿ ಇನ್ನೂ ಕಾಯುತ್ತಿದ್ದಳು. ಆಕೆಗೆ ಏನೆಂದು ಹೇಳಿ ಅವಳ ಅಮಾಯಕತೆಯನ್ನು ನಾಶಪಡಿಸಲಿ?

ಓರ್ವ ಮಗುವಿನ ತಾಯಿಯಾಗಿ ನನಗನ್ನಿಸಿದ್ದು ಇದು. ಇನ್ನು ರಾಜಕೀಯವಾಗಿ ಏನೇನು ನಡೆಯುತ್ತಿದೆಯೋ, ನಡೆಯಲಿದೆಯೋ? [illegible] "ರಾಜಕೀಯ ನಮ್ಮ ವೈಯಕ್ತಿಕ ಜೀವನದಿಂದ ಹೊರತಾಗಿಲ್ಲ" ಎಂಬ

ಆ ಮಾತು ಎಷ್ಟು ಸತ್ಯ ಅನ್ನಿಸಿತು ನಮ್ರಾ ಎಂಬ ಪುಟ್ಟ ಹುಡುಗಿಯನ್ನು ಈ ಸಮಾಜ 'ಸೌಮ್ಯ' ಎಂದು ಬದಲಾಯಿಸಿದ್ದನ್ನು ಕಂಡು

■ ಕವಿತಾ ಲಂಕೇಶ್

ಪುಗಸಟ್ಟೆ ಕರಂಟು ಬೇಕು ಅಂತ ನಾವೇನು ಕೇಳಿದ್ವೆ

"ತೆಗಳಪ್ಪ ಎಡೂರಪ್ಪ ತಿರಿಗಿಬಿದ್ದಾ ಆತ್ಗಗೆ" ಎಂದ ಸೀರನ ಮಾತನ್ನು ಎಲ್ಲೋ ಯೋಚಿಸುತ್ತಿದ್ದ ಕಾಳಮಾವ

"ಅದೆಲ್ಲಿ ತಿರಿಗಿ ಬಿದ್ದಾ?" ಎಂದ.

"ಏ ಆದಿದ ಮಾತ್ಗೆ ಅಲ್ಲಗಳೀತಾ ಅವುನೆ ಕಣ್ಣಾ"

"ಏನಂದಿದ್ದಾ?"

"ಯಲ್ಲಾರಿಗೂ ಕರಂಟ್ ಪುಗಸಟ್ಟೆ ಕೊಡ್ತಿನಿ ಅಂದಿದ್ದ."

ಯಂಗುಳಿ ಸೀಮೆಯ
ಕಟ್ಟೆ ಪುರಾಣ
ಬಿ. ಚಂದ್ರೇಗೌಡ

"ಇವತ್ತು ಪುಗಸಟ್ಟೆ ಯಾವುದು ಸಿಕ್ತದ್ದ?"

"ಸಿಗದಿಲ್ಲ ಸರಿ ಕಣ್ಣಾ ಇವುನ್ನ ನಾವೇನಾರ ಕೇಳಿದ್ವೆ? ಅವುನಾಗಿ ಅವುನೆ ಅಧಿಕಾರಕ್ಕೆ ಬಂದ್ರೆ ಇದೀ ದಿನ ಕರಂಟ್ ಕೊಡ್ತಿನಿ, ಅದೂ ಬಿಟ್ಟಿ ಕೊಡ್ತಿನಿ ಅಂದಿದ್ದ. ಈಗ ಅವುನಂದ ಮಾತ್ಗೆ ಉಳಿಸಿಗತ್ತಾಯಿಲ್ಲ" ಎಂದ ಸೀರ.

"ಯಂಗುಳಿಸಿಗಳಿಕ್ಕಾದತೋ ಮಾವ? ಕರಂಟಿನ ವಿಷಯ ಮಾತಾಡೊ ಮುನ್ನ ಯೇಚ್ನೆ ಮಾಡಬೇಕಾಗಿತ್ತು. ಅದು ಮದ್ಲೆ ಕರಂಟು, ಕಜಾನೆ ದುಡ್ಡು ತಗುದು ರಾಮಚಂದ್ರಾಪುರದ ಮಠಕ್ಕೆ ಕೊಟ್ಟಲ್ಲ? ಅಂಗಲ್ಲ ಇದು. ಇದೀ ರಾಜ್ಯ ಕರಂಟಿನ ಸಮಸ್ಯೆಲಿರುವಾಗ ಅಂತ ಸಮಸ್ಯೆನೆ ಬಿಟ್ಟಿ ಕೊಡ್ತಿನಿ ಅಂದ್ರೆ ಅವತ್ತೆ ಇವುನಿಗೆ ತಲೆ ಕಮ್ಮಿ ಅನ್ನುಸ್ತು. ಅದು ಇವತ್ತು ಸಾಬೀತಾಗ್ತಾ ನೋಡು" ಎಂದ ಉಗ್ರಿ.

"ಬಿಟ್ಟಿ ಕೊಟ್ರೆ ಯಾವುದ್ದು ಬ್ಯಲಿರದಿಲ್ಲ ಕಂಡ್ರ. ಎಡೂರಪ್ಪ ಕರಂಟ್ ಬಿಟ್ಟಿ ಕೊಟ್ಟ ಅನ್ನು, ನೀನೇನು ಮಾಡ್ತೀ? ಮಿಸಿನ್ ಸ್ಟಾಟ್ ಮಾಡಿ ಇಲ್ಲಿಗೆ ಬಂದು ಕೂತಗತ್ತಿ, ಇಲ್ಲ ರಾತ್ರಿ ಸ್ಟಾಟ್ ಮಾಡಿ ವತ್ತರಿಕ್ಕೋಗಿ ಆಪ್ ಮಾಡ್ತಿ, ಅಲವೇನ್ನ?" ಎಂದ ಕಾಳಮಾವ.

"ಯಲ್ಲಾರಿಗೂ ಬಿಟ್ಟಿ ಕೊಡಕ್ಕಾಗದಿಲ್ಲ ಕೆಲವರಿಗೆ ಮಾತ್ರ ಕೊಡ್ತಿನಿ ಅಂದವುನೆ ಈಸ್ನುರಪ್ಪ" ಎಂದ ಸೀರ.

"ಅವುರಿಗೂ ಮೀಟ್ರಾಕ್ತನಂತಲ್ಲೊ?"

"ಬಿಟ್ಟಿ ಕೊಡೋರಿಗೆ ಯಾಕಪ್ಪ ಮೀಟ್ರು?"

"ಅದೆ ಈಗ ನೆಡಿತಾಯಿರೊ ಚರ್ಚೆ. ಈಸ್ನುರಪ್ಪ ಮೀಟ್ರು ಮಾರೋರತ್ರ ಕಮಿಷನ್ ತಗಂಬುಟ್ಟಿದ್ದನಂತೆ. ಅದ್ಕೆ, ಮೀಟ್ರಾಯ್ತಳಿ ಅಂತ ಕುಂತಿದ್ದನಂತೆ, ಇದಕೇನೆಳ್ತಿ?"

"ನೋಡು ಮತ್ತೆ ಇವುರಿನ್ಯಂತಾ ಕಳ್ಳದ್ರು? ಅಲ್ಲಾ, ಸರ್ಕಾರ ಬಂದು ಸರಿಯಾಗಿ ಒಂತಿಗ್ಯಾಗಿಲ್ಲ, ಆಗ್ಲೆ ಕಮಿಷನ್ನು ಅಂತಿಯಲ್ಲಾ, ಆ ಕಾಂಗ್ರೆಸ್ಸು ಜೆಡಿಎಸ್ಸು ಇವುರಿಗೆ ಏನು ಎತ್ಯಾಸ ಉಳಿತು ಅಂತವ?" ಎಂದ ಸೀರ.

"ಓ ನೀನೆಲ್ಲೊ ಇದ್ದಿ ಕಣೊ ಸೀರಮಾವ. ಬಿಜೆಪಿಗಳು ಅಂದ್ರೆ ಏನು ತಿಳಕಂಡೆ ನೀನು? ಭಾರಿ ನೀತಿವಂತ್ರು, ಸತ್ಯವಂತ್ರು ಅನ್ಕಂಡಿದ್ದಾ? ಅವುರುಬೇಕು ಇವುರುಬ್ಯಾಡ ಅನ್ನಂಗವುರೆ ಗೊತ್ತೆ?" ಎಂದ ಉಗ್ರಿ.

"ಅದ್ಕೆ ಅಲುವುಲ ದ್ಯಾವೇಗೌಡ ಅಧಿಕಾರ ಕೊಡದಂಗೆ ಹಟ ಮಾಡಿದ್ದು" ಎಂದ ಕಾಳಮಾವ.

"ದ್ಯಾವೇಗೌಡ ಕೊಡದೆಯಿರದ್ಕೆ ಕಾರಣನೆ ಬ್ಯಾರೆ ಅದೆ ಕಣಮಾವ. ನೀನು ಅದತಂದು ಇಲ್ಲಿಗೆ ತಾಗಸಬ್ಯಾಡ."

"ಅವುರ್‍ಯಾಕೊ ಅಪ್ಪ ಮಕ್ಕಳು ಸುಮ್ಮನಾದರಲ್ಲಾ?" ಎಂದಳು ಜುಮ್ಮಿ.

"ಸುಮ್ಮನೆಲ್ಲಾಗಿದ್ದರೇ? ಈಗವುರದೆ ಸುದ್ದಿ. ಆ ಕುಮಾರಸ್ವಾಮಿ ಕರಂಟು ಬಿಲ್ಲು ಕೊಡಕ್ಕೆ ಅಧಿಕಾರಿಗಳು ಬಂದ್ರೆ ವದಿರಿ ಅಂದವುನೆ. ಇದಕೇನೇಳ್ತೀ?"

"ಅಂಗಂದಿದ್ದನೇನ್ನ?"

"ಊ ಕಣೆ, ರೈತರು ಅಧಿಕಾರಿಗಳ ವದಿರಿ ಅಂದವುನೆ."



"ಅಂಗನ್ನಬಾರ್ದು" ಎಂದ ಕಾಳಮಾವ.

"ಅಂಗನ್ನಬಾರ್ದು ಅಂತ ನೀನಂತಿ. ಅದವುರಪ್ಪ ಹೇಳಿ ಕೊಟ್ಟರೋ ಮಾತು ಕಣ ಮಾವ. ಇದೇ ದ್ಯಾವೇಗೌಡ ರಾಜ್ಯಪಾಲ ಅಧಿಕಾರಿಗಳ ವರ್ಗ ಮಾಡುವಾಗ ನಾವು ಬತ್ತಿವಿ, ವದಿತಿವಿ ಅಂದಿದ್ದ. ಅವುನ ಬಾಯಿಲಿ ಆ ಮಾತು ಬಂದ ಮ್ಯಾಲೆ ಮಕ್ಕಳ ಬಾಯಲೂ ಬರಬೇಕಲ್ಲವೆ? ಅದ್ಕೆ ಕುಮಾರಸ್ವಾಮಿ ಅಂಗಂದವುನೆ."

"ಅಲ್ಲ ಅಧಿಕಾರಿಗಳದೇನು ತಪ್ಪು? ಅವುರೇ... ಆ ಮಾತಂದು ತಪ್ಪಿದ್ರೆ ಅವುರಿಗೆ ಅಂಗೆ ಮ... ಪಾಪ ಹೇಳಿದ ಕ್ಯಲ್ಸ ಮಾಡೋ ಅಧಿಕಾರಿಗಳದ... ತಪ್ಪು ಅಂತ?"

"ಒಟ್ನಲ್ಲಿ ಯಕ್ಕದ ಕದಿಯೋ ದೇವುರಿಗೆ ಯ... ಕುಡಿಯೋ ಪೂಜಾರಿ ಅಂತ ಆಡಳಿತ ಮಾಡೋರಿ... ವಿರೋಧ ಪಕ್ಷದಲ್ಲಿರೋರಿಗೂ ಸರಿಯಾಗ್ಗದೆ."

"ಆ ಭಜರಂಗಿವು ಬಂದು ಗಿಂದು ... ಒಡಾಡ್ತಿದ್ದಲ್ಲ, ಯಾಕ್ಲ ಉಗ್ರಿ?" ಎಂದಳು ಜು...

"ಅದಕ್ಕೆ ಆನ್ಸರ್ ನಾನು ಮಾಡ್ತಿನಿ ಕ... ಎನ್ನುತ್ತಾ ವಾಟಿಸ್ಸೆ ಬಂದ.

"ಕಾಶ್ಮೀರದಲ್ಲಿ ಅಮರನಾಥ ಗುಡಿಗೆ ... ಸರ್ಕಾರ ಜಾಗ ಕೊಟ್ಟತ್ತಂತೆ. ಅದ್ಕೆ ... ವಿರೋಧ ಮಾಡಿದರಂತೆ. ಸರ್ಕಾರ ... ಭೂಮಿಯ ತಿರಗ ವಾಪಸ್ ತಗತ್ತಂತೆ. ... ಬಿಜೆಪಿಗಳು ಭಾರತ್ ಬಂದ್‌ಗೆ ಕರೆ ಕೊಟ್ಟಿ...

"ಅಲ್ಲಾ, ಕಾಸಮೀರದ ಜಾಗದ ಸ... ಕಾಸುಮೀರಕ್ಕಾಯ್ತು. ಇಲ್ಲಿ ಬಂದು ಅ... ಬಾಗಲಾಕಿ ಅಂತವಲ್ಲ ಇವುಕೇನು ಬಂದ...

ಎಂದ ಕಾಳಮಾವ. ಅದಕ್ಕೆ ಸೀರ,

"ಈ ಸಾಬನನ್ನ ಮಗನವುಕೆ ತಲೆನೆ ಇಲ್ಲ ಹೋಗ... ಇವುರು ಗುಡಿ ಕಟ್ಟದು ಬ್ಯಾಡ ಅಂದ್ರೆ ನಾವು ಮ... ಕಟ್ಟದು ಬ್ಯಾಡ ಅಂತಿವಿ ಆಗ" ಎಂದ.

"ಅದೇ ಚಗಪ್ಪ ಈಗಾಗಿರದು. ನಿನ್ನಂಥ... ಪಾಪ್ಯುಲೇಸನ್ನು ಬಿಜೆಪಿಲಿರದ್ರಿಂದ, ಮುಂದ ಎ... ಯಲೆಕ್ಸನ್ ಬತ್ತಾಯಿರದ್ರಿಂದ ಅವುರು ಜನಗಳ ಬ... ಬಂದ ಮಾಡಿ, ಕೈಗೆ ಕಲ್ಲುಕೊಟ್ಟು, ಸಾಬರ ...

ಅವನೆಲ್ಲೋ ಸಾಬರಿಗೆ ಹುಟ್ಟಿರಬೇಕು

ದುಬಾರಿ ಆಷಾಢ!

ಆಷಾಢ ಎಂದರೆ ಬಂದ್‌ಗಳ ಮಾಸ!

ಮದುವೆ ಬಂದ್, ಗೃಹಪ್ರವೇಶ ಬಂದ್, ಎಲ್ಲ ಶುಭಕಾರ್ಯಗಳೂ ಬಂದ್! ಮದುವೆ ಅನ್ನೋದೆ ಅಶುಭ ಅಂತಾನೋ ಏನೋ ಅಯ್ಯಂಗಾರರು ಆ ತಿಂಗಳಲ್ಲೇ ಮಾಡುತ್ತಾರಂತೆ. ಅದು ಅಲಾಯಿದ ಇರಲಿ.

ಹಿಂದಿನ ಕಾಲದ ಹೆಣ್ಣುಮಕ್ಕಳ ತರಹ ಈಗಿನ ಕಾಲದವರು "ಆಷಾಢ ಮಾಸ ಬಂದೀತಮ್ಮ, ಇನ್ನೂ ಬರಲಿಲ್ಲ ಅಣ್ಣ ಕರ್‍ಯಾಕ" ಅಂತ ಪದ ಹೇಳ್ತಾ ಅಳುಮುಂಜಿ ತರಹ ಅಳ್ತಾ ಮೂಲೆ ಸೇರಲ್ಲ. ಅದೇನು ಬಂದೇ ಬಿದ್ದು ಅನ್ನುವಷ್ಟರಲ್ಲಿ ತೌರಲ್ಲಿ ತಳ ಊರಿರ್‍ತಾಳೆ. ಕುಟುಕುಟು ಮೋಟ್ರು ಸೈಕಲಲ್ಲೋ, ಸ್ಕೂಟರಲ್ಲೋ ರಾತ್ರಿ ಹೋಗಿ ಹೊತ್ತಾರೆ ಬಂದು ಬಿಡಾನ ಅಂದ್ರೆ ಆ ಮಾಸದಲ್ಲಿ ಅಳಿಯ ಅತ್ತೆ ಒಂದೇ ಹೊಸಿಲು ತುಳೀಬಾರ್‍ದಂತೆ. ಹಂಗೇನಾದ್ರೂ ಯಡವಟ್ಟು ಕೆಲಸ ಮಾಡಿದ್ರೆ ಆ ಯಮರಾಯ ಅನ್ನೋನು ಕ್ಷಣದ ಮೇಲೆ ಕುಂತ್ಕಂಬಂದು ಅತ್ತೆ ಅನ್ನುವ ಪ್ರಚಂಡ ಪ್ರಾಣಾನ ತನ್ನ ಲೋಕಕ್ಕೆ ಎಳ್ಕಂಡು ಹೋಯ್ತಾನೆ ಅನ್ನುವ ಭಯ. ಹಳೇ ಪಂಚೆ ಅಳಿಯಂದಿರಿಗೆ ಬರ್‍ಲೋ ಅಂತ ಬೀಸುವ ಚಳಿಗಾಳಿಯಿಂದಾಗಿ ಆಹಾ ಇಂತಹ ಹೊತ್ತಿನಲ್ಲಿ 'ಅವಳಿದ್ದಿದ್ರೇ' ಅನ್ನುವ ಬಲವಾದ ತುಂಡಿಗೆ ಮನಸ್ಸಿಗೆ ಬಂದರೂ ಮನೆ ಜಗುಲಿಲೋ, ಊರ ಚಾವಡೀಲೋ ಮಕಾಡೆ ಬಿದ್ಕೊಳ್ಳೋದು ಅನಿವಾರ್ಯ ಆಗುತ್ತೆ. ಹೆಂಡತಿಯ ಜೊತೆ ಈ ಹಿಂದೆ ಕಳೆದ ರಸಗಳಿಗೆಗಳು ಕನಸಿಗೆ ಬಂದು ಜೀವ ಹಿಂಡಿದರೂ ಬೇರೆ ದಾರಿ ಇಲ್ಲವೇ ಇಲ್ಲ. ಹೊಸ ಮದುವೆ ಗಂಡನ ವೇದನೆ ಇನ್ನೂ ಚಿಂತಾಜನಕ. ಸ್ವರ್ಗಸುಖ ಕಾಣಬೇಕಾದರೆ ಗೌರಿಹಬ್ಬದ ತನಕ ಕಾಯಬೇಕು ಅನ್ನೋದು ಗೊತ್ತಿದ್ದರೂ ಅವಳು ಮನೇಲಿ ಓಡಾಡುತ್ತಿದ್ದಾಗ ಹಿರೀಕರ ಕಣ್ಣಿಗೆ ಬೀಳದಂತೆ ಪ್ಯೆಕ್ಯೆ ತಾಗಿಸಿ ಚುಚ್ಚಿ ಚಂದ್ರಮನ ಕಂಡಂತೆ ಸಂತೋಷಪಡುತ್ತಿದ್ದರು. ಪಾಳು ಆಷಾಢಮಾಸ ಬರಲಾಗಿ ಮನೆಯೆಲ್ಲ ಬಿಕೋ ಅನ್ನಿಸಿ ಕಾಲುಕುಕ್ಕರಿಸಿಕೊಂಡು ಬಿದ್ಕೊಳ್ಳೋ ಹಾಗಾಗಿದೆ ಅಂತ ಶಾಪ ಹಾಕುತ್ತಾರೆ.

ಅಮರನಾಥ್ ಅನ್ನೋ ವಕೀಲರು ಆಷಾಢದ ಅಳಿಯನ ಪರಂಪರೆಯವರೇ ಅನ್ನುವುದರಲ್ಲಿ ಸಂಶಯಾನೇ ಇಲ್ಲ. ಗುಲ್ಬರ್ಗ ಮತ್ತು ಧಾರವಾಡದಲ್ಲಿ ಹೈಕೋರ್ಟ್ ಸಂಚಾರಿ ಪೀಠ ಕಾರ್ಯಾರಂಭ ಅವರ ಎದೆನೇ ಹೊಡೆದುಹಾಕ್ತಂತೆ. ಹೋಗಿ ಹೋಗಿ ಇಂತಹ ಶುಭಕಾರ್ಯಾರಂಭ ಅಶುಭ ಆಷಾಢದಲ್ಲಿ ಮಾಡ್ತಾರೆಯೇ ಅಂತ ಚಡಪಡಿಸಿದರಂತೆ. ಬಹುಸಂಖ್ಯಾತ ಹಿಂದೂಗಳ ಭಾವನೆ ಎಷ್ಟು ನೊಂದಿರಬೇಕು, ಸಂಪ್ರದಾಯ ಅನ್ನೋದು ಕಾಲಕಸ ಆಗಿದೆಯಲ್ಲ ಅಂತೆಲ್ಲ ಹೇಳ್ತಾಡಿಕೊಂಡರಂತೆ. ಮಾಮೂಲಿ ಭಾವನೆ ಹೊಂದಿದವರಾಗಿದ್ದರೆ ಇದರ ಪರಿಹಾರಾರ್ಥ ಹೋಮ,



ಹವನ, ಯಜ್ಞ ಯಾಗಾದಿಗಳನ್ನು ಮಾಡುತ್ತಿದ್ದರೇನೋ? ಆದರೆ ಇವರು ವಕೀಲರಲ್ಲಾ, ಮುಳ್ಳನ್ನು ಮುಳ್ಳಿನಿಂದಲೇ ತೆಗೀಬೇಕು ಅಂತಾವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಜಾಡಿಸಿದರು.

ಅಲ್ಲ ನ್ಯಾಯಮೂರ್ತಿ ಎಂತಹವರು ಅಂತೀನಿ. ಸರ್ವರೋಗಕ್ಕೂ ಪೂಜೆಯೇ ಮದ್ದು ಅಂತ ನಂಬಿರೋರು ಅಧಿಕಾರದಲ್ಲಿದ್ದಾರೆ ಅನ್ನೋದನ್ನ ಮರೆತು ಕಲಿತ ವಕೀಲರ ನಂಬಿಕೆ, ಸಂಪ್ರದಾಯವನ್ನ ಮೌಢ್ಯ ಹಂಗೆ ಹಿಂಗೆ ಅಂತ ಜಾಡಿಸಿ ಬಿಡೋದಾ. ಇಷ್ಟೇ ಸಾಲದು ಎಂಬಂತೆ ಇಂತಹ ಕೆಲಸಕ್ಕೆ ಬಾರದ ಅರ್ಜಿ ಗುಜರಾಯಿಸಿದ್ದಕ್ಕೆ ಶಿಕ್ಷೆ ಅಂತ ಇಪ್ಪತ್ತೈದು ಸಾವಿರ ರೂಪಾಯಿ ದಂಡಾನು ಹಾಕಿ ಬಿಡೋದಾ. ಅದೂ ನಾಲ್ಕು ವಾರದೊಳಗೆ ನೀಡಬೇಕಂತೆ. ಕೊಡದೇ ಇದ್ದರೆ ಏನು ಮಾಡ್ತಾನೆ ಇವನು ಅಂತ ಉಡಾಫೇನೂ ಹೊಡೆಯುವ ಹಾಗಿಲ್ಲ. ಹಾಗೇನಾದರೂ ಮಾಡಿದರೆ ಭೂಕಂದಾಯ ಪ್ರಕರಣಗಳಲ್ಲಿ ವಸೂಲು ಮಾಡುವಂತೆ ಮಾಡಲಾಗುತ್ತದೆ ಅಂತಾನೂ ಧಮಕಿ ಹಾಕಿದರಂತೆ!

ಹಿಂದೂಗಳ ಭಾವನೆಗಳಿಗೆ ನೋವಾಗುತ್ತಲ್ಲಾ ಅದು ಹಾಗೆ ಆಗಬಾರದು ಅನ್ನೋ ಸದುದ್ದೇಶದಿಂದ ಗುಜರಾಯಿಸಿದ ಅರ್ಜಿನ ಈ ರೀತಿ ಸಮಾಧಿ ಮಾಡಿದನಲ್ಲಾ ಆ ನ್ಯಾಯಾಧೀಶ ಅವನೇನು ಸಾಬರಿಗುಟ್ಟಿದವನಾ ಅಂತ!

ಪಾಪ ಲಾಯರು ಸಾಹೇಬರಿಗೆ ಆಷಾಢ ಬಲೇ ದುಬಾರಿ ಆಯ್ತು ಅಲ್ವಾ!

ಟೇಕ್ ಒನ್ ಬೈ ಒನ್!

ಆಧುನಿಕ ಪ್ರಪಂಚದಲ್ಲಿ ಇದು ಸಾಮಾನ್ಯ ವಾಕ್ಯ.

ವ್ಯಾಪಾರ ತಂತ್ರ ಇದು. ದುಪ್ಪಟ್ಟು ಬೆಲೆ ಇಟ್ಟು ಗಿರಾಕಿಗಳನ್ನು ಬೋಳಿಸುವ ಹುನ್ನಾರ.

ಈ ತರಹದ ಬರಹ ಕಂಡಾಗ ತಮಾಷೆ ಮಾಡುತ್ತಿದ್ದಿ–'ಹೆಂಡತಿ ಕೊಂಡುಕೊಂಡರೆ ಗಂಡ ಫ್ರೀ'ಅಂತ!

ಅದು ಈಗ ನಿಜ ಆಗಿದೆ!

ಒಂದು ವ್ಯತ್ಯಾಸ. ಮನೆ ಕೊಂಡುಕೊಂಡರೆ ಮನೆಯೊಡತಿ ಫ್ರೀ!

ಅಂಗವಿಕಲೆಯಲ್ಲ, ಕುರೂಪಿ ಅಲ್ಲ, ಕೊನೆಗೆ ಮುದುಕಿಯೂ ಅಲ್ಲ!

ಮತ್ತೇಕೆ ಇಂತಹ ಬಳುವಳಿ?

ಅಮೆರಿಕದ ಡೆವೆನ್ ಟ್ರಿಬೋಫ್ ಪ್ರೇಮದ ಮಡಿಲಲ್ಲಿ ಬಿದ್ದು ನಿರಾಶೆಗೊಂಡಾಕೆ. ಪ್ರೀತಿಗಾಗಿ ಅವಳ ಹಂಬಲ.

ಮನೆಯನ್ನು ಮಾರಿ ಗಂಡನ್ನು ಹುಡುಕಬಹುದಿತ್ತಲ್ಲಾ?

ಉಹುಂ. ಅದು ಅವಳಿಗೆ ಇಷ್ಟವಿಲ್ಲ.

'ನನಗೆ ನನ್ನ ಮನೆ ಇಷ್ಟ. ಅದನ್ನು ಕಳೆದುಕೊಳ್ಳಲು ನನಗೆ ಮನಸ್ಸಿಲ್ಲ. ನನ್ನನ್ನು ಪ್ರೀತಿಸಿದವನೊಡನೆ ಆ ಮನೆಯಲ್ಲೇ ವಾಸ ನನ್ನ ಬಯಕೆ'

ಆಕೆಯ ಮೇಲೆ ಆಸೆ, ನಂತರ ಮೇಲೆ ಪ್ರೀ...

ವೆಬ್‌ಸೈಟ್‌ನಲ್ಲಿ ಈ ಜಾಹೀರಾತು ಬಂದಿದೆಯ...

ಮಠಾಧೀಶರು ಗಪ್‌ಚುಪ್!

ವೀರಶೈವ ಮಠಾಧೀಶರಿಗೆ ಮಹಾದಾನಂದ! ಯ... ಮುಖ್ಯಮಂತ್ರಿ ಮಾಡಲು ಅವರೇನು ಮಸಿ ಒದ್ದಾಡಿ... ಅವರಿಗೆ ಅಧಿಕಾರ ನೀಡದೆ ಜೆಡಿಎಸ್ ವಚನ... ಆಗಿತ್ತು. ಆಡಿದ ಮಾತಿಗೆ ತಪ್ಪುವುದು ಎಂದರೆ... ಇದನ್ನು ಸಹಿಸಲಾದೀತೆ? ಕಾವಿಧಾರಿಗಳು ಸಿಡಿದೆ... ನ್ಯಾಯವಾಗೇ ಇತ್ತು ಈ ಸಿಡಿತ. ಯಾಕೆಂದರೆ ವ... ಭ್ರಷ್ಟತೆಯ ವಿಷಯ ನೋಡಿ! ಯಡ್ಡಿ ಬದಲು ... ಯಾರಿದ್ದರೂ ಈ ರೀತಿಯೇ ಸಿಡಿದೇಳುತ್ತಿದ್ದರಾ ಅ... ಇರಲಿಲ್ಲವಲ್ಲಾ. ಈಗ ಯಾಕೆ ಆ ಸುದ್ದಿ ಅಂತ. ಲಕ್ಷಾ... ವೀರಶೈವರು ವಿಧಾನಸೌಧಕ್ಕೆ ಮುತ್ತಿಗೆ ಹಾ... ಅಂತ ಗುಟುರು ಹಾಕಿದ್ರು. ನ್ಯಾಯವೇಯ. ಯಾಕೆಂ... ವಚನಭ್ರಷ್ಟತೆಯ ವಿಷಯ ನೋಡಿ! ಅವರು ಅಧಿ... ಕೊಡಲಿಲ್ಲ. ಅಂತಹದ್ದೇನೂ ನಡೆಯಲೂ ಇಲ್ಲ. ಆಮೇ... ಚುನಾವಣೆ ಬಂತು. ಭಾಜಪ ಅಂದರೆ ಭಾರತಿ... ಜಂಗಮರ ಪಕ್ಷ ಅಂದುಕೊಂಡಿರಬೇಕು ಸ್ವಾಮಿಗ...

ಅಣಕ
ಎಚ್.ಎಲ್. ಕೇಶವಮೂ...

ಇಂತಹವರಿಗೇ ಅಧಿಕಾರ ನೀಡಬೇಕು. ಅ... ದೈವಪ್ರೇರಣೆ ಆಗಿರಬೇಕು. ತಮ್ಮ ಶಿಷ್ಯರಿಗೆ ಅದ... ತಲುಪಿಸುವ ಪವಿತ್ರಕಾರ್ಯವೆಸಗಿದರು. ಯ... ಮುಖ್ಯಮಂತ್ರಿ ಆದಾಗ ಅವರೆಲ್ಲರ ... ಹಿಗ್ಗಿರುವುದರಲ್ಲೇನೂ ಅತಿರೇಕ ಇಲ್ಲ ಬಿಡಿ.

ಇಷ್ಟೆಲ್ಲ ಆಯಿತಲ್ಲ, ಆಮೇಲೆ ಏನು ನಡೆಯಿ...

ಯಡ್ಡಿ ಹಸಿರು ಶಾಲು ಹೊದ್ದರು! ರಸಗೊ... ಬೇಡಿದವರಿಗೆ ಗುಂಡು ಹಾರಿಸಿದರು! ಸತ್ತವನು ರೈ... ಅಲ್ಲ ಅಂದರು. ಮೃತರ ಮನೆಯವರಿಗೆ ಪರಿಹ... ನೀಡಿದರು! ರೈತರು ಸಾಯುತ್ತಲೇ ಇದ್ದರು.

ಸತ್ತ ರೈತರಲ್ಲಿ ಅವರ ಶಿಷ್ಯರೂ ಇರಬಹುದ... ಆದರೂ ಮಠಾಧೀಶರು ತುಟಿ ಬಿಚ್ಚಲಿಲ್ಲ!

'ರೈತರಿಗೆ ವಿದ್ಯುತ್ ಉಚಿತ!'

ಯುಸಿರಿ ಅಂತ ಹೇಳಕ್ಕೆ ಒಂದು ಸ್ಥಳ ಬೇಕಾಗಿತ್ತು, ಕಾಶ್ಮೀರದ ಗುದಿ ಸಮಸ್ಯೆ ತಂದು ಅಂಗದಿ ಗಾಳಾಕಿಸಿದ್ರು."

"ಈ ಬಿಜೆಪಿಗಳು ಆದದ ನೋಡಿದ್ರೆ ಉಗ್ರಿ ಹೇಳತಿದ್ದ ತು ನಿಜ ಕಂದ್ರ" ಎಂದಳು ಜುಮ್ಮಿ.

ಉಗ್ರಿ ಸ್ವಲ್ಪ ಹೇಳಿದ್ರ ಕಣಕ್ಕ. ನಾನೇನು ವಸಿ ದ್ನೆ? ಈಗಂತೂ ಅಧಿಕಾರ ಸಿಕ್ಕದೆ ಅವುರಿಗೆ. ಂಗಾಗ್ಗದೆ ಅಂದ್ರೆ ಕೋತಿಗೆ ಯಂಡ ಕುಡಿಸಿರುವಾಗ ಚು ಕಟುಗಿದ್ರೆ ಯಂಗಾದ್ದದೊ ಅಂಗಾದ್ದ ಅವುರೆ. ಚಾಂಪಲ್ ಚಿಕ್ಕಮಗಳೂರು ಕಾದಲ್ಲಿರೊದೊಂದು ಯುಲಕ್ಷನ್ನಲ್ಲಿ ಗೆದ್ದ ಖುಷಿಗೆ ಧರ್ಮಸ್ಥಳಗಂಟ ಡೋಯ್ತಾ ಅದಂತೆ!"

"ಅವುನ್ಯಾರ್ಲ ಧರ್ಮಸ್ಥಳಗಂಟ ನ್ಯದಿಯೋನು?"

"ಅಯ್ಯೋ, ಅಲ್ಲೊಬ್ಬ ಅವುನೆ ಕಣಕ್ಕ. ಆ ಮಗಳೂರು ಜನ ಯಂಗವುರೊ ಅದು ಅಂಗೇ . ಹುಟ್ಗೊ ಬತ್ತ ಬುಟ್ಟು ಹುಟ್ಗೊ ತುಬಟ ತರಿತು ಗೆ ಅಲ್ಲಿ ಮುಳ್ಳಯ್ಯನಗಿರಿವಪ್ಪು ಸಮಸ್ಯೆಯಿದ್ರೂ ಮುಂದ್ಯತ್ತುದ್ದು ಧರ್ಮಸ್ಥಳಗಂಟ ವಾಕ್ ಹೋಯ್ತಾ ಲ್ಲ, ಇದಕೇನೇಳನಾ?"

"ಅದ್ಯಾಕಂಗೊಯ್ತಾ ಅವುನ್ನ?"

"ನಾನು ಗೆದ್ರೆ ಧರಮುಸ್ಥಳಗಂಟ ಬಂದು ಜುನಾಥ ಸ್ವಾಮಿ ನೋಡ್ತೀನಿ ಅಂತ ಹರಕೆ ಗಂಡಿದ್ನಂತೆ. ಗೆದ್ದ ಅದ್ಕೆ ಹ್ವಂಟ."

"ಅಂಗರೀಗ ಸೋತಿರವ್ಯಲ್ಲ ಅವುನಂಗೆ ಹರಕೆ ಗಂಡಿದ್ರೆ ಗೆಲ್ತಿದ್ವೆ?"

"ಅದ್ಯಂಗೆಲ್ಲರಕ್ಕ?"

"ಜನ ಓಟು ಕೊಟ್ರಲವೇನೆ ಗೆಲ್ಲದು? ಅದು ಆ ಡೆದ್ಕೆ ಯಂಗೆ ಗೊತ್ತಾಗಬೇಕು? ಒಂದಿಬ್ರು ವಾಸ್ತು ಲ್ಲ ಅಂತ ಮನೆ ವಡಿತ ಕುಂತವುರೆ. ಇವುನು ಡಗೆಲಿ ಧರ್ಮಸ್ಥಳ ಹುಡಿಕಂಡೋದ. ಬಿಜೆಪಿಗಳು ಪ್ರೆ ಏನು ಮಾಡ್ತರೆ ಅಂತ ಗೊತ್ತಾಯ್ತೆ ಈಗ."

"ಗೊತ್ತಾಯ್ತು ಬುಡು!" ■

ಭಾಜಪ ಚುನಾವಣಾ ಘೋಷಣೆ.

ಈಗ ಹೇಳುತ್ತಿರುವುದೇನು?

"ಎಲ್ಲ ರೈತರಿಗೂ ಲಾಗುವುದಿಲ್ಲ!' ಯಡಿಯೂರಪ್ಪ.

ಇಂಧನ ಮಂತ್ರಿ ಏನನ್ನುತ್ತಾರೆ?

'ರೈತರ ಎಲ್ಲಾ ಪಂಪ್‌ಸೆಟ್ಟುಗಳಿಗೆ ಮೀಟರ್ ವಡಿಸುತ್ತೇವೆ!'

ಹೇಳಿದ್ದು ಉಚಿತ ವಿದ್ಯುತ್! ನೀಡುತ್ತಿರುವುದು ಚಿತ ಮೀಟರ್!

ಅಲ್ಲ ಹತ್ತು ಎಚ್.ಪಿ. ಪಂಪ್‌ಸೆಟ್‌ಗಳಿಗೆ ಉಚಿತ ದ್ಯುತ್ ಅಂತ ಚುನಾವಣಾ ಪ್ರಣಾಳಿಕೆಯಲ್ಲಿ ೀಪಿಸಿದ್ದರಲ್ಲಾ?

ಎಲ್ಲರಿಗೂ ಅಲ್ಲವಂತೆ! ವಾಣಿಜ್ಯ ಬೆಳೆಗೆ ಉಚಿತ ದ್ಯುತ್ ಇಲ್ಲವಂತೆ!

ಅಧಿಕಾರ ಹಸ್ತಾಂತರ ಮಾಡದೆ ಜಾತ್ಯತೀತ ದಳ ನಭ್ರಷ್ಟ ಆಗಿತ್ತು. ಉಚಿತ ವಿದ್ಯುತ್ ನೀಡುವುದಾಗಿ ? ಈಗ ಮಾತು ತಪ್ಪಿದ್ದು ವಚನಭ್ರಷ್ಟತೆ ಅಲ್ಲವೋ?

ಮಠಾಧೀಶರು ತುಟಿ ಬಿಚ್ಚಿಲ್ಲ!

ಪಾಪ ಮಠ ಮಾನ್ಯಗಳಿಗೆ ಹಣ ಹರಿಸುತ್ತೇನೆ ು ಬಹಿರಂಗವಾಗಿ ಘೋಷಿಸಿದ ಯಡಿಯೂರಪ್ಪ ದ್ಧ ದನಿ ಎತ್ತಿದರೆ ಎಲ್ಲಿ ಅದಕ್ಕೆ ಸಂಚಕಾರ ವುದೋ ಎಂಬ ಭಯ ಕಾಡುತ್ತಿರಬೇಕು! ಬಜೆಟ್ ದೇಶನದ ನಂತರ 'ಆಧ್ಯಾತ್ಮಿಕತೆ'ಮರಳಿ ಬಂದರೂ ೀತು!

ಕಳ್ಳ ಮನಸ್ಸು

ಣ್ಣೆರಡು ತಿಂಗಳಲ್ಲಿ ಕೋಮುಗಲಭೆ ನಡೆಯುತ್ತದೆ.

ಯಾರು ಮಾಡುವವರು?

ಮೂಲಭೂತವಾದಿಗಳು!

ಯಾಕೆ ನಡೆಯುತ್ತೆ?

ಪವಿತ್ರ ಅನುಸೂಯಾ ಯಾತ್ರೆಯನ್ನು ವಿರೋಧಿಸಿ.

ಅದ್ದರಿಂದ ಹಿಂದೂ ಬಾಂಧವರೇ ಎಚ್ಚರವಾಗಿರಿ! ಮೊದಲೇ ತಯಾರು ಮಾಡಿಕೊಳ್ಳಿ! ಭಾಜಪ ಳಿಸುವ ಈ ಕುತಂತ್ರದ ವಿರುದ್ಧ ಜಾಗೃತರಾಗಿರಿ!

ಯಾರು ಇದನ್ನು ಹೇಳಿದ್ದು?

ಸುದ್ದಿ ಕಣ್ಮಣಿ ಶೋಭಾ ಕರಂದ್ಲಾಜೆ!

ಹಾಗಾದರೆ ಏನಾಯಿತು? ಬಾಬಾಬುಡನ್‌ಗಿರಿಯಲ್ಲಿ ಕಸಿನಾರದಿಂದ ಗಲಭೆ ಖಾತರಿ!

ಹೇಗಿದೆ ಗೊಬೆಲ್ಸ್ ತಂತ್ರ? ■

ಮರೆಯುವ ಮುನ್ನ



■ ಪಿ. ಲಂಕೇಶ್ -ಸೆಪ್ಟೆಂಬರ್ 30, 1990

ರೊಟ್ಟಿಯಿಂದಲೇ ಅಲ್ಲ



"Not by bread alone" ಎಂಬ ಮಾತನ್ನು ಆಗಾಗ ಬಳಸುತ್ತೇವೆ; ಇದು ಬೈಬಲ್ ಮಾತು. "ಬ್ರೆಡ್ ಜೊತೆಗೆ ಬೆಣ್ಣೆಯೂ ಬೇಕು" "ಬ್ರೆಡ್ ದೊರೆತೊಡನೆ ಬೇರೆ ವ್ಯಸನ ಶುರುವಾಗುತ್ತವೆ" ಇತ್ಯಾದಿಯಾಗಿ ತಮಾಷೆ ಮಾಡುತ್ತೇವೆ. ಆದರೆ ಈ ಮಾತು ಇವತ್ತು ತನ್ನ ನಿಜವಾದ ಅರ್ಥಪೂರ್ಣತೆಯನ್ನು ತೆರೆದು ತೋರತೊಡಗಿದೆ. ಕೇರಳದಿಂದ ಅರಬ್ ದೇಶಗಳಿಗೆ ಜನ ಹೋದದ್ದು ಬ್ರೆಡ್‌ಗಾಗಿ, ಅಂದರೆ ಹಣಕ್ಕಾಗಿ. ಅಲ್ಲಿ ಎಷ್ಟೇ ಕಷ್ಟವಾದರೂ, ಅವಮಾನವಾದರೂ ಹಣ ಗಳಿಸುವುದು ಮುಖ್ಯವಾಯಿತು. ಹಣದ ಬಗ್ಗೆ ನಿರ್ಲಕ್ಷ್ಯ ನಟಿಸುತ್ತಲೇ ಅದನ್ನು ಆರಾಧಿಸುವ ನಮ್ಮ ಜನ ಇವತ್ತು "not by bread alone" ಎಂಬ ಮಾತನ್ನು ತಮ್ಮ ದಿವಾಳಿ, ಅವಮಾನದ ವೇಳೆಯಲ್ಲಿ ನೆನಪಿಸಿಕೊಳ್ಳುತ್ತಿದ್ದಾರೆ. ಕುವೈತ್‌ನ ಚರ್ಚ್‌ನ ಎದುರು, ಸಭೆಯ ಹೊರಗೆ ಹುಡುಗಿಯರನ್ನು ಸೆಳೆದೊಯ್ಯಲು ಶ್ರೀಮಂತ ಕುವೈತಿಯರು ನಿಂತಿರುತ್ತಾರೆಂದರೆ-ಎಷ್ಟು ಭೀಕರ! ಹಣದಷ್ಟೇ ಮುಖ್ಯ ಮಾನ, ಹಣದಷ್ಟೇ ಮುಖ್ಯ ಕಲೆ, ಹಣದಷ್ಟೇ ಮುಖ್ಯ ಆತ್ಮಗೌರವ ಎಂಬುದನ್ನು ಬೈಬಲ್ ಮಾತು ಮನವರಿಕೆ ಮಾಡಿಕೊಡುತ್ತಿದೆ.

ಕೇರಳ ಈ ಕುವೈತ್, ಅಬಿದುಬೈ, ಸೌದಿ ಅರೇಬಿಯಾ ಮುಂತಾದ ದೇಶಗಳಿಂದಾಗಿ ಅಲ್ಲೋಲಕಲ್ಲೋಲ ಅನುಭವಿಸಿತು. ಕೇರಳದ ನೆಮ್ಮದಿ ಮಾಯವಾಗಿ ಅರೇಬಿಯರ ಹಣ ಮನುಷ್ಯ ಮನಸ್ಸಿನಲ್ಲಿ ಕಳವಳ ಮೂಡಿಸಿತು. ಕಳೆದ ಇಪ್ಪತ್ತು ವರ್ಷದಲ್ಲಿ ಅಲ್ಲಿ ಆರೆಸ್ಸೆಸ್, ಜಮಾತೆಗಳೆಲ್ಲ ಬೆಳೆದವು. ದಕ್ಷಿಣ ಭಾರತದ ನಕ್ಷತ್ರದಂತಿದ್ದ ಕೇರಳ ಬರೀ 'ಬ್ರೆಡ್'ಗಾಗಿ ಕೈಚಾಚಿ ಅವಮಾನದ ದಿಗ್ಭ್ರಮೆ ಅನುಭವಿಸುವಂತಾಯಿತು.

ಒಬ್ಬಂಟಿತನದ ಮಾದರಿ



ನೀವು ಅತ್ಯಂತ ನೋವಿನ, ತೀವ್ರ ಒಬ್ಬಂಟಿತನ ಅನುಭವಿಸಿದ್ದೀರಾ? ಇದು ಒಂದು ಕತೆಗೆ ವಸ್ತುವಾಗಬಲ್ಲದು. ನಾನು ಅನುಭವಿಸಿದ್ದೇನೆ. ನನ್ನ ಗೆಳೆಯನೊಬ್ಬ ಮೊನ್ನೆ ತನ್ನ ಅನುಭವ ಹೇಳಿದ. ದುಷ್ಟರು ಕೆಲವರು ಅವನಿಗೆ ವೇಳೆ, ಸ್ಥಳ ತಿಳಿಸಿ ಅವನನ್ನು ಕೊಲ್ಲುವುದಾಗಿ ಹೇಳಿದ್ದರು. ಆ ಸ್ಥಳಕ್ಕೆ ಆ ವೇಳೆಯಲ್ಲಿ ಆತ ಹೋಗಲೇಬೇಕಾಗಿತ್ತು. ಪೊಲೀಸರಿಗೆ ಪತ್ರ ಬರೆದು, ಫೋನ್ ಮಾಡಿ ತಿಳಿಸಿದ. ನಾಳೆ ಹತ್ತೂವರೆಗೆ ಇಂಥ ಸ್ಥಳದಲ್ಲಿ ರಕ್ಷಣೆ ಕೊಡಿ ಎಂದು ಹೇಳಿದ. 'ಹತ್ತೂವರೆ' ಎಂದು ಬರೆದುಕೊಂಡರು, ಸ್ಥಳದ ಟಿಪ್ಪಣಿ ಮಾಡಿಕೊಂಡರು. ಮರುದಿನ ಹತ್ತೂವರೆಗೆ ಸರಿಯಾಗಿ ಅಲ್ಲಿಗೆ ಹೋದ. ಪೊಲೀಸರೂ ಇಲ್ಲ, ಯಾರೂ ಇಲ್ಲ. ದಿಗ್ಭ್ರಮೆಗೊಂಡು ಸುತ್ತ ನೋಡಿದ. ಜನ ಎಲ್ಲ ಜನರಂತೆಯೇ ಇದ್ದರು, ತಮ್ಮತಮ್ಮ ಕೆಲಸದಲ್ಲಿ ತೊಡಗಿದ್ದರು ಅಥವಾ ಓಡಾಡುತ್ತಿದ್ದರು. ಕ್ಷಣಗಳು ಈತನಿಗೆ ಭೀಕರವಾಗಿ ಕಂಡವು. ಅಲ್ಲಿ ಎರಡೇ ನಿಮಿಷ ಇದ್ದು ಓಡಿಹೋದ. ಪೊಲೀಸರನ್ನು ಸಂಪರ್ಕಿಸಿದ. ಪೊಲೀಸರನ್ನು ಕಳಿಸಿದ್ದುದಾಗಿ ಹೇಳಿದರು. ಆದರೆ ನಿಜವೇನೆಂದರೆ ಪೊಲೀಸರು ಕಾಲುಗಂಟೆ ತಡವಾಗಿ ಹೋಗಿದ್ದರು.

ಅಲ್ಲಿದ್ದ ಎರಡು ನಿಮಿಷ ಆತನ ತೀವ್ರ ಒಬ್ಬಂಟಿತನದ, ಅಸಹಾಯಕತೆಯ ನಿಮಿಷಗಳು, ಸಾವಿನ ದವಡೆಯಲ್ಲಿ ಇದ್ದಂತಹ ನಿಮಿಷಗಳು.


ವೇಳೆ, ಸ್ಥಳ, ಅಪಾಯ, ಸಾವು ಎಲ್ಲವೂ ಸೇರಿಕೊಂಡಿದ್ದ ನಿಮಿಷಗಳು.

ಕನ್ನಡಿಗರೇಕೆ ಹೀಗಿಲ್ಲ?

ಕನ್ನಡಿಗರು ಯಾಕೆ ಬಡವಾಗುತ್ತಾರೆ, ಅಸಹಾಯಕರಾಗುತ್ತಾರೆ? ಇಲ್ಲಿ ಹತ್ತು ವರ್ಷದ ಹಿಂದೆಯೇ ಅನೇಕ ವರ್ಣಗಳಲ್ಲಿ ಫೋಟೋಗಳನ್ನು ಅಚ್ಚುಮಾಡಬಲ್ಲ ಮುದ್ರಣಾಲಯಗಳಿದ್ದವು. ಆದರೆ ಇಲ್ಲಿ ಯಾರೂ ಅಚ್ಚು ಮಾಡಿಸುತ್ತಿರಲಿಲ್ಲ. ಹಾಕಿದ ದುಡ್ಡು ಒಂದೆರಡು ವರ್ಷದಲ್ಲೇ ಬರುವಂತೆ ಈ ಮುದ್ರಣಾಲಯದವರ ಮಜೂರಿ. ಅಷ್ಟು ಹಣ ಕೊಡಲಾಗದೆ ಗಿರಾಕಿಗಳು ಶಿವಕಾಶಿಗೆ ಹೋಗಿ ತಮ್ಮ ಪುಸ್ತಕ, ಫೋಟೋ, ಪತ್ರಿಕೆಗಳ ಮುಖಪುಟಗಳನ್ನು ಅಚ್ಚಿಸುತ್ತಿದ್ದರು. ಶಿವಕಾಶಿಯಲ್ಲಿ ವರ್ಣಮುದ್ರಣ ಅಗ್ಗ; ಅತ್ಯುತ್ತಮ ಮುದ್ರಣ ಕೂಡ. ಅಲ್ಲಿಯ ತಮಿಳರು ನಷ್ಟದಲ್ಲಿ ಅಚ್ಚಿಸುತ್ತಾರೆಯೇ? ಇಲ್ಲ. ದುರಾಸೆಯಿಂದ ಗಿರಾಕಿ ಬೆಚ್ಚಿಬೀಳಿಸುವ ಬೆಲೆ ಹೇಳುವುದಿಲ್ಲ; ಸಣ್ಣ ಲಾಭದಿಂದ ತೃಪ್ತರಾಗುತ್ತಾರೆ. ಅಸಂಖ್ಯ ಗಿರಾಕಿಗಳು ಬರುತ್ತಾರೆ. ನಾನು ಬಲ್ಲಂತೆ ಭಾರತದ ಪಟ್ಟಣಗಳಲ್ಲಿ ಶಿವಕಾಶಿಯಲ್ಲಿ ಮಾತ್ರ 'ಕೆಲಸಗಾರರು ಬೇಕಾಗಿದ್ದಾರೆ' ಎಂಬ ಫಲಕ ನೇತಾಡುತ್ತವೆ. ಅಲ್ಲಿ ಐನೂರು ರೂಪಾಯಿ ಪಡೆಯುವ ಕೆಲಸಗಾರ ಬೆಂಗಳೂರಲ್ಲಿ ಎಂಟುನೂರು ಕೊಟ್ಟರೂ ಬರುವುದಿಲ್ಲ; ಅಲ್ಲಿಯ ನೆಮ್ಮದಿ ಹಾಗಿದೆ.

ನಮ್ಮ ವ್ಯಾಪಾರಿಗಳ ಮೂರ್ಖತನವನ್ನು ನಾನು ಮೊನ್ನೆ ಖುದ್ದು ನೋಡಿದೆ. ನಮಗೆ ಹಣ ತುರ್ತಾಗಿ ಬೇಕಾಗಿದ್ದುದರಿಂದ ನಮ್ಮಲ್ಲಿಯ ಅಚ್ಚಿನ ಮೊಳೆಗಳನ್ನು ಮಾರುವುದು ಅನಿವಾರ್ಯವಾಗಿತ್ತು. ಈ ಅಚ್ಚಿನ ಮೊಳೆಗಳನ್ನು ನಮಗೆ ತಯಾರಿಸಿ ಕೊಟ್ಟವನನ್ನೇ ಕೇಳಿದೆ. ಅವನಲ್ಲಿ ಉತ್ಸಾಹವೇ ಇರಲಿಲ್ಲ. ಇನ್ನೂ ಕೆಲವರು ಹಣ ನಿಧಾನಕ್ಕೆ ಕೊಡುತ್ತೇವೆ ಅಂದರು. ಮತ್ತೆ ಕೆಲವರು ಸ್ವಲ್ಪ ಮಾತ್ರ ತೆಗೆದುಕೊಳ್ಳುತ್ತೇವೆ ಅಂದರು. ಆಗ ನನ್ನ ಪರಿಚಿತರನ್ನೆಲ್ಲ ಸಂಪರ್ಕಿಸಿದೆ. ಇಬ್ಬರು ತಮಿಳು ಹುಡುಗರು ಬಂದರು; ಕೆ.ಜಿ. ಮೊಳೆಗಳಿಗೆ ಈಗಿನ ಮಾರ್ಕೆಟ್ ಬೆಲೆ, ತಮಗೆ ದೊರೆಯುವ ಲಾಭ, ತಾವು ಹೂಡಿರುವ ಹಣ ಎಲ್ಲವನ್ನು ನಗುನಗುತ್ತ ಹೇಳಿಕೊಂಡರು. ಅವರು ನಾವು ಹೇಳಿದ ಬೆಲೆಗೆ ಒಪ್ಪಿ ಮೊಳೆಗಳ ತೂಕ ಮಾಡಿ ಹಣ ಕೊಟ್ಟರು. ಒಬ್ಬ ಮಣಿ, ಇನ್ನೊಬ್ಬ ಶ್ರೀಧರ್. ಕುತೂಹಲವಾಗಿ "ನಿಮಗೆ ಈ ವ್ಯಾಪಾರದಲ್ಲಿ ತಿಂಗಳಿಗೆ ಸರಾಸರಿ ಎಷ್ಟು ಹಣ ಉಳಿಯುತ್ತೆ?" ಅಂದೆ. ಇಬ್ಬರಿಗೆ ಒಟ್ಟು ಐದು ಸಾವಿರ ಉಳಿಯುವುದಾಗಿ ಹೇಳಿದರು.

ನಿನ್ನ ಜೀವ, ಇತರರ ಜೀವ



ಜಗತ್ತಿನ ನಾನಾ ಕಡೆ ಇದು ಕಂಡುಬರುತ್ತದೆ; ಇನ್ನೊಬ್ಬರ ಜೀವ, ಮಾನದ ಬಗ್ಗೆ ನಿರ್ಲಕ್ಷ್ಯ. ಇದನ್ನು ಕುರಿತು ದಕ್ಷಿಣ ಆಫ್ರಿಕಾದ ಕಾದಂಬರಿಕಾರನೊಬ್ಬ ಬರೆದಿದ್ದಾನೆ. ಕಾದಂಬರಿಕಾರನ ಹೆಸರು ಕೋಯೆಟ್ಸಿ, ಕಾದಂಬರಿಯ ಹೆಸರು 'ಏಜ್ ಆಫ್ ಐರನ್'. ವರ್ಣಭೇದದ ದಕ್ಷಿಣ ಆಫ್ರಿಕಾದಲ್ಲಿ ನಡೆದ ಕತೆ ಇದು, ಇಲ್ಲಿ ದಕ್ಷಿಣ ಆಫ್ರಿಕಾ ಸಂಕೇತ ಮಾತ್ರ. ಆಧುನಿಕ ಮಾನವನ ಮನಸ್ಸು ಕ್ರೂರವೂ ಅಮಾನವೀಯವೂ ಆಗುತ್ತಿರುವುದನ್ನು ಇದು ಸೂಚಿಸುತ್ತದೆ. ದಕ್ಷಿಣ ಆಫ್ರಿಕಾದ ಮುದುಕಿಯೊಬ್ಬಳು ಪ್ರೀತಿಗಾಗಿ, ನಂಬಿಕೆಗಾಗಿ ಹಂಬಲಿಸುತ್ತಾಳೆ. ಅದು ಅಲ್ಲಿ ಸಿಗುವಂತಿಲ್ಲ. ದೂರದ ದೇಶದ ಮಗಳೊಂದಿಗೆ ಸಂಪರ್ಕ ದೊರೆಯುತ್ತಿಲ್ಲ. ಹುಡುಗರು ಆಕೆಯ ಕಣ್ಣೆದುರಿಗೇ ಕೊಲ್ಲುತ್ತಾರೆ, ಹಿಂಸಿಸುತ್ತಾರೆ. ಕೊಲ್ಲಲ್ಪಡುತ್ತಾರೆ. ತನ್ನ ಜೀವ ಮತ್ತು ಮಾನದ ಬಗ್ಗೆ ಕಾಳಜಿ ಇಲ್ಲದ ಯಾವನೂ ಇತರರ ಜೀವ ಮತ್ತು ಮಾನವನ್ನು ಗೌರವಿಸಲಾರ. ಈ ಮುದುಕಿಗೆ ಕ್ಯಾನ್ಸರ್ ಬರುತ್ತದೆ. ಸಮಾಜದಲ್ಲಿನ ಕ್ರೌರ್ಯದ ಕ್ಯಾನ್ಸರ್ ಎಷ್ಟು ಅಪಾಯಕಾರಿ ಎಂಬುದು ಕಾದಂಬರಿಯ ಕೊನೆಯಲ್ಲಿ ಬರುತ್ತದೆ. ಮುದುಕಿ ದಾರಿಯಲ್ಲಿ ಕುಸಿದು ಸಾಯುತ್ತಾಳೆ. ಯಾರೂ ಆಕೆಗೆ ಏನಾಯಿತೆಂದು ಕುತೂಹಲಗೊಳ್ಳುವುದಿಲ್ಲ ಕೂಡ. ಬೀದಿಯ ಪಡ್ಡೆ ಮಕ್ಕಳು ಆಕೆಯ ಶವವನ್ನು ಚಿಲ್ಲರೆ ಹಣಕ್ಕಾಗಿ, ಚಿನ್ನದ ಹಲ್ಲಿಗಾಗಿ ಹೆಕ್ಕತೊಡಗುತ್ತಾರೆ.... ಮನುಷ್ಯ ಕ್ರೂರವಾದಾಗ ಅವನಿಗೆ ಹಣ, ಲಾಭ ಬಿಟ್ಟು ಬೇರೆ ಉದ್ದೇಶವೇ ಇರುವುದಿಲ್ಲ.

ಸಾನೆಟ್

(ಒನ್ ಹಂಡ್ರೆಡ್ ಲವ್ ಸಾನೆಟ್ಸ್ ಕೃತಿಯಿಂದ)



ನನ್ನೊಲವೆ, ಊರೂರ ಅಲೆದಾಟದಿಂದ, ದುಃಖದ ಸೆಳವಿನಿಂದ ನಾನು
ನಿನ್ನ ದನಿಯೆಡೆಗೆ, ಗಿಟಾರಿನ ಮೇಲೆ ರೆಕ್ಕೆ ಬಡಿವ ನಿನ್ನ ಕೈಯೆಡೆಗೆ ಮರಳಿ ಬಂದೆ.
ಮುತ್ತುಗಳನಿಕ್ಕುತ್ತ ಚುಮುಚುಮು ಚಳಿಯ ಧ್ಯಾನಕ್ಕೆ ಭಂಗ ತರುವ ಬೆಂಕಿಯೆಡೆಗೆ
ಆಕಾಶದ ಸುತ್ತಸುತ್ತುವ ರಾತ್ರಿಯೆಡೆಗೆ ಮರಳಿ ಬಂದೆ.

ಎಲ್ಲರಿಗೂ ತಿನ್ನಲು ತುಣುಕು ರೊಟ್ಟಿಯಿರಲಿ, ಸುಖಿಸಲು ಒಂದಿಷ್ಟು ಅಧಿಕಾರವಿರಲಿ;
ನಾಳೆಗಳ ಕನಸೇ ಇಲ್ಲದ ಕೆಲಸಗಾರನಿಗೆ ಒಂದಿಷ್ಟು ಭೂಮಿಯಿರಲಿ.
ನನ್ನ ರಕ್ತ, ನನ್ನ ಹಾಡು ಒಂದರೆಗಳಿಗೆ ಸುಧಾರಿಸಿಕೊಳ್ಳಲಿ ಎಂದು ಯಾರೂ ನಿರೀಕ್ಷಿಸಬೇಡಿ!
ಆದರೆ ಸಾಯದ ಹೊರತು ನಾನು ಮಾತ್ರ ನಿನ್ನ ಪ್ರೀತಿಯ ಮರೆಯಲಾರೆ.

ಹಾಗಾಗಿ; ನಿರುಮ್ಮಳ ಚಂದಿರನ ಗೀತೆಯೊಂದ ನುಡಿಸು,
ಭಾವ ಜಿನುಗುವ ಗಿಟಾರಿನಲಿ ದೋಣಿಯ ಹಾಡೊಂದ ತೇಲಿಬಿಡು,
ನನ್ನ ತಲೆ ಕನಸಿನಲಿ ತೇಲುತ್ತ ಜೋಲುವವರೆಗೆ:

ನನ್ನ ಬದುಕಿನ ನಿದ್ರೆಯಿಲ್ಲದ ಗಳಿಗೆಗಳು ಹೆಣೆದುಕೊಂಡಿವೆ
ಈ ಮಟ್ಟಗೂಡನ್ನು ನಿನ್ನ ಕೈ ಮಿಡಿಯುವ, ರೆಕ್ಕೆಬಿಚ್ಚುವ ದಟ್ಟ ತೋಪಿನಿಲ್ಲಿ,
ನಿದ್ರೆಯೆಡೆಗೆ ನಡೆಯುವ ಯಾತ್ರಿಕನ ರಾತ್ರಿಯೊಂದನ್ನು ಕಾಯುತ್ತ.

ಮೂಲ: ಪಾಬ್ಲೊ ನೆರೂಡ

■ ಅನುವಾದ: ಜ.ನಾ. ತೇಜಶ್ರೀ

ನಶ್ವರತೆ

ಜೀನಿಐ ಕತೆ

ಮಠದಲ್ಲಿ ಅಗತ್ಯಕ್ಕಿಂತಲೂ ಹೆಚ್ಚುದಿನ ತಂಗುವವರ ಬಗ್ಗೆ ಗುರುಗಳಿಗೆ ಅಸಹಿಷ್ಣುತೆ ಇತ್ತು. ಆದ್ದರಿಂದ ಅಂತಹವರಿಗೆ ಒಂದಲ್ಲಾ ಒಂದು ದಿನ "ನೀವು ಇಲ್ಲಿಂದ ಹೊರಡುವ ಕಾಲ ಬಂದಿದೆ. ನೀವು ಇಲ್ಲೇ ಉಳಿದರೆ ನಿಮ್ಮ ಆತ್ಮಕ್ಕೆ ಚೇತನ ಸಿಗುವುದಿಲ್ಲ" ಎಂದು ಹೇಳುತ್ತಿದ್ದರು.

ಆದರೆ ಮಠದಲ್ಲೇ ಉಳಿಯಬೇಕೆಂಬ ಆಸೆ ಹೊಂದಿದ್ದ ಶಿಷ್ಯನೊಬ್ಬ ಈ 'ಚೇತನ' ಅಂದರೆ ಏನೆಂದು ಒಂದು ದಿನ ಗುರುಗಳನ್ನು ಕೇಳಿದ.


ಆಗ ಗುರುಗಳು ಹೇಳಿದರು:

"ನೀರು ಪ್ರಹರಿಸುವುದರಿಂದಲೇ ಅದು ಜೀವಂತವಾಗಿಯೂ ಸ್ವತಂತ್ರವಾಗಿಯೂ ಉಳಿಯುವುದು.

ನೀನು ಇಲ್ಲಿಂದ ಹೋಗುವುದರಿಂದಲೇ ನೀನು ಜೀವಂತವಾಗಿಯೂ ಸ್ವತಂತ್ರವಾಗಿಯೂ ಉಳಿಯುತ್ತೀಯಾ.


ಆದರೆ ನೀನು ಹೋಗದೇ ಇಲ್ಲೇ ನನ್ನೊಂದಿಗೆ ಉಳಿದುಕೊಂಡರೆ

ನೀನು ಜಡವಾಗಿ ಸತ್ತು ಕೊಳೆತು ಹೋಗುತ್ತೀಯಾ."




ಪ್ರಕ್ಷುಬ್ಧ ಕಾಶ್ಮೀರ ಚೆನ್ನಾಗಿತ್ತು

ಅಮೆರಿಕವು ತನಗೆ ಲಾಭವಿಲ್ಲದೆ ಏನನ್ನೂ ಬಿಟ್ಟಿಯಾಗಿ ಕೊಡುವುದಿಲ್ಲವೆಂಬ ಗೌರಿ ಅವರ ಅಭಿಪ್ರಾಯ ಅಕ್ಷರಶಃ ಸತ್ಯ. ಭಾರತಕ್ಕೆ ಎಳ್ಳಷ್ಟೂ ಪ್ರಯೋಜನವಿಲ್ಲದ, ಕೇವಲ ಅಣು ರಿಯಾಕ್ಟರುಗಳನ್ನು ತಯಾರಿಸುವ ಅಮೆರಿಕದ ಕಂಪೆನಿಗಳ ಉದ್ಧಾರಕ್ಕಾಗಿ ಮಾತ್ರ ಈ ಯೋಜನೆ. ಅಮೆರಿಕದೊಂದಿಗಿನ ಈ ಅಣು ಒಪ್ಪಂದಕ್ಕೆ ಭಾರತವು ಸಹಿ ಹಾಕಿದಲ್ಲಿ ನಮ್ಮ ದೇಶವು ಅಣುಶಕ್ತಿ ಉತ್ಪಾದನಾ ಕ್ಷೇತ್ರದಲ್ಲಿ ಇಲ್ಲಿಯವರೆಗೂ ಕಾಪಾಡಿಕೊಂಡು ಬಂದಿರುವ ಸ್ವಾತಂತ್ರ್ಯ, ಸ್ವಾವಲಂಬನೆಯನ್ನು ಕಳೆದುಕೊಂಡು, ನಾವು ಅಮೆರಿಕದ ಗುಲಾಮರಾಗಬೇಕಾಗುತ್ತದೆ. ಈ ಗುಲಾಮಗಿರಿ ನಮಗೆ ಬೇಡ.



ಗೋಮುಖ ವ್ಯಾಘ್ರ ಅಮೆರಿಕವು, ದಾನಶೂರ ಕರ್ಣನಂತೆ ನಮಗಿಂದು ಅಣುಶಕ್ತಿ ಉತ್ಪಾದಿಸಲು ತಂತ್ರಜ್ಞಾನ ಮತ್ತು ಕಚ್ಚಾವಸ್ತುವನ್ನು (ಪುಕ್ಕಟೆಯಾಗಂತೂ ಅಲ್ಲ!) ಕೊಡಲು ಮುಂದಾಗಿರುವುದಕ್ಕೆ ಪ್ರಮುಖ ಕಾರಣ, ಉದ್ದೇಶಿತ ಇರಾನ್, ಪಾಕಿಸ್ತಾನ ಮತ್ತು ಭಾರತದ ನಡುವಿನ ನೈಸರ್ಗಿಕ ಅನಿಲ ಸಾಗಾಣಿಕೆ ಕೊಳವೆ ಮಾರ್ಗ ಯೋಜನೆಯನ್ನು ತಡೆಯುವುದೇ ಆಗಿದೆ.



ಈ ಪೈಪ್‌ಲೈನ್ ಯೋಜನೆಯಿಂದ ಈ ಮೂರು ದೇಶಗಳಿಗೆ ಲಾಭವಾಗುವುದಲ್ಲದೇ ಈ ಮೂರೂ ದೇಶಗಳು ಭಾವನಾತ್ಮಕವಾಗಿ ಇನ್ನಷ್ಟು ಹತ್ತಿರಕ್ಕೆ ಬರುತ್ತವೆ. ಆಗ ಈ ಪ್ರದೇಶದಲ್ಲಿ ಅಮೆರಿಕದ ಬೇಳೆ ಬೇಯುವುದಿಲ್ಲ, ಅದಕ್ಕೆ ಅಮೆರಿಕ ಕೊಡುಗೈ ದಾನಿಯಂತೆ ಕಪಟ ನಾಟಕವಾಡುತ್ತಿದೆ. ಜನಸಾಮಾನ್ಯರಿಗೆ ಅರ್ಥವಾಗುತ್ತಿರುವ ಅಮೆರಿಕದ ಈ ಕಪಟನಾಟಕ ನಮ್ಮ ದೇಶದ ಮಹಾನ್ ಮುತ್ಸದ್ದಿಗಳಿಗೆ, ಲಾಭಬಡುಕ ರಾಜಕಾರಣಿಗಳಿಗೆ ಮತ್ತು ನಮ್ಮನ್ನಾಳುತ್ತಿರುವ ಮೂರ್ಖ ಶಿಖಾಮಣಿಗಳಿಗೆ ತಿಳಿಯದಿರುವುದು ಈ ದೇಶದ ದುರಂತ.

ಇರಾನ್-ಪಾಕಿಸ್ತಾನ-ಭಾರತ ನಡುವಿನ ನೈಸರ್ಗಿಕ ಅನಿಲ ಸಾಗಾಣಿಕೆ ಕೊಳವೆ ಮಾರ್ಗದ ಯೋಜನೆ ಬಗ್ಗೆ ಇತ್ತೀಚೆಗೆ ಭಾರತ ಅನಾಸಕ್ತಿಯನ್ನು ತೋರುತ್ತಿರುವುದನ್ನು ಗಮನಿಸಿದ ಚೀನಾ ದೇಶ ಈ ಯೋಜನೆಯ ಲಾಭವನ್ನು ಪಡೆಯಲು ಉತ್ಸುಕತೆ ತೋರುತ್ತಿದೆ. ಈ ಕೊಳವೆ ಮಾರ್ಗದ ಯೋಜನೆಯೇನಾದರೂ ಭಾರತದ ಕೈತಪ್ಪಿ ಹೋದರೆ, ಇದರಿಂದ ಬಹುದೊಡ್ಡ ನಷ್ಟವಾಗುವುದು ಭಾರತ ದೇಶಕ್ಕೇ ಹೊರತು, ಅಮೆರಿಕ, ಇರಾನ್ ಮತ್ತು ಪಾಕಿಸ್ತಾನಗಳಿಗಲ್ಲ.

ಪತ್ರಿಕೆಯಲ್ಲಿ ಪ್ರಕಟವಾದ ನಗರಗೆರೆ ರಮೇಶ್‌ರವರ 'ಪ್ರಕ್ಷುಬ್ಧ ಕಾಶ್ಮೀರ', ಕಾಶ್ಮೀರಿಗಳ ನೋವನ್ನು ಕನ್ನಡಿಗರಿಗೆ ಸ್ವಲ್ಪವಾದರೂ ತಿಳಿಸುವಲ್ಲಿ ನೆರವಾಗಿದೆ. ಇದಕ್ಕಾಗಿ ನಿಮಗೆ ಮತ್ತು ನ. ರಮೇಶ್‌ರವರಿಗೆ ಧನ್ಯವಾದಗಳು.

ಇಮಾಮ್‌ಸಾಬಿಗೂ ಗೋಕುಲಾಷ್ಟಮಿಗೂ ಏನು ಸಂಬಂಧ ಎಂಬಂತೆ ಕಾಶ್ಮೀರಕ್ಕೂ ಕನ್ನಡಿಗರಿಗೂ ಏನು ಸಂಬಂಧ, ಕಾಶ್ಮೀರದಲ್ಲಿ ಏನೇ ನಡೆದರೂ ಅದು ಅವರ ಹಣೆಬರಹವೇ ಹೊರತು ನಮ್ಮದಲ್ಲ ಎಂಬಂತಹ ನಿರ್ಲಿಪ್ತ ಮನೋಭಾವವನ್ನು ನಾವು ತಾಳಬಾರದು. ಅನ್ಯಾಯ ಎಲ್ಲೇ ನಡೆಯಲಿ ನಾವದನ್ನು ಖಂಡಿಸಬೇಕು.

ಸೈನ್ಯವನ್ನು ಆಂತರಿಕ ವ್ಯವಹಾರಗಳಲ್ಲಿ ಹೆಚ್ಚುಕಾಲ ಬಳಸುವುದರಿಂದ ಆಗುವ ಅನಾಹುತಗಳೆಲ್ಲವೂ ಕಾಶ್ಮೀರದಲ್ಲಿ ಮತ್ತು ಬಹುತೇಕ ಈಶಾನ್ಯ ರಾಜ್ಯಗಳಲ್ಲಿ ಆಗಿವೆ ಮತ್ತು ಈಗಲೂ ಆಗುತ್ತಿವೆ. ಈ ಅನಾಹುತಗಳಲ್ಲಿ ಪ್ರಮುಖವಾದವುಗಳು ಮಹಿಳೆಯರ ಮೇಲಿನ ಅತ್ಯಾಚಾರ ಮತ್ತು ಅಮಾಯಕರ ಮಾರಣಹೋಮ. ಕಳೆದ ನಾಲ್ಕು ದಶಕಗಳಿಂದಲೂ ಬಂಡುಕೋರರನ್ನು ಸದೆಬಡಿಯುವ ಉದ್ದೇಶದಿಂದ ಸೈನ್ಯಕ್ಕೆ ವಿಶೇಷಾಧಿಕಾರವನ್ನು ನೀಡಿರುವ ಮಣಿಪುರ ರಾಜ್ಯದಲ್ಲಿ, ಸೈನ್ಯದ ದಬ್ಬಾಳಿಕೆ, ದೌರ್ಜನ್ಯ ಮತ್ತು ದುರಾಚಾರದಿಂದ ರೋಸಿಹೋದ ಅಲ್ಲಿನ ಮಹಿಳೆಯರು, ಆಗಸ್ಟ್ 2004ರಲ್ಲಿ ಸಂಪೂರ್ಣ ಬೆತ್ತಲೆಯಾಗಿ 'Indian Army Rape Us' ಎಂಬ ಬ್ಯಾನರ್ ಹಿಡಿದು ಪ್ರತಿಭಟಿಸಿದ್ದರು. ನಾಗರಿಕ ಸಮಾಜವೇ ನಾಚಿ ತಲೆತಗ್ಗಿಸುವಂತಹ ಈ ದುರ್ಘಟನೆ ನಡೆದ ನಂತರವೂ, ಅಲ್ಲಿನ ಜನರ ಸಮಸ್ಯೆ ಬಗೆಹರಿದಿಲ್ಲ. ಬಂದೂಕಿನ ಬಲದಿಂದ ನಾವು ಬರಡು ನೆಲವನ್ನಷ್ಟೇ ಕಾಯ್ದುಕೊಳ್ಳಬಹುದು. ಜನತೆಯ ಸಂಪದ್ಭರಿತವಾದ ಮನಸ್ಸು ಮತ್ತು ಹೃದಯಗಳನ್ನು ನಾವು ಪ್ರೀತಿ ಮತ್ತು ವಿಶ್ವಾಸದಿಂದ ಮಾತ್ರ ಗೆಲ್ಲಲು ಸಾಧ್ಯ.



-ಎಸ್.ಎಸ್. ವೆಂಕಟೇಶ್, ಬೆಂಗಳೂರು



ಜಗತ್ತಿನ ಆಹಾರ ಕೊರತೆಗೆ ಭಾರತವೇ ಕಾರಣವೆಂದು ಅಮೆರಿಕಾದ ಅಧ್ಯಕ್ಷ ಜಾರ್ಜ್ ಬುಷ್ ದೂರಿದ.

ತೈಲ ಬೆಲೆ ಏರಿಕೆಗೂ ಭಾರತವೇ ಕಾರಣ ಎಂದು ಆರೋಪಿಸಿದ.

ದೇವರ ದಯ, ಆತನ ಹೆಂಡತಿ ಲಾರಾ ಬುಷ್ ಗರ್ಭಿಣಿಯಾಗಿಲ್ಲ....!



ಗಂಡ: ನನ್ನ ಸ್ನೇಹಿತ ಹೇಳಿದ, ನಮ್ಮ ಅಪಾರ್ಟ್‌ಮೆಂಟ್ ಕಟ್ಟಡದಲ್ಲಿರುವ ಒಬ್ಬಳ ಹೊರತಾಗಿ ಆತ ಇತರೆ ಎಲ್ಲಾ ಮಹಿಳೆಯರನ್ನು ಪ್ರೇಮಿಸಿದ್ದಾನಂತೆ.

ಹೆಂಡತಿ: ಆಕೆ ನಾಲ್ಕನೆ ಮಹಡಿಯಲ್ಲಿರುವ ನೇಹಾ ಇರಬೇಕು. ಆಕೆ ತುಂಬಾ ಸಂಪ್ರದಾಯಸ್ಥ ಮಹಿಳೆ.

ಯೋಧ ಮತ್ತು ಜೋಭದ್ರಗೇಡಿ ನಾಯಕರು



ಸ್ವತಂತ್ರ ಭಾರತದ ಮೊತ್ತ ಮೊದಲ ಫೀಲ್ಡ್ ಮಾರ್ಷಲ್, 1971 ರ ಬಾಂಗ್ಲಾ ಯುದ್ಧದ ಹೀರೋ ಸ್ಯಾಮ್ ಮಾಣೆಕ್‌ಶಾರವರು ಇತ್ತೀಚೆಗೆ ನಿಧನ ಹೊಂದಿದಾಗ ದೇಶದ ಗಣ್ಯಾತಿಗಣ್ಯರು ಅವರ ಕೊಡುಗೆಯನ್ನು ಪತ್ರಿಕಾ ಹೇಳಿಕೆಗಳ ಮೂಲಕ ಕೊಂಡಾಡಿದರು. ಆದರೆ ಅವರಲ್ಲೆಷ್ಟು ಜನ ಈ ಯೋಧನ ಅಂತ್ಯಸಂಸ್ಕಾರಕ್ಕೆ ಹಾಜರಾಗಿ ತಮ್ಮ ನಮನವನ್ನು ಸಲ್ಲಿಸಿದರು ಎಂದು ನೋಡಿದರೆ ಅಚ್ಚರಿಯಾಗುತ್ತದೆ. ಇಲ್ಲಿನ ಪಟ್ಟಿಯನ್ನೇ ನೋಡಿ:

* ಪ್ರತಿಭಾ ಪಾಟೀಲ್(ಭಾರತೀಯ ಸೈನ್ಯದ ಕಮ್ಯಾಂಡರ್ ಇನ್ ಚೀಫ್ ಹುದ್ದೆಯನ್ನು ಅಲಂಕರಿಸಿರುವ ಮತ್ತು ಮಾಡಲು ಅಷ್ಟೇನು ಕೆಲಸ ಇಲ್ಲದಿರುವವರು) ಗೈರುಹಾಜರಿ
* ಹಮೀದ್ ಅನ್ಸಾರಿ(ಉಪರಾಷ್ಟ್ರಪತಿಯಾದ ಇವರು ಹೆಚ್ಚು ಸಮಯವನ್ನು ಕಳೆಯುವುದು ಪುಸ್ತಕ ಬಿಡುಗಡೆ ಕಾರ್ಯಕ್ರಮಗಳಲ್ಲಿ ಮತ್ತು ತಮ್ಮ ಬಳಗದವರ ಪುಸ್ತಕಗಳನ್ನು ವಿಮರ್ಶಿಸುವುದರಲ್ಲಿ): ಗೈರುಹಾಜರಿ
* ಮನಮೋಹನ್ ಸಿಂಗ್(ಪ್ರಧಾನ ಮಂತ್ರಿ): ಗೈರುಹಾಜರಿ
* ಎಲ್.ಕೆ. ಅಡ್ವಾಣಿ (ಭಾವಿ ಪ್ರಧಾನಿ ಎಂದೇ ಚೆಡ್ಡಿಗಳು ಭಾವಿಸಿರುವ ಮತ್ತು ಹಿಂದೊಮ್ಮೆ ಪಾಕಿಸ್ತಾನಕ್ಕೆ ಮಾಣೆಕ್‌ಶಾರವರು ಮುಖಭಂಗ ಮಾಡಿದಂತೆ ಈಗ ತಾನೂ ಮಾಡಲು ಇಷ್ಟಪಡುವ ವ್ಯಕ್ತಿ): ಗೈರು ಹಾಜರಿ
* ಎ.ಕೆ. ಆಂಟೋಣಿ(ರಕ್ಷಣಾ ಸಚಿವ) : ಗೈರು ಹಾಜರಿ
* ಎಂ. ಕರುಣಾನಿಧಿ(ಕಳೆದ 35 ವರ್ಷಗಳಿಂದ ಮಾಣೆಕ್‌ಶಾ ವಾಸವಿದ್ದ ತಮಿಳುನಾಡಿನ ಮುಖ್ಯಮಂತ್ರಿ): ಗೈರುಹಾಜರಿ
* ಸುರ್ಜಿತ್ ಸಿಂಗ್ ಬರ್ನಾಲ (ತಮಿಳುನಾಡಿನ ರಾಜ್ಯಪಾಲ ಮತ್ತು ಅಷ್ಟೇನು ಕೆಲಸ ಇಲ್ಲದಿರುವ ವ್ಯಕ್ತಿ): ಗೈರುಹಾಜರಿ
* ಭಾರತೀಯ ಸೈನ್ಯದ ಮುಖ್ಯಸ್ಥ

  ಭಾರತೀಯ ನೌಕಾಪಡೆಯ ಮುಖ್ಯಸ್ಥ ಸುರೇಶ ಮೆಹ್ತಾ: ಗೈರುಹಾಜರಿ
* ಭಾರತೀಯ ವಾಯುದಳದ ಮುಖ್ಯಸ್ಥ ಫಾಲಿ ಹೋಮಿ ಮೇಜರ್: ಗೈರುಹಾಜರಿ

ಇವರ್‍ಯಾರೂ ಮಾಣೆಕ್‌ಶಾರವರ ಅಂತ್ಯಸಂಸ್ಕಾರಗಳಿಗೆ ಹಾಜರಾಗಲಿಲ್ಲ ಎಂದರೆ ಏನರ್ಥ? ಇಷ್ಟೇ: ಮುಂದೆ ಯಾರೇ ಗಣ್ಯರು ತೀರಿಕೊಂಡರೆ ಅವರು ನವದೆಹಲಿ ಅಥವಾ ಮುಂಬೈಯಲ್ಲಿ ಮಾತ್ರ ಮೃತಪಡುವಂತೆ ಎಚ್ಚರ ವಹಿಸಬೇಕು. ಹಾಗಾದರೆ ಮಾತ್ರ ಈ ರಾಷ್ಟ್ರದ ಗಣ್ಯಾತಿಗಣ್ಯರು ಹಾಜರಾಗುತ್ತಾರೆ.

ಅಂದಹಾಗೆ ಮಾಣೆಕ್‌ಶಾರವರ ಅಂತ್ಯಸಂಸ್ಕಾರಕ್ಕೆ ಹಾಜರಾಗಲು ಪುರಸೊತ್ತಿಲ್ಲದ 'ಭಾವಿ ಪ್ರಧಾನಿ' ಎಲ್.ಕೆ. ಅಡ್ವಾಣಿ ಈ ಹಿಂದೆ ಹೇಗೆ ವರ್ತಿಸಿದ್ದರು ಗೊತ್ತಾ? ಆಗ ತಾವು ಗುಜರಾತಿನಲ್ಲಿ ಅದ್ಯಾವುದೋ 'ದಂಡ' ಯಾತ್ರೆಯಲ್ಲಿ ತಲ್ಲೀನರಾಗಿದ್ದರೂ ಧೀರುಭಾಯಿ ಅಂಬಾನಿ ಎಂಬ ನಟೋರಿಯಸ್ ಉದ್ಯಮಿ ತೀರಿಕೊಂಡಾಗ ಆತನಿಗೆ ಅಂತಿಮ ನಮನ ಸಲ್ಲಿಸಲು ಇದೇ ಅಡ್ವಾಣಿ ಎದ್ದುಬಿದ್ದು ಓಡಿಬಂದಿದ್ದರು. "ಅಂಬಾನಿ ಈ ದೇಶ ಕಂಡ ಅತ್ಯುತ್ತಮ ಉದ್ಯಮಿ. ದಿಟ್ಟತನಕ್ಕೆ, ಸಾಹಸಕ್ಕೆ ಮತ್ತು ಸಾಮರ್ಥ್ಯಕ್ಕೆ ಸಂಕೇತ" ಎಂದು ಕಣ್ಣೀರಿಟ್ಟಿದ್ದರು.


ಹಾಗೆಯೇ, ಪ್ರಮೋದ್ ಮಹಾಜನ್ ಎಂಬ ಚೆಡ್ಡಿ ಚತುರನನ್ನು ಆತನ ಸಹೋದರನೇ ಕೊಂದು ಹಾಕಿದಾಗ, ಮಾಜಿ ಪೊಲೀಸ್ ಪೇದೆ ಆಗಿದ್ದ, ಚಿಲ್ಲರೆ ಲಂಚ ಪಡೆದು ಅಮಾನತ್ತುಗೊಂಡಿದ್ದ ಆದರೂ ಆತ ಚೆಡ್ಡಿ ಎಂಬ ಕಾರಣಕ್ಕೆ ನಮ್ಮ ದೇಶದ ಉಪರಾಷ್ಟ್ರಪತಿ ಸ್ಥಾನಕ್ಕೆ ಏರಿದ್ದ ಭೈರೋನ್ ಸಿಂಗ್ ಶೇಖಾವತ್ ಓಡೋಡಿ ಬಂದು ಪ್ರಮೋದ್‌ನ ಅಂತ್ಯ ಸಂಸ್ಕಾರದಲ್ಲಿ ಭಾಗವಹಿಸಿದ್ದ!

ಇಂತಹ ಜೋಭದ್ರಗೇಡಿ ನಾಯಕರಿರುವ ದೇಶದಲ್ಲಿ ಸ್ಯಾಮ್ ಮಾಣೆಕ್‌ಶಾನಂತಹ ಧೀರರಿಗೆ ಮರ್ಯಾದೆ ಸಿಗುವುದಾದರೂ ಹೇಗೆ?

ಮುಂದಿನ ವಾರ ಮತ್ತೊಬ್ಬ ಯಶಸ್ವಿ ನಿರ್ದೇಶಕನ ಅಸಲಿ ಹಣೆಬರಹ ...ತ್ತಾಗಲಿದೆ.

...ಹೌದು, 'ಸೈನೆಡ್' ಖ್ಯಾತಿಯ ಎ.ಎಂ.ಆರ್. ರಮೇಶ್ ನಿರ್ದೇಶನದ ...ಂಚಿನ ಓಟ' ಬರುವ 10ನೇ ತಾರೀಖು ರಿಲೀಸ್ ಆಗುತ್ತಿದೆ. ಈ ...ಗೆದ್ದರೆ ರಮೇಶ್‌ರವರಲ್ಲಿ ನಿಜವಾಗಲೂ ಪ್ರತಿಭೆ ಇದೆಯೇ ಎಂಬುದು ...ಬೀತಾಗುತ್ತದಲ್ಲದೆ, ಈ ಚಿತ್ರದಿಂದ ವಿಜಯರಾಘವೇಂದ್ರ ಮತ್ತು ...ಮುರಳಿ ಎಂಬ ಆರಕ್ಕೇರದ, ಮೂರಕ್ಕಿಳಿಯದ ಸಹೋದರರ ವೃತ್ತಿ ...ವನಕ್ಕೆ ಮರುಜನ್ಮ ಸಿಗುತ್ತದೆ.

...ಸ್ಟೇ ಅಲ್ಲ, ಈ ಚಿತ್ರಕ್ಕೆಂದು ...ರ್ಮಾಪಕ ಸಾರಾ ಗೋವಿಂದು ...ರಿದಿರುವ ಮೂರೂವರೆ ...ಟಿ ರೂಪಾಯಿಗಳು ವ್ಯರ್ಥ ...ಗುವುದಿಲ್ಲ.



ಮಿಂಚುವುದೇ ಓಟ?

ಈ ಚಿತ್ರದ ನಿರ್ದೇಶಕ ...ತ್ತು ನಾಯಕ ನಟರು ಇಲ್ಲಿಯ ...ಕ ಗೆಲುವು ಮತ್ತು ಸೋಲು ...! ನಡುವೆಯೇ ಸಾಗುತ್ತಾ ...ದ್ದಿದ್ದಾರೆ. ರಮೇಶ್ ನಿರ್ದೇಶಿ... ಮೊದಲ ಸಿನಿಮಾ ...ತೋಷ' ಚಿತ್ರಕಥೆಗಾಗಿ ರಾಜ್ಯ ...ಶಸ್ತಿಯನ್ನು ಗಳಿಸಿತಾದರೂ ...ಕ್ಸಾಫೀಸಿನಲ್ಲಿ ಇನ್ನಿಲ್ಲದಂತೆ ...ಕಚ್ಚಿತ್ತು. ಅದಾದನಂತರ ಬಂದ ...ನೆಡ್' ಚಿತ್ರ ರಮೇಶರವರಲ್ಲಿ ...ತಿಭೆ ಇದೆ ಎಂದು ತೋರಿಸಿತ್ತು. ...ಮುರಾಮನ್ ರತ್ನವೇಲುರವರ ತಾಂತ್ರಿಕ ಕೌಶಲ್ಯಕ್ಕಾಗಿಯೂ ಈ ಚಿತ್ರ ...ರ ಮೆಚ್ಚುಗೆ ಪಡೆದಿತ್ತು. 'ಸೈನೆಡ್' ದೊಡ್ಡ ಮಟ್ಟದಲ್ಲಿ ಲಾಭ ...ಸಲಿಲ್ಲದಿದ್ದರೂ ಹೂಡಿದ ಹಣಕ್ಕಂತೂ ಮೋಸವಾಗಿರಲಿಲ್ಲ.

...ಸೈನೆಡ್ ಭಿನ್ನವಾದ ಸಿನಿಮಾ ಅನಿಸಿಕೊಂಡಿದ್ದೇನೋ ನಿಜ. ಆದರೆ ...ಧಿನಗರ ರಮೇಶ್‌ರನ್ನು ಕಮರ್ಷಿಯಲ್ ನಿರ್ದೇಶಕ ಎಂದು ಒಪ್ಪಲಿಲ್ಲ. ... ಮಾತನ್ನು ಸುಳ್ಳು ಮಾಡುವ ಏಕೈಕ ಉದ್ದೇಶದಿಂದ ರಮೇಶ್ ...ಂಚಿನ ಓಟ'ಕ್ಕೆ ಕೈಹಾಕಿದರು.

ಇದೆಂಥಾ ಓಟ?

...ಬೆಂಗಳೂರಿನ ಸ್ಲಂ ಒಂದರಲ್ಲಿ ನಡೆಯುವ ಘಟನೆಯೊಂದರ ಎಳೆ ...ಂಗಳೂರಿನವರೆಗೆ ಸಾಗುವುದೇ ಚಿತ್ರದ ಕಥಾವಸ್ತು. ಈ ಓಟದ ...ಯ ಓಘಕ್ಕೆ ತಕ್ಕಂತೆ ಫ್ಯಾಮಿಲಿ ಸೆಂಟಿಮೆಂಟು, ಆಕ್ಷನ್, ಥ್ರಿಲ್ಲರ್‌ಗಳನ್ನು ... ಮಟ್ಟಿಗೆ ಬೆರೆಸಿದ್ದಾರಂತೆ ರಮೇಶ್. ಕಥೆ ಬೆಂಗಳೂರಿನಿಂದ ಮಂಗಳೂರಿಗೆ ...ಫ್ಟ್ ಆಗುತ್ತಿದ್ದಂತೇ ಅಲ್ಲಿನ ಪಾತ್ರಧಾರಿಗಳೂ ಮಂಗಳೂರು ಮೂಲದ ...ವಿದರೇ ಆಗಿರುವುದು ಮತ್ತು ನಾಯಕಿಗೇ ಯಕ್ಷಗಾನದ ವೇಷ ...ಡಿಸಿರುವುದು 'ಓಟ'ದ ಮತ್ತೊಂದು ಇಂಟರೆಸ್ಟಿಂಗ್ ಅಂಶವಂತೆ.

ಈ ಚಿತ್ರದಲ್ಲೂ ತಾಂತ್ರಿಕತೆಗೆ ರಮೇಶ ಹೆಚ್ಚು ಒತ್ತು ಕೊಟ್ಟಿದ್ದಾರಂತೆ. ಕಳೆದ ವರ್ಷ ಯೋಗರಾಜ್ ಭಟ್ಟರ 'ಗಾಳಿಪಟ'ಕ್ಕಾಗಿ ಮೊದಲ ಬಾರಿಗೆ ಕನ್ನಡ ಚಿತ್ರರಂಗದಲ್ಲಿ ಸೂಪರ್ 35 ಕ್ಯಾಮೆರಾವನ್ನು ಉಪಯೋಗಿಸಲಾಗಿತ್ತು. ಆದರೆ 'ಮಿಂಚಿನ ಓಟ'ಕ್ಕಾಗಿ ಒಂದಲ್ಲಾ, ಎರಡಲ್ಲಾ, ಒಟ್ಟು ನಾಲ್ಕು ಸೂಪರ್ 35 ಕ್ಯಾಮೆರಾಗಳನ್ನು ಬಳಸಿದ್ದಾರಂತೆ. ಇಂತಹ ಸೂಪರ್ ಕ್ಯಾಮರಾಗಳ ಎರಡು ತಿಂಗಳ ಬಾಡಿಗೆಯೇ ಅರವತ್ತು ಲಕ್ಷವಾಗಿದೆಯಂತೆ. ಅಂದಹಾಗೆ 'ನಿಷ್ಕರ್ಷ', 'ತರ್ಕ', 'ಎಕೆ 47' ಸೇರಿದಂತೆ ಕನ್ನಡದ ಸುಮಾರು ಮೂವತ್ತು ಸಿನಿಮಾಗಳಲ್ಲಿ ಛಾಯಾಗ್ರಾಹಕರಾಗಿ ದುಡಿದಿರುವ ರಾಜನ್ ಈ ಚಿತ್ರಕ್ಕೂ ಕ್ಯಾಮೆರಾ ಹಿಡಿದಿದ್ದಾರೆ.

ಈ ಚಿತ್ರದ ಹೊಡೆದಾಟದ ದೃಶ್ಯಗಳೂ ಮಾಮೂಲಿ ಸ್ಟಂಟ್ ನಂತಿಲ್ಲದೆ ನಿಜವಾಗಿಯೂ ಮುಖಾಮುಖಿ ಚಚ್ಚಿಕೊಂಡು ಬಡಿದಾಡಿದ್ದಾರಂತೆ. ಬೆಂಗಳೂರು-ಮಂಗಳೂರು ನಡುವೆ ನಡೆಯುವ ಲಾರಿ ಮತ್ತು ಕಾರ್ ಚೇಸಿಂಗ್ ದೃಶ್ಯ ನ್ಯಾಚುರಲ್ ಆಗಿ ಮೂಡಿಬರಲೆಂದು ಯಾರಿಗೂ ಗೊತ್ತಾಗದ ಹಾಗೆ ಕ್ಯಾಮೆರಾಗಳನ್ನು ಅಳವಡಿಸಿ ಚೇಸಿಂಗ್ ದೃಶ್ಯಗಳನ್ನು ಚಿತ್ರೀಕರಿಸಿದ್ದಾರಂತೆ.

ಸಹೋದರರ ಭವಿಷ್ಯ

ವಿಜಯರಾಘವೇಂದ್ರ ಮತ್ತು ಮುರಳಿ ಇಬ್ಬರೂ ಪ್ರತಿಭಾವಂತ ನಟರೇ. ಆದರೆ ಇವರ ನಸೀಬು ಸರಿಯಿಲ್ಲವೋ ಅಥವಾ ಇವರ ಆಯ್ಕೆಯಲ್ಲಿನ ತಪ್ಪೋ? ಆರಂಭದ ಒಂದೆರಡು ಚಿತ್ರಗಳನ್ನು ಬಿಟ್ಟರೆ ಈ ಸಹೋದರರಿಬ್ಬರೂ ನಟಿಸಿದ ಬಹುತೇಕ ಎಲ್ಲ ಸಿನಿಮಾಗಳೂ ಕಣ್ಮುಚ್ಚಿ ಪಾಚಿಕೊಂಡಿದ್ದೇ ಹೆಚ್ಚು. ಎಲ್ಲೋ ಕೆಲ ಸಿನಿಮಾಗಳನ್ನು ಹೊರತುಪಡಿಸಿದರೆ ಇವರಿಬ್ಬರಿಗೂ ದೊರೆತದ್ದು ಲಡಾಸು ಸಿನಿಮಾಗಳ ಅಡಾಸು ಪಾತ್ರಗಳೇ.

ಈಗ ಈ ಸಹೋದರರಿಗೆ ಗೆಲ್ಲಲೇಬೇಕಾದ ಅನಿವಾರ್ಯತೆಯಿದೆ. ರಮೇಶ್‌ಗೂ ಅಷ್ಟೇ: 'ಸಂತೋಷ' ಸೋಲಿನ ನಂತರ ದೊರೆತ 'ಸೈನೆಡ್'ನ ಯಶಸ್ಸು ಪವಾಡವಲ್ಲ, ನಿಜಕ್ಕೂ ತಾನೊಬ್ಬ ಪ್ರತಿಭಾವಂತ ಎಂಬುದನ್ನು ಗ್ಯಾರಂಟಿಗೊಳಿಸುವ ದೊಡ್ಡ ಜವಾಬ್ದಾರಿಯಿದೆ.

ರಮೇಶ್ ತನ್ನ ವೃತ್ತಿಜೀವನದ ಗಾಡ್ ಫಾದರ್ ಸಾರಾ ಗೋವಿಂದು ಅವರಿಂದ ಒಂದೇ ಒಂದು ರೂಪಾಯಿಯ ಸಂಭಾವನೆಯನ್ನೂ ಪಡೆಯದೆ, ಇಷ್ಟೆಲ್ಲಾ ರಿಸ್ಕ್‌ಗಳನ್ನು ತೆಗೆದುಕೊಂಡು 'ಮಿಂಚಿನ ಓಟ' ಚಿತ್ರವನ್ನು ಮಾಡಿದ್ದಾರೆ. ಆದರೆ ಬಾಕ್ಸ್ ಆಫೀಸಿನಲ್ಲಿ ಇದು ಓಡುತ್ತಾ ಎಂಬುದೇ ಪ್ರಶ್ನೆಯಾಗಿದೆ.

ಜೈ ಭೀಮ್ ಅಂಬೇಡ್ಕರ್!



ಕನ್ನಡ ಚಿತ್ರರಂಗದ ರಂಗುರಂಗಾದ ನಟ ರಂಗಾಯಣದ ರಘು ಅವರ ವೃತ್ತಿ ...ೀವನದಲ್ಲಿ 'ದುನಿಯಾ'ದ ನಂತರ 'ಮಿಂಚಿನ ಓಟ' ಕೂಡ ಒಂದು ಹೊಸ ...ಲಿಗಲ್ಲಾಗಲಿದೆ ಎಂಬುದು ನಿರ್ದೇಶಕ ರಮೇಶ್ ಅಭಿಪ್ರಾಯ.

'ದುನಿಯಾ'ದ ನಿರ್ದೇಶಕ ಸೂರಿ ರಘು ಬಾಯಲ್ಲಿ 'ಪೌಡ್ರಾಕಳಿ-ತಲೆ ಬಾಚ್ಕಳಿ, ಜೈ ...ರ್ನಾಟಕಮಾತೆ ಟಿಪ್ಪು ಸುಲ್ತಾನ್ ವಂದೇ ಮಾತರಂ...!' ಎಂಬ ಅರ್ಥ ತರ್ಕವಿಲ್ಲದ ...ಲನ್ನು ಹೇಳಿಸಿದ್ದರು. ಆದರೂ ಆ ಸಾಲು ಬಹಳ ಜನಪ್ರಿಯವಾಗಿದ್ದವು. ಈಗ ...ಮೇಶ್‌ರವರು ರಘು ಬಾಯಲ್ಲಿ 'ಜೈ ಭೀಮ್ ಅಂಬೇಡ್ಕರ್' ಎನಿಸಿದ್ದಾರೆ. ಅದೂ ...ನಪ್ರಿಯವಾಗಲಿದೆಯೇ? ಕಾದು ನೋಡೋಣ!

ಚಿತ್ರರಂಗದಲ್ಲಿ ನೆಲೆನಿಂತವರು, ನಿಲ್ಲಲು ಯತ್ನಿಸುತ್ತಿರುವವರಲ್ಲಿ ಒಬ್ಬೊಬ್ಬರದೂ ಒಂದೊಂದು ಕಥೆ, ವಿಚಿತ್ರವಾದ ಫ್ಲಾಶ್ ಬ್ಯಾಕ್‌ಗಳು. ಈ 'ಸೈನೆಡ್' ರಮೇಶ್‌ರದ್ದು ಕೂಡಾ 'ಓಟ'ದ ಕತೆಯೇ.



ರಮೇಶ್ ಬೆಂಗಳೂರಿನ ಬಸವನಗುಡಿಯಲ್ಲಿ ಹುಟ್ಟಿ ಬೆಳೆದವರು. ತಂದೆ ಎಚ್‌ಎಂಟಿಯಲ್ಲಿ ಡ್ರೈವರ್ ಆಗಿದ್ದರಿಂದ ಮನೆಯಲ್ಲಿ ಆರ್ಥಿಕ ದೌರ್ಬಲ್ಯತೆ ಕಾಡುತ್ತಿತ್ತು. ಬಿಎಚ್‌ಎಸ್ ಕಾಲೇಜಿನಲ್ಲಿ ಓದು ಮುಗಿಸಿ ಸುಮ್ಮನೆ ಅಲೆದಾಡುತ್ತಿದ್ದ ಮಗನೂ ತನ್ನಂತೆಯೇ ದುಡಿಯಲಿ ಎಂಬುದು ತಂದೆಯ ಆಸೆ. ಒಂದು ದಿನ ತಂದೆ ಕೆಲಸ ಮಾಡುತ್ತಿದ್ದ ಎಚ್‌ಎಂಟಿ ಕಾರ್ಖಾನೆಯಿಂದಲೇ ಅರ್ಜಿಯೊಂದನ್ನು ತಂದು "ನಾಳೆ ಈ ಅರ್ಜಿ ಸಲ್ಲಿಸಿ ಕೆಲಸಕ್ಕೆ ಸೇರು" ಎಂದರಂತೆ. ಇದಕ್ಕೆ ಒಪ್ಪಿ ತಲೆ ಅಲ್ಲಾಡಿಸಿದ ಮಗ ಬೆಳಗಾಗುವುದರೊಳಗೆ ಮನೆಯಿಂದಲೇ ನಾಪತ್ತೆ! ಈ ಹುಚ್ಚು ಹುಡುಗ ಹೀಗೆ ಏಕಾಏಕಿ ಓಡಿ ಹೋಗಿದ್ದಾದರೂ ಎಲ್ಲಿಗೆ?


ಸಿನಿಮಾ ಎಂಬ ದೆವ್ವ ರಮೇಶ್ ಮನಸ್ಸನ್ನು ಬಗಾ ಬಗ್ಗನೆ ಹಿಡಿದು ಕುಂತಿದ್ದರಿಂದ ರಾತ್ರೋರಾತ್ರಿ ಮನೆಯಿಂದ ಪರಾರಿಯಾದ ರಮೇಶ್ ಸೀದಾ ಹೋಗಿ ಸೇರಿದ್ದು ಮದ್ರಾಸಿನ ಫಿಲ್ಮ್ ಇನ್ಸ್‌ಟಿಟ್ಯೂಟ್‌ಗೆ. ಅಲ್ಲಿ ನಿರ್ದೇಶನದ ತರಬೇತಿಯನ್ನು ಕಲಿತರಲ್ಲದೆ ಗೋಲ್ಡ್‌ಮೆಡಲನ್ನೂ ಪಡೆದರು. ಅದಾದನಂತರ ತಮಿಳಿನ ಐದಾರು ಮೆಗಾ ಧಾರಾವಾಹಿಗಳಲ್ಲಿ ದುಡಿದು ಸುಮಾರು ಎಂಟು ವರ್ಷದ ಅನುಭವದ ನಂತರ ಮತ್ತೆ ಕರ್ನಾಟಕಕ್ಕೆ ಮರಳಿದರು. ಇಲ್ಲಿ ಬಂದನಂತರ ಹಲವಾರು ಚಿತ್ರಗಳಿಗೆ ಅಸೋಸಿಯೇಟ್ ಆಗಿ ದುಡಿದರು.

ಕಡೆಗೆ ಸ್ವಂತ ನಿರ್ದೇಶನ ಮತ್ತು ನಿರ್ಮಾಣಕ್ಕೆ ಕೈಹಾಕಿದ ರಮೇಶ್ 'ಸಂತೋಷ' ಎಂಬ ಚಿತ್ರವನ್ನು ತೆಗೆದರು. ಆದರೆ ಅದಕ್ಕೆಂದು ಅವರು ಐವತ್ತು ಲಕ್ಷ ಬೆಲೆ ಬಾಳುವ ಬಂಗಾರದಂಥ ಮನೆಯನ್ನು ಮಾರಿಕೊಂಡು ಮೊದಲ ಪ್ರಯತ್ನದಲ್ಲೇ ಕಹಿ ಅನುಭವಿಸಿದರು. ಏನಾದರೇನು ಈ ಚಿತ್ರರಂಗವೆಂಬ ಮಾಯಾಂಗನೆಯ ಮೋಹದಿಂದ ಕಳಚಿಕೊಳ್ಳುವುದು ಅಷ್ಟು ಸುಲಭದ ಮಾತಲ್ಲವಲ್ಲಾ? ನಂತರ ರಮೇಶ್ ಮಾಡಿದ ಚಿತ್ರವೇ 'ಸೈನೆಡ್'. ಈ ಚಿತ್ರ ರಮೇಶರನ್ನು ಗೆಲುವಿನ ಅಲೆಯಲ್ಲಿ ತೇಲಿಸಿತು.

ಸದ್ಯಕ್ಕೆ 'ಮಿಂಚಿನ ಓಟ' ಮುಗಿಸಿರುವ ರಮೇಶ್ 'ದಸರಾ' ಎಂಬ ಕಾಮಿಡಿ ಸಬ್ಜೆಕ್ಟನ್ನೂ, 'ಹಂಸಗೀತೆ' ಎಂಬ ಪ್ರೇಮಕಥೆಯನ್ನೂ, 'ಮರ್ಸಿಕಿಲ್ಲಿಂಗ್' ಎಂಬ ಥ್ರಿಲ್ಲಿಂಗ್ ಚಿತ್ರದ ಕಥೆಗಳನ್ನೂ ರೆಡಿ ಮಾಡಿಟ್ಟುಕೊಂಡಿದ್ದಾರೆ. ಜೊತೆಗೆ ಕಾಡುಗಳ್ಳ ವೀರಪ್ಪನ್‌ನನ್ನು ಮತ್ತೊಮ್ಮೆ ಬೆಳ್ಳಿತೆರೆಗೆ ಎಳೆತರುವ ಅವರ ಕನಸೂ ಇನ್ನೂ ಜೀವಂತವಾಗೇ ಇದೆ. ಇದೆಲ್ಲವರ ಜೊತೆಗೆ ಮಕ್ಕಳಿಗೋಸ್ಕರ ಸ್ಪೈಷಿ ಕಥೆಯನ್ನೂ ತಮ್ಮ ಬತ್ತಳಿಕೆಯಲ್ಲಿಟ್ಟುಕೊಂಡಿದ್ದಾರೆ.

ಆದರೆ ಅದೆಲ್ಲ ಅವಲಂಬಿಸಿರುವುದು 'ಮಿಂಚಿನ ಓಟ'ದ ಓಟದ ಮೇಲೆ!!

■ ಅರುಣ್ ಜಿ.



ಶಬ್ಧ ಮತ್ತು ನಿಶಬ್ಧ

ಇದು ನಟ ವಿಷ್ಣುವರ್ಧನ್ ಅವರಿಗೆ ಸಂಬಂಧಿಸಿದ ವಿಷಯವಾದರೂ ಅದನ್ನು ಹೇಳುವ ಮುನ್ನ ಬೇರೆಯವರಿಗೆ ಸಂಬಂಧಿಸಿದ ಒಂದು ವಿಷಯವನ್ನು ಹೇಳಬೇಕಿದೆ.

ನಮ್ಮ ದೇಶದ ಪ್ರಖ್ಯಾತ ಕಲಾವಿದರಲ್ಲಿ ಸತೀಶ್ ಗುಜ್ರಾಲ್ ಎಂಬುವವರು ಒಬ್ಬರು. ಇವರು ಮಾಜಿ ಪ್ರಧಾನಿ ಐ.ಕೆ.ಗುಜ್ರಾಲ್‌ರವರ ಸಹೋದರ ಕೂಡ. ಸತೀಶ್‌ರವರು ಚಿಕ್ಕವರಾಗಿದ್ದಾಗ ಅವರಿಗೆ ಕಾಯಿಲೆ ಬಂದಿದ್ದರ ಪರಿಣಾಮ ಅವರ ಕಿವಿಗಳು ದುರ್ಬಲಗೊಂಡು ಅವರು ಕಿವುಡರಾದರು. ಆದರೂ ಕುಂಚ ಮತ್ತು ಬಣ್ಣ ಹಿಡಿದ ಸತೀಶರು ಅಂತರರಾಷ್ಟ್ರೀಯ ಮಟ್ಟದಲ್ಲಿ ಅತ್ಯಂತ ಪ್ರತಿಭಾನ್ವಿತ ಕಲಾವಿದರಾಗಿ ಹೊಮ್ಮಿದರು. ಅವರ ಕಲಾಕೃತಿಗಳು ಇವತ್ತಿಗೂ ಲಕ್ಷಾಂತರ ರೂಪಾಯಿಗಳಿಗೆ ಮಾರಾಟವಾಗುತ್ತವೆ.

ಆದರೆ ಕಿವುಡುತನ ಎಂಬ ಅಂಗವಿಕಲತೆಯಿಂದ ಹೊರಬರಲು ಅವರು ಒಮ್ಮೆ ಶಸ್ತ್ರ ಚಿಕಿತ್ಸೆ ಪಡೆದರು. ಅದು ಯಶಸ್ವಿಯಾಗಿ ಸತೀಶರಿಗೆ ಮತ್ತೆ ಕೇಳಿಸುವಂತಾಯಿತು. ವಿಚಿತ್ರವೆಂದರೆ, ಅಷ್ಟು ವರ್ಷಗಳ ಕಾಲ ನಿಶಬ್ಧತೆಯಲ್ಲೇ ಕಳೆದಿದ್ದ ಅವರಿಗೆ ಈ ಸದ್ದುಗದ್ದಲಗಳ ಜಗತ್ತು ಅಪರಿಚಿತವೆನ್ನಿಸಿ, ತಮ್ಮ ಚಿಂತನಾ ಲಹರಿಗೆ ಅಡ್ಡಬರುತ್ತಿರುವ ಅರ್ಥವಿಲ್ಲದ ಶಬ್ಧಗಳೆನ್ನಿಸಿ ಅದರಿಂದ ಮುಕ್ತಿ ಪಡೆಯಬಯಸಿದರು. ಮತ್ತೆ ಚಿಕಿತ್ಸೆ ಪಡೆದು ನಿಶಬ್ಧದ ಜಗತ್ತಿಗೆ ಹಿಂದಿರುಗಿದರು!

ಆದರೆ ನಟರ ಬದುಕು ಹಾಗಿರುವುದಿಲ್ಲ. ಅವರ ಪ್ರತಿಯೊಂದು ಚಲನವಲನವೂ ಅವರ ಅಭಿಮಾನಿಗಳನ್ನು ಮನಸ್ಸಿನಲ್ಲಿ ಇಟ್ಟುಕೊಂಡೇ ನಡೆದಿರುತ್ತದೆ. ಉದಾಹರಣೆಗೆ ತಮಿಳುನಾಡಿನ ಎಂಜಿಆರ್ ಅವರನ್ನೇ ತೆಗೆದುಕೊಳ್ಳಿ. ಅವರು ಅಂದಕಾಲತ್ತಿಲ್ ನಟನಾಗಿದ್ದರೂ ಅವರ ಅಭಿಮಾನಿಗಳ ಪಾಲಿಗೆ ಆರಾಧ್ಯ ದೈವವೇ ಆಗಿದ್ದರು. ಎಂಜಿಆರ್‌ಗೆ ವಯಸ್ಸಾಗಿದ್ದರೂ, ತಲೆ ಬೋಳಾಗಿದ್ದರೂ ಅವರನ್ನು ಹಾಗೆ ನೋಡಲು ಜನ ಇಷ್ಟಪಡಲಿಲ್ಲ, ಅದನ್ನು ಬಹಿರಂಗಪಡಿಸಲು ಸ್ವತಃ ಎಂಜಿಆರ್ ಮುಂದಾಗಲಿಲ್ಲ. ಆದ್ದರಿಂದ ಅವರು ತಮ್ಮ ಆಪ್ತರಿಗೆ ಒಂದು ಮಾತನ್ನು ಹೇಳಿದ್ದರು. ಅದೇನೆಂದರೆ "ನಾನು ಸತ್ತ ನಂತರ ನನ್ನನ್ನು ದಫನ್ ಮಾಡುವಾಗಲೂ ನನ್ನ ಕಣ್ಣ ಮೇಲಿರುವ ಕಪ್ಪು ಕನ್ನಡಕವನ್ನು ಮತ್ತು ತಲೆ ಮೇಲಿರುವ ಟೋಪಿಯನ್ನು ತೆಗೆಯಬಾರದು" ಎಂಬುದು. ಹೀಗಾಗಿ ಎಂಜಿಆರ್ ನಿಧನ ಹೊಂದಿದಾಗ ಅವರನ್ನು ಕಪ್ಪು ಕನ್ನಡಕ ಮತ್ತು ಟೋಪಿ ಸಮೇತ ಬೀಳ್ಕೊಡಲಾಗಿತ್ತು. ಇದರ ಭಾವಾರ್ಥ ಇಷ್ಟೇ. ಟೋಪಿ ಮತ್ತು ಕನ್ನಡಕವಿಲ್ಲದ ಎಂಜಿಆರ್‌ರನ್ನು ಊಹಿಸಲೂ ಅವರ ಅಭಿಮಾನಿಗಳಿಂದ ಅಸಾಧ್ಯವಾಗಿದ್ದರಿಂದ ಅವರಿಗೆ ಬೇಸರವಾಗಬಾರದೆಂದು ಹೀಗೆ ಮಾಡಲಾಗಿತ್ತು.

ಈಗ ವಿಷ್ಣು ವಿಷಯಕ್ಕೆ ಬರೋಣ. ಮೊನ್ನೆ 'ನಮ್ಮ ಯಜಮಾನ್ರು' ಚಿತ್ರದ ಸೆಟ್‌ನಲ್ಲಿ ಪತ್ರಕರ್ತರೊಂದಿಗೆ ಮಾತನಾಡುತ್ತಾ "ಕಳೆದ ಎರಡು ವರ್ಷಗಳಿಂದ ನನಗೆ ಎಡಕಿವಿ ಕೇಳಿಸುತ್ತಿಲ್ಲ. ನಾನೀಗ ಅರ್ಧ ಕಿವುಡಾಗಿದ್ದೇನೆ" ಎಂದು ಬಹಿರಂಗಪಡಿಸಿದರು. ೨೦೦೬ರಲ್ಲಿ 'ನೀನೆಲ್ಲೋ ನಾನಲ್ಲೇ' ಚಿತ್ರೀಕರಣ ಸಂದರ್ಭದಲ್ಲಿ ಮೊದಲ ಬಾರಿಗೆ ಅವರಿಗೆ ಈ ಸಮಸ್ಯೆಯ ಅರಿವಾಯಿತಂತೆ. ಅನಂತರ ಅನೇಕ ತಜ್ಞ ವೈದ್ಯರ ಬಳಿ ಚಿಕಿತ್ಸೆಯನ್ನು ಪಡೆದುಕೊಂಡರೂ ಏನೂ ಪ್ರಯೋಜನವಾಗಲಿಲ್ಲವಂತೆ. ಹೀಗಾಗಿ ಇನ್ನು ಮುಂದೆ ಒಂದೇ ಕಿವಿಯಲ್ಲಿ ಕೇಳಿಸಿಕೊಳ್ಳುತ್ತಾ ತಮ್ಮ ಜೀವನವನ್ನು ಮುಂದುವರೆಸಲು ವಿಷ್ಣುವರ್ಧನ್ ನಿರ್ಧರಿಸಿದ್ದಾರೆ. ಈ ವಿಷಯವನ್ನು ವಿಷ್ಣು ಗುಪ್ತವಾಗಿಡಬಹುದಿತ್ತು. ಆದರೆ ಅವರೇ ಹೇಳಿದಂತೆ "ನಾನು ಎಷ್ಟು ದಿನ ಅಂತ ಈ ವಿಷಯವನ್ನು ಮುಚ್ಚಿಡಲು ಸಾಧ್ಯ? ಇಷ್ಟಕ್ಕೂ ಈ ಸುದ್ದಿಯನ್ನು ಮುಚ್ಚಿಟ್ಟು ನಾನು ಸಾಧಿಸುವುದಾದರೂ ಏನನ್ನು?"

ನಟನಾಗಿದ್ದರೂ ಯಾವುದೇ ಗುಟ್ಟನ್ನು ಮುಚ್ಚುಮರೆ ಮಾಡದೇ ತೆರೆದ ಮನಸ್ಸಿನಿಂದ ಇದನ್ನು ವಿಷ್ಣು ಹೇಳಿಕೊಂಡಿರುವುದು ಅಚ್ಚರಿ ಹುಟ್ಟಿಸುತ್ತಿದೆ. ಆದರೂ ವಿಷ್ಣುರವರ ಈ ಪ್ರಾಮಾಣಿಕತೆಯನ್ನು ಮೆಚ್ಚಬೇಕು.

ಓರ್ವ ಉತ್ತಮ ಕಲಾವಿದನಿಗೆ ಇಂತಹ ಅಂಗವೈಕಲ್ಯ ದೊಡ್ಡ ಸವಾಲಲ್ಲ. ಅದಕ್ಕೆ ಅತ್ಯಂತ ಉತ್ತಮ ಉದಾಹರಣೆಯೆಂದರೆ ಎರಡೂ ಕಿವಿಗಳಲ್ಲಿ ಕಿವುಡಾಗಿದ್ದ ಹಿರಿಯ ನಟ ಬಾಲಣ್ಣ. ಇಂತಹ ದೌರ್ಬಲ್ಯದ ನಡುವೆಯೂ ಅವರು ಸಹನಟರ ತುಟಿಯ ಚಲನವಲನಗಳನ್ನು ಗಮನಿಸುತ್ತಾ ತಮ್ಮ ಜೀವನದ ಕೊನೆಯವರೆಗೂ ನಟಿಸುತ್ತಿದ್ದರು.

ಆದರೂ ವಿಷ್ಣುರವರ ಅಭಿಮಾನಿಗಳಿಗೆ ಇದೊಂದು ನೋವಿನ ಸುದ್ದಿ ಎಂಬುದಂತೂ ಸತ್ಯ.

■ ಶೇಷ್ಕ

R B P LANKESH, Kannada Weekly Price Rs. 12/- 16-7-2008 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore-4

ಪ್ರಿಯಾಂಕಾ ಯಾಕೆ ನಟಿಸುತ್ತಿಲ್ಲ?





ಹುಚ್ಚ-ಕಿಚ್ಚ ಜೋಡಿ!

ಕನ್ನಡ ಚಿತ್ರರಂಗದ ಬಹುತೇಕ ನಾಯಕ ನಟರು ಈಗ ಕಳಾಹೀನರಾಗಿರುವುದರಿಂದ ಅವರಲ್ಲಿ ಒಬ್ಬರನ್ನು ಮಾತ್ರ ಹಾಕಿಕೊಂಡು ಸಿನಿಮಾ ನಿರ್ಮಿಸಲು ಯಾರೂ ಮುಂದೆ ಬರುತ್ತಿಲ್ಲ. ಬದಲಾಗಿ ಇಬ್ಬರು ನಾಯಕರನ್ನು ಹಾಕಿಕೊಂಡಾದರೂ ಚಿತ್ರ ಓಡಬಹುದೆಂಬ ಲೆಕ್ಕಾಚಾರದಲ್ಲಿ ನಿರ್ಮಾಪಕರು ಇರುವಂತಿದೆ. ಅಂತಹವರಲ್ಲಿ ಒಬ್ಬರಾದ ಕೆ.ಸಿ.ಎನ್. ಕುಮಾರ್ ಸಧ್ಯದಲ್ಲೇ ಉತ್ತರ-ದಕ್ಷಿಣದಂತಿರುವ ಉಪೇಂದ್ರ ಮತ್ತು ಸುದೀಪ್‌ರನ್ನು ಹಾಕಿಕೊಂಡು ಸಿನಿಮಾ ಮಾಡಲು ಹೊರಟಿರುವ ಸುದ್ದಿ ಗಾಂಧಿನಗರದಿಂದ ಕೇಳಿಬರುತ್ತಿದೆ. ಆದರೆ ಈ ಯೋಜನೆಗೆ ಕುಮಾರ್ ಆಯ್ಕೆ ಮಾಡಿಕೊಂಡಿರುವುದು ಸುಮಾರು ಮೂರು ದಶಕಗಳ ಹಿಂದೆ ಮಣಿರತ್ನಂ ನಿರ್ದೇಶಿಸಿದ್ದ 'ಅಗ್ನಿನಕ್ಷತ್ರಂ' ಚಿತ್ರವನ್ನು. ಆ ಚಿತ್ರದ ಕಥೆಯನ್ನು ಶೇ. 40ರಷ್ಟು ಬದಲಾಯಿಸಿ ಹೊಸ ರೂಪದಲ್ಲಿ ಕನ್ನಡದಲ್ಲಿ ತರಲು ಅವರು ನಿರ್ಧರಿಸಿದ್ದಾರೆ. ಹಳೇ ಕತೆ, ಹಳೇ ನಟರು, ಹಳೇ ಚಿತ್ರ.... ಏನಾಗಬಹುದು ಎಂದು ಈಗಲೇ ಊಹಿಸಬಹುದಲ್ಲವೇ?



ಟಯರ್ಡ್ ಬಟ್ ನಾಟ್ ರಿಟೈರ್ಡ್

ಎಸ್. ನಾರಾಯಣ್ ಇತ್ತೀಚೆಗೆ ಕ್ರೇಜಿ ಸ್ಟಾರ್ ರವಿಚಂದ್ರನ್ ಥರ ಚಿತ್ರದ ಎಲ್ಲಾ ವಿಭಾಗಗಳಲ್ಲೂ ಕೈಯಾಡಿಸಿ ತಾನು ಕೂಡ ಸಕಲಕಲಾವಲ್ಲಭನ್ ಎಂದೆನಿಸಿಕೊಂಡಿದ್ದರು. ಆದರೆ ಅವರು ಯಾವುದೇ ವಿಭಾಗದಲ್ಲೂ ಪ್ರಭುತ್ವವನ್ನು ಸಾಧಿಸಲಿಲ್ಲ ಎಂಬುದು ಬೇರೆ ಮಾತು. ಈಗ ಅವರ ಸಂಸ್ಥೆ ನಿರ್ಮಿಸುತ್ತಿರುವ ಹೊಸ ಚಿತ್ರದ ವಿವರಗಳನ್ನು ನೋಡಿದರೆ ನಾರಾಯಣ್ ಟಯರ್ಡ್ ಬಟ್ ನಾಟ್ ರಿಟೈರ್ಡ್ ಎಂಬ ಘಟ್ಟ ತಲುಪಿರುವಂತೆ ಭಾಸವಾಗುತ್ತದೆ.

ಜಗ್ಗೇಶ್ ಮತ್ತು ನಾರಾಯಣ್ ನಾಯಕ ನಟರಾಗಿರುವ 'ಚಿಕ್ಕಪೇಟೆ ಸಾಚಾ' ಎಂಬ ಚಿತ್ರವನ್ನು ನಾರಾಯಣ್ ನಿರ್ಮಿಸುತ್ತಿದ್ದಾರೆ ನಿಜ. ಆದರೆ ಅದರ ನಿರ್ದೇಶನದ ಜವಾಬ್ದಾರಿಯನ್ನು ನಾಗೇಂದ್ರ ಮಾಗಡಿ ಅವರಿಗೆ ನೀಡಿದ್ದಾರೆ ನಾರಾಯಣ್. ಅಷ್ಟೇ ಅಲ್ಲ, ಇದರ ಕಥೆ ಕೂಡಾ ರಿಚರ್ಡ್ ಲೂಯಿಸ್ ಅವರದ್ದು. ತಮ್ಮದೇ ಸಂಸ್ಥೆಯ ಚಿತ್ರದ ಕತೆ, ಚಿತ್ರಕತೆ, ಸಂಭಾಷಣೆ ಮತ್ತು ನಿರ್ದೇಶನದ ಜವಾಬ್ದಾರಿಯಿಂದ ಜಾರಿಕೊಂಡಿರುವ ನಾರಾಯಣ್ ಸುಸ್ತಾದ ಸೈನಿಕನಂತೆ ಕಾಣಿಸುತ್ತಾರಲ್ಲವೇ?




ಉಪ್ಪಿಯನ್ನು ಮದುವೆಯಾದ ನಂತರ ನಟಿ ಪ್ರಿಯಾಂಕಾ ಕನ್ನಡ ಚಿತ್ರಗಳಲ್ಲಿ ಯಾಕೆ ನಟಿಸುತ್ತಿಲ್ಲ? ಈ ಪ್ರಶ್ನೆಯನ್ನು ಮೊನ್ನೆ ಯಾರೋ ಪ್ರಿಯಾಂಕಾಳನ್ನು ಕೇಳಿದರು. ಅದಕ್ಕೆ ಕಾರಣವೂ ಇತ್ತು. ಈಗ ಇಬ್ಬರು ಮಕ್ಕಳ ತಾಯಿಯಾಗಿರುವ ಪ್ರಿಯಾಂಕಾ ಇನ್ನೂ ಸುಂದರವಾಗಿದ್ದಾರಲ್ಲದೆ, ತಮ್ಮ ಮೈಕಟ್ಟನ್ನೂ ಜೋಪಾನವಾಗಿ ಕಾಪಾಡಿಕೊಂಡಿದ್ದಾರೆ. ಅಷ್ಟೇ ಅಲ್ಲ, ಆಕೆ ವರ್ಷಕ್ಕೊಂದು ಅಥವಾ ಎರಡು ಬೆಂಗಾಲಿ ಚಿತ್ರಗಳಲ್ಲಿ ನಟಿಸುತ್ತಲೇ ಇದ್ದಾಳೆ. ಆದರೆ ಕನ್ನಡ ಚಿತ್ರಗಳತ್ತ ಮಾತ್ರ ಆಕೆ ಸುಳಿದಿಲ್ಲ.

ಆಕೆಯನ್ನು ಇದರ ಬಗ್ಗೆ ಪ್ರಶ್ನಿಸಿದಾಗ ಆಕೆ ಎಂತಹ ಜಾಣ ಉತ್ತರ ಕೊಟ್ಟಿದ್ದಾಳೆ ಗೊತ್ತಾ? "ಕನ್ನಡದಲ್ಲಿ ನನ್ನ ವೃತ್ತಿ ಜೀವನ ಆರಂಭವಾಗಿದ್ದೇ ಉಪೇಂದ್ರ ನಿರ್ದೇಶನದ ಚಿತ್ರದಿಂದ. ಹೀಗಾಗಿ ನನ್ನ ಎರಡನೇ ಇನ್ನಿಂಗ್ಸ್ ಕೂಡಾ ಉಪೇಂದ್ರ ನಿರ್ದೇಶನದ ಚಿತ್ರದಿಂದಲೇ ಆಗಬೇಕೆಂಬುದು ನನ್ನ ಆಸೆ" ಎಂದಿದ್ದಾಳೆ.

ಆದರೆ ಬರೀ ರಿಮೇಕ್ ಚಿತ್ರಗಳ ನಿರ್ಮಾಪಕರಿಗೆ ತನ್ನ ಕಾಲ್‌ಶೀಟನ್ನು ಕಳ್ಳೇಪುರಿಯಂತೆ ಹಂಚಿರುವ ಉಪ್ಪಿ ಸದ್ಯದಲ್ಲೇ ಚಿತ್ರ ನಿರ್ದೇಶಿಸುವ ಸಾಧ್ಯತೆಗಳಿಲ್ಲ. ಈಗಾಗಲೇ ತಾಯಿಯಾಗಿರುವ ಆಕೆಯನ್ನು ಬೇರೆ ನಟರೊಂದಿಗೆ ಹಾಕಿಕೊಳ್ಳಲು ಬೇರೆ ನಟರಾಗಲಿ, ನಿರ್ಮಾಪಕರಾಗಲಿ, ನಿರ್ದೇಶಕರಾಗಲಿ ಮುಂದೆ ಬರುವುದಿಲ್ಲ. ಅಷ್ಟೇ ಅಲ್ಲ, ಸ್ವತಹಃ ಉಪ್ಪಿ ಕೂಡ ತನ್ನ ಹೆಂಡತಿಯೊಂದಿಗೆ ನಟಿಸಲು ಒಪ್ಪುವ ಸಾಧ್ಯತೆಗಳೂ ಕಡಿಮೆಯೇ. ಈ ಮಧ್ಯೆ ಆಕೆ ತಾಯಿ ಮತ್ತು ಅಕ್ಕನ ಪಾತ್ರದಲ್ಲಿ ಕಾಣಿಸಿಕೊಳ್ಳುವುದೂ ಸಾಧ್ಯವಿಲ್ಲ......

ಅಲ್ಲಿಗೆ ಪ್ರಿಯಾಂಕಾ ಮತ್ತೆ ಕನ್ನಡ ಚಿತ್ರದಲ್ಲಿ ನಟಿಸುವ ಚಾನ್ಸ್ ಇಲ್ಲವೇ ಇಲ್ಲ ಎಂದಾಯಿತು. ಆದ್ದರಿಂದ ಉಪ್ಪಿ-ಪ್ರಿಯಾಂಕಾ ತಮ್ಮ ಮನೆಯಲ್ಲಿ ಮೇಡ್ ಫಾರ್ ಈಚ್ ಅದರ್ ಜೋಡಿ ಎಂದು ಎಲ್ಲರೂ ಸುಮ್ಮನಾದರೆ ವಾಸಿ.



ನಿರ್ದೇಶನದತ್ತ ದೊಡ್ಡಣ್ಣ



ಈ ವರ್ಷ ನಟ ದೊಡ್ಡಣ್ಣ ತಾನು ನಿರ್ದೇಶಕರಾಗುತ್ತಿರುವುದಾಗಿಯೂ, ಆದರೆ ತನ್ನ ನಿರ್ದೇಶನದ ಚಿತ್ರದಲ್ಲಿ ನಟಿಸುತ್ತಿಲ್ಲವೆಂದೂ ಘೋಷಿಸಿದ್ದಾರೆ.

ನೂರಾರು ಚಿತ್ರಗಳಲ್ಲಿ ನಟಿಸಿರುವ, ರಂಗಭೂಮಿಯ ಅಪಾರ ಅನುಭವ ಹೊಂದಿರುವ ದೊಡ್ಡಣ್ಣನವರಿಗೆ ನಿರ್ದೇಶನ ಕಬ್ಬಿಣದ ಕಡಲೆಯಾಗದು. ಆದರೂ ಅವರೇ ನಿರ್ದೇಶಿಸಲಿದ್ದಾರೆ ಎಂದರೆ ಆ ಚಿತ್ರದ ಬಗ್ಗೆ ಜನರ ನಿರೀಕ್ಷೆ ಸಹಜವಾಗಿಯೇ ಹೆಚ್ಚಾಗಿರುತ್ತದೆ. ಈ ಹಿಂದೆ ಅಂತಹ ನಿರೀಕ್ಷೆಯೇ ಜೈ ಜಗದೀಶ್, ವಿಜಯಲಕ್ಷ್ಮೀಸಿಂಗ್, ಶ್ರೀನಿವಾಸಮೂರ್ತಿ, ಶಿವಧ್ವಜ್ ಮೊದಲಾದವರಿಗೆ ಮುಳುವಾಗಿದ್ದೂ ಹೌದು. ಇದನ್ನೆಲ್ಲಾ ದೊಡ್ಡಣ್ಣ ಗಮನದಲ್ಲಿಟ್ಟುಕೊಂಡಿರಬೇಕಿದೆ.



'ಬಿಂದು ಬಳಗ' ಚಿತ್ರ ನಿರ್ಮಿಸುವ ಮುಖಾಂತರ ತನ್ನ ನಿಷ್ಠೆಯನ್ನು ಜಯನಗರದಿಂದ ಸದಾಶಿವನಗರಕ್ಕೆ ವರ್ಗಾಯಿಸಿದ್ದ ಸೂರಪ್ಪ ಬಾಬು ಈಗ ಚಿಂತಾಕ್ರಾಂತರಾಗಿದ್ದಾರೆ. ಈ ಚಿತ್ರದಲ್ಲಿ ಶಿವರಾಜ್‌ಕುಮಾರ್ ಅಭಿನಯಿಸಿದ್ದರೂ ಅದು ಬಾಕ್ಸಾಫೀಸಿನಲ್ಲಿ ಆರಂಭದಲ್ಲೇ ಮುಗ್ಗರಿಸಿದ್ದು ಸೂರಪ್ಪ ಬಾಬು ಚಿಂತೆಗೆ ಕಾರಣ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ ತಾನೆ?

"ಮುಂದೇನು" ಎಂಬ ಪ್ರಶ್ನೆಯನ್ನು ಈಗ ಎದುರಿಸುತ್ತಿರುವ ಬಾಬು ಈಗ ಜಯನಗರ ಮತ್ತು ಸದಾಶಿವನಗರ, ಇವೆರಡನ್ನು ಬಿಟ್ಟು ವಿಜಯನಗರದತ್ತ ಮುಖ ಮಾಡಿನಿಂತಿದ್ದಾರೆ ಎಂಬ ಸುದ್ದಿ ಗಾಂಧಿನಗರದಿಂದ ಕೇಳಿಬರುತ್ತಿದೆ. ಅದಕ್ಕೆ ಕಾರಣ ಗೋಲ್ಡನ್ ಸ್ಟಾರ್ ಗಣೇಶ್ ವಿಜಯನಗರದಲ್ಲಿ ವಾಸಿಸುತ್ತಿರುವುದು!

ಗಣೇಶನಿಗೆ ಈಗಾಗಲೇ ಅಡ್ವಾನ್ಸ್ ನೀಡಿರುವ ಸೂರಪ್ಪ ಬಾಬು ಈ ಬಾರಿಯಾದರೂ ಗೆಲುವು ತನ್ನದಾಗಲಿ ಎಂದು ಆಶಿಸುತ್ತಿದ್ದರೆ ಅಚ್ಚರಿ ಇಲ್ಲ ಬಿಡಿ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, B...
Fax : 26604536, E-mail :lankesh70@rediffmail.com, Printed at Rail...